₹ 5/-

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

Nesaru Tingalole Vol XXXII - 5 May 2014

PAGES 20



ಅಗಲಿದ ಮುಂಬಯಿಯ ಖ್ಯಾತ ಸಾಹಿತಿ
ಯಶವಂತ ಚಿತ್ತಾಲರಿಗೆ ಭಾವಪೂರ್ಣ ಶ್ರದ್ಧಾಂಜಲಿ

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

# ಅಸೋಸಿಯೇಷನ್‌ನಲ್ಲಿ ಶ್ರೀರಂಗರ ನಾಟಕೋತ್ಸವ



ಆದ್ಯ ರಂಗಾಚಾರ್ಯರ ಕನ್ನಡ ನಾಟಕೋತ್ಸವವು ತಾ. 18.04.2014ರಿಂದ ತಾ. 20.04.2014ರವರೆಗೆ ಮೈಸೂರು ಅಸೋಸಿಯೇಶನ್‌ನ ಸಭಾಗೃಹದಲ್ಲಿ ಅದ್ದೂರಿಯಿಂದ ಜರಗಿತು. ಖ್ಯಾತ ನಾಟಕಕಾರ ಶ್ರೀ ಅನಂತ ಗೂಡೂರು ನಾಟಕೋತ್ಸವವನ್ನು ದೀಪ ಪ್ರಜ್ವಲಿಸಿ ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಡಾ. ಉಷಾ ತಾಂಬೆ, ಅಖಿಲ ಭಾರತೀಯ ಮಹಾರಾಷ್ಟ್ರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಆಗಮಿಸಿದ್ದರು. ಶ್ರೀ ನಾರಾಯಣ್ ಜಾಗೀರ್‌ದಾರ್, ಉಪಾಧ್ಯಕ್ಷರು, ಮೈಸೂರು ಅಸೋಸಿಯೇಶನ್ ಇವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಡಾ. ಭರತ್‌ಕುಮಾರ್ ಪೊಲಿಪು, ಶ್ರೀ ಕೆ. ಮಂಜುನಾಥಯ್ಯ ಇವರು ಉಪಸ್ಥಿತರಿದ್ದರು.



ಮೊದಲನೆಯ ದಿನ ಕಲಾಭಾರತಿ, ಕರ್ನಾಟಕ ಸಂಘ, ಮುಂಬಯಿ ಇದರ ಕಲಾವಿದರು ಡಾ. ಭರತ್‌ಕುಮಾರ್ ಪೊಲಿಪು ಅವರ ನಿರ್ದೇಶನದಲ್ಲಿ ಶ್ರೀರಂಗರ 'ಗುಮ್ಮನೆಲ್ಲಿಹ ತೋರಮ್ಮ' ಎಂಬ ನಾಟಕವನ್ನು ಅಭಿನಯಿಸಿದರು.

ಎರಡನೇ ದಿನ ಸಹೃದಯರು ತಂಡ, ಧಾರವಾಡ ಇವರು ರವಿ ಕುಲಕರ್ಣಿ ಇವರ ನಿರ್ದೇಶನದಲ್ಲಿ ಶ್ರೀರಂಗರ 'ಕೇಳು ಜನುಮೇಜಯ' ನಾಟಕವನ್ನು ಅಭಿನಯಿಸಿದರು.

ಶ್ರೀರಂಗರ ನಾಟಕೋತ್ಸವದ ಮೂರನೆಯ ದಿನದಂದು ಮೈಸೂರು ಅಸೋಸಿಯೇಷನ್‌ನ ಲಲಿತ ಕಲಾ ವಿಭಾಗದವರು ಶ್ರೀರಂಗರ 'ಕತ್ತಲೆ –



ಬೆಳಕು' ನಾಟಕವನ್ನು ಆಡಿದರು. ಶ್ರೀರಂಗರ ಕ್ಲಿಷ್ಟ ನಾಟಕಗಳಲ್ಲಿ ಒಂದಾದ ಈ ನಾಟಕದ ಪ್ರಯೋಗ ಹಲವಾರು ಹೊಸ ಪ್ರಯತ್ನಗಳನ್ನು ಮುಂದಿಟ್ಟಿತು.

ನಾಟಕದೊಳಗಿನ ನಾಟಕಗಳನ್ನು ಈ ಪ್ರಯೋಗದಲ್ಲಿ ದೃಶ್ಯ ಮಾಧ್ಯಮದಲ್ಲಿಯೇ ಸಾಕಾರ ಮಾಡಲಾಯಿತು. ದುಷ್ಯಂತ–ಶಕುಂತಲೆ ಹಾಗೂ ಕೆಳದಿಯಣ ರಾಣಿ ನಂಬಯ್ಯನವರ ದೃಶ್ಯಗಳಾಗಲಿ ನಾಟಕದ ವಿಚಾರ ಮಂಡಿಕೆಯಲ್ಲಿ ಪೂರಕವಾದವು. ಅಂತೆಯೇ ಶ್ರೀರಂಗರ ನಾಗರಿಕನನ್ನು



ಇಂದಿನ ಆಮ್ ಆದ್ಮಿ ಮಾಡಿದುದು ಪ್ರಸ್ತುತವಾಗಿತ್ತು. ಕತ್ತಲೆ–ಬೆಳಕು ಜಗತ್ತಿನ ಜೀವಾಳ. ಇವುಗಳ ಘರ್ಷಣೆಗಳೇ ನಾಟಕಗಳಿಗೆ ಪೂರಕವಾಗ



ಬೇಕಲ್ಲದೆ, ಜನಪ್ರಿಯ ಕಥಾವಸ್ತುಗಳನ್ನು ಬಳಸುವುದು ಸಾಹಿತ್ಯದ ದುರ್ಬಲತೆಯನ್ನು ಸಾರುತ್ತದೆ ಎನ್ನುವುದು ಶ್ರೀರಂಗರ ಮತ. ಡಾ. ಮಂಜುನಾಥರ

(ಪುಟ 18ಕ್ಕೆ)

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್

393, ಭಾವು ದಾಜಿ ರಸ್ತೆ,

ಮಾಟುಂಗ,

ಮುಂಬಯಿ-400 019.

✆ 24024647 / 2403 7065

Fax : 2401 0574

Email :
mysoreassociation.mumbai@gmail.com

Website :
www.mysoreassociation.in

# ನೇಸರು
## ತಿಂಗಳೋಲೆ

**ಸಂಪುಟ 31** | **ಮೇ 2014** | **ಸಂಚಿಕೆ 5**

## ಅಪರೂಪದ ವ್ಯಕ್ತಿತ್ವ ಯಶವಂತ ಚಿತ್ತಾಲರದ್ದು

'ನಹಿ ಜ್ಞಾನೇನ ಸದೃಶಂ' ಜ್ಞಾನಕ್ಕೆ ಸಮಾನವಾದುದು ಯಾವುದೂ ಇಲ್ಲ – ಎಂಬ ಆದರ್ಶ ಧ್ಯೇಯ ನಮ್ಮದು. ಹಾಗಾಗಿ ಹೆಚ್ಚು ಹೆಚ್ಚು ಜ್ಞಾನವನ್ನು ಗಳಿಸಬೇಕು ಎಂಬುದನ್ನೇ ತಮ್ಮ ಜೀವನದ ಗುರಿಯನ್ನಾಗಿ ಇಟ್ಟುಕೊಂಡು ಅನೇಕ ಮಹನೀಯರು ಈ ನಾಡಿನಲ್ಲಿ ಶ್ರಮಿಸಿದ್ದಾರೆ. ಅವರಲ್ಲಿ ಯಶವಂತ ಚಿತ್ತಾಲರು ಒಬ್ಬರು. ಒಂದು ಚಿಕ್ಕ ಹಳ್ಳಿಯಿಂದ ನೂರಾರು ಕನಸುಗಳ ಹೊರೆಯನ್ನು ಹೊತ್ತುಕೊಂಡು ಮಾಯಾನಗರಿ ಮುಂಬಯಿಯತ್ತ ಸಾಗಿ ಬಂದವರು ಯಶವಂತ ಚಿತ್ತಾಲರು. ಇಲ್ಲಿನ ಬವಣೆಗಳೊಂದಿಗೆ ಸೆಣಸಾಡಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಗತಕಾಲದ ನೆನಪುಗಳೊಂದಿಗೆ ಹೊಸ ಅನುಭವಗಳನ್ನು ಪೋಣಿಸುತ್ತಾ ಹೋದರು. ಪ್ರತಿಯೊಬ್ಬ ಮನುಷ್ಯನ ವ್ಯಕ್ತಿತ್ವದ ಗುಣಲಕ್ಷಣಗಳು ಅವನ ಆಲೋಚನೆ, ಭಾವನೆ, ವರ್ತನೆಗಳ ಮೇಲೆ ನಿರ್ಭರವಾಗಿದೆ. ಅಂತಹ ಅಪರೂಪದ ವ್ಯಕ್ತಿತ್ವ ಚಿತ್ತಾಲರದ್ದು. ಚಿತ್ತಾಲರು ಅನೇಕ ಹಿರಿ– ಕಿರಿಯ ಲೇಖಕರಿಗೆ ಸ್ಫೂರ್ತಿಯ ಸೆಲೆಯಾಗಿದ್ದರು. ಚಿತ್ತಾಲರದು ಮಾನವತೆಗಾಗಿ ಮಿಡಿದ ಬದುಕು. ಸಾಹಿತ್ಯದಲ್ಲಿ ದಣಿವರಿಯದ ದುಡಿಮೆ ಅವರದು. ಕನ್ನಡ ಸಾಹಿತ್ಯ, ಭಾಷೆ, ಸಂಸ್ಕೃತಿಗೆ ಇರುವ ತೊಡಕುಗಳು, ಮಾನವನ ಸಮಸ್ಯೆ, ಅವನ ನೋವನ್ನು ನಿವಾರಿಸ ಹೊರಟ ಸಂಕಲ್ಪ, ಮನುಷ್ಯನ ವರ್ತನೆಯ ಹಿನ್ನೆಲೆ ಇವೆಲ್ಲವುಗಳೂ ಚಿತ್ತಾಲರ ಸಾಧನೆಯ ಗಾಥೆಗಳನ್ನು ಬಿಚ್ಚಿಡುತ್ತವೆ.


ಚಿತ್ತಾಲರದು ಆರಂಭದಿಂದಲೂ ಬಹುಮುಖ ವ್ಯಕ್ತಿತ್ವ, ಬಹುಶ್ರುತ ಪಾಂಡಿತ್ಯ. ಬೇಂದ್ರೆಯವರ ಒಂದು ಮಾತಿದೆ. "ಉಂಡಿಯನ್ನು ಯಾವ ಕಡೆಯಿಂದ ತಿಂದ್ರೂ ಅದು ಸಿಹಿನೇ. ಅಂತಹ ಅಪರೂಪದ ಗುಣವನ್ನು ನಾವು ಚಿತ್ತಾಲರಲ್ಲಿ ಕಾಣಬಹುದು. ಮುಂಬಯಿ ಕನ್ನಡ ಸಾಹಿತ್ಯಕ ರಂಗದಲ್ಲಿ ತೊಡಗಿಸಿಕೊಂಡು ತಮ್ಮ ಸಚ್ಚಾರಿತ್ರ್ಯದ ಪಾರದರ್ಶಕತೆಯಿಂದ ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ ಮೊದಲಾದ ಅನೇಕ ರಂಗದ ದಿಗ್ಗಜರುಗಳಿಂದ ಇವನಾರವ.. ಇವನಾರವ.. ಎಂದೆನ್ನಿಸಿಕೊಳ್ಳದೆ, ಇವ ನಮ್ಮವ ಇವ ನಮ್ಮವ ಎಂದೆನಿಸಿಕೊಂಡವರಂತೆ ಬದುಕಿ ಬಾಳಿದರು. ಯಶವಂತ ಚಿತ್ತಾಲರು ಒಂದು ರೀತಿಯಲ್ಲಿ ಮುಂಬಯಿ ಕನ್ನಡಿಗರ ಸೊತ್ತಾಗಿದ್ದರು. ಅಷ್ಟು ಪ್ರೀತಿ ಅವರ ಮೇಲೆ ಅವರ ಸಾಹಿತ್ಯ ಅಭಿಮಾನಿಗಳಿಗೆ.

ಕತೆಗಾರರಾದ ಚಿತ್ತಾಲರು ಮಾಸ್ತಿ ಪರಂಪರೆಯ ಉತ್ತರಾಧಿಕಾರಿಯೆನಿಸಿದರೂ ಅವರಿಗಿಂತ ವಿಭಿನ್ನವಾಗಿ ತಮ್ಮ ಬರವಣಿಗೆಯ ಶೈಲಿಯನ್ನು ರೂಡಿಸಿಕೊಂಡರು. ಕತೆಗಾರರಾಗಿ, ಕಾದಂಬರಿಕಾರರಾಗಿ ಕನ್ನಡಿಗರಲ್ಲಿ ಸಾಹಿತ್ಯ – ಸಂಸ್ಕೃತಿಗಳ ಹೊಸ ರುಚಿ – ಅಭಿರುಚಿಗಳನ್ನು ಬೆಳೆಸಿದವರು ಚಿತ್ತಾಲರು. ಇವರ ಸಾಧನೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿಗಳು ದಕ್ಕಿವೆ. ಯಾರೋ ಸಿದ್ಧಪಡಿಸಿಟ್ಟ ತೀರ್ಮಾನಗಳಿಗೆ ಸಹಿಯಿಕ್ಕುವ ಸ್ವಭಾವ ಚಿತ್ತಾಲರದ್ದಲ್ಲ. ಅವರ ಚಿಂತನೆಯಲ್ಲಿ ಜೀವನದ ಆಳವಾದ ಅನುಭವ ಸೇರಿಕೊಂಡಿದೆ. ಹೊರಗಿನ ಜೀವನಾನುಭವವನ್ನು ಒಳಗಿನ ಜೀವನಾನುಭವದೊಂದಿಗೆ ತುಲನೆ ಮಾಡಿ, ಇದು ಏಕೆ ಹೀಗಾಯಿತು ಎನ್ನುವುದನ್ನು ಶೋಧಿಸ ಹೊರಡುತ್ತಿದ್ದರು. ಚಿತ್ತಾಲರ ಯಾವತ್ತೂ ಕಾಡಿದ ಪ್ರಶ್ನೆಯೆಂದರೆ, ಮನುಷ್ಯ ಏಕೆ ಇಷ್ಟು ಕ್ರೂರಿ? ಅನಗತ್ಯವಾಗಿ ತನ್ನ ವರ್ಗದ ಸದಸ್ಯರನ್ನೆ ಕ್ರೂರ ಹಿಂಸೆಗೆ ಒಳಗು ಮಾಡುತ್ತಾನೆ ಏಕೆ?" ಎನ್ನುವುದು. ಇಲ್ಲಿ ಚಿತ್ತಾಲರು, ಎರಿಕ್ ಫ್ರಾಮ್ ಎನ್ನುವ ಮನೋವಿಜ್ಞಾನಿಯ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಾರೆ. "ಮನುಷ್ಯ ಸ್ವಭಾವತಃ ಕ್ರೂರಿಯಲ್ಲ. ಅವನು ಕಟ್ಟಿಕೊಂಡ ಸಾಮಾಜಿಕ ವ್ಯವಸ್ಥೆಯು ಅವನಲ್ಲಿ ಸ್ವತ್ತಿನ ಅಧಿಕಾರದ ದಾಹವನ್ನು ಬಿತ್ತುತ್ತದೆ". ಚಿತ್ತಾಲರ ಮಹತ್ವಾಕಾಂಕ್ಷೆಯ ಕಾದಂಬರಿ 'ಪುರುಷೋತ್ತಮ'ದಲ್ಲಿ ಅವರು ಧ್ವನಿಸುವಂತೆ, "ಮನುಷ್ಯ ಒಳಗೆ ಬೆಳೆದಂತೆ, ತನ್ನ 'ಸೆನ್ಸ್ ಆಫ್ ಪ್ರಪೋರ್ಷನ್' ಬೆಳೆಸಿಕೊಂಡು ಪರಿಪಕ್ವವಾದಂತೆ, ತನ್ನ ಮೇಲೆ ಎರಗುವ ಕ್ರೌರ್ಯವನ್ನು ಪಳಗಿಸಲು ಶಕ್ತನಾಗುತ್ತಾನೆ" ಎನ್ನುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಸಾಹಿತ್ಯವನ್ನು ಮನಃಶಾಸ್ತ್ರದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದವರು ಚಿತ್ತಾಲರು. ಓದುಗರ ಸಾಹಿತ್ಯದ ಅಭಿರುಚಿಯನ್ನು ಹೆಚ್ಚಿಸುವಲ್ಲಿ ಚಿತ್ತಾಲರ ಸಾಹಿತ್ಯ ಕೃಷಿ ಪ್ರೇರಕಶಕ್ತಿಯಾಗಿದೆ ಎನ್ನುವುದನ್ನು ಮರೆಯುವಂತಿಲ್ಲ. ಚಿತ್ತಾಲರು ತಮ್ಮ ಕೃತಿಗಳಲ್ಲಿ ಪಾಪಗಳ ಪ್ರಜ್ಞೆಗಳ ಒಳಗಿನಿಂದ ಜಗತ್ತನ್ನು ಕಾಣುವ ತಂತ್ರವನ್ನು ಬಹಳ ಶಕ್ತವಾಗಿ ಬಳಸಿಕೊಳ್ಳುತ್ತಾರೆ. ಚಿತ್ತಾಲರಿಗೆ ಮನುಷ್ಯ– ಮನುಷ್ಯರ ಸಂಬಂಧ ಮುಖ್ಯವಾಗುತ್ತದೆ. ಚಿತ್ತಾಲರು ತಮ್ಮ ಕತೆಗಳಲ್ಲಿ, ಕಾದಂಬರಿಗಳಲ್ಲಿ ವ್ಯಕ್ತಿಯನ್ನು ಪ್ರತ್ಯೇಕವಾಗಿ ಕಾಣಲಿಲ್ಲ. ಮಾನವ ಸಮಾಜ, ಭೂತ – ವರ್ತಮಾನಗಳ ಪ್ರಭಾವಕ್ಕೆ ಸಿಕ್ಕ ಜೀವವನ್ನಾಗಿ ಕಂಡರು. ವೈಯಕ್ತಿಕ ಜರೂರಿನಿಂದ ಬರೆಯಬೇಕೆನ್ನುವ ತತ್ವಕ್ಕೆ ಕಟ್ಟುಬಿದ್ದರು. ಹಳ್ಳಿಯಲ್ಲಿ ಕಳೆದ ಬಾಲ್ಯ ಅವರ ಸಾಹಿತ್ಯಿಕ ಅನುಭವಕ್ಕೆ ಬಂಡವಾಳವಾಯಿತು. ಹಾಗಾಗಿ ಚಿತ್ತಾಲರು ಗ್ರಾಮೀಣ ಬದುಕಿನಿಂದ ಮೂಡಿಬಂದ ಕತೆಗಾರರು, ಚಿಂತಕರು. ಚಿತ್ತಾಲರು ತಮ್ಮ ವೈಯಕ್ತಿಕ ಕಾಲ್ಪನಿಕ ಅನುಭವವನ್ನು, ಜೀವನದಲ್ಲಿ ತನ್ನ ಕಲ್ಪನೆ ಕಂಡ ವಿನ್ಯಾಸವನ್ನು, ಜೀವನಕ್ಕೆ ತನ್ನ ಹೃದಯ ಸ್ಪಂದಿಸಿದ ರೀತಿಯನ್ನು ತಮ್ಮದೇ ಶೈಲಿಯಲ್ಲಿ ಚಿತ್ರಿಸುತ್ತಾರೆ. ಪಾಶ್ಚಾತ್ಯ ಸಂಸ್ಕೃತಿ, ರೀತಿ ನೀತಿಗಳು, ವಿಚಾರಲಹರಿ, ಸ್ವಾತಂತ್ರ್ಯ – ಪ್ರಜಾಪ್ರಭುತ್ವ ಮತ್ತು ವ್ಯಕ್ತಿಯ ಮಹತ್ವವನ್ನು ಕುರಿತ ಕಲ್ಪನೆಗಳು ಇವುಗಳ ಪ್ರಭಾವ ಸಹಜವಾಗಿ ಚಿತ್ತಾಲರ ಮೇಲಾದುದನ್ನು ಅವರ ಬರವಣಿಗೆಯನ್ನು ಓದುತ್ತಾ ಹೋದಂತೆ ನಮ್ಮ ಗಮನಕ್ಕೆ ಬರುತ್ತದೆ. ಮುಂಬಯಿ ಕನ್ನಡ ಸಾಹಿತ್ಯದ ಬೆಳೆ ಬತ್ತಬಾರದೆಂದು ಅದಕ್ಕೆ ಸದಾ ನೀರೆರೆದು ಹಚ್ಚ ಹಸುರಾಗುವಂತೆ ಮಾಡಿದ ಚಿತ್ತಾಲರನ್ನು ನಾವು ಇತ್ತೀಚೆಗೆ ಕಳೆದುಕೊಂಡಿದ್ದೇವೆ. ಅತ್ಯಂತ ಚಿಂತನಶೀಲ ಬರಹಗಾರರಾದ ಚಿತ್ತಾಲರನ್ನು ಕಳೆದುಕೊಂಡು ಮುಂಬಯಿ ಕನ್ನಡ ಸಾಹಿತ್ಯ ಅನಾಥವಾದಂತಾಗಿದೆ. ಅವರ ಆತ್ಮಕ್ಕೆ ಆ ಭಗವಂತ ಚಿರಶಾಂತಿಯನ್ನು ನೀಡಲಿ ಎಂದು ಮನಸಾ ಹಾರೈಸುವೆ.

**– ಡಾ. ಜ್ಯೋತಿ ಸತೀಶ್**

# ಯಶವಂತ ಚಿತ್ತಾಲರ ಎಪ್ಪತ್ತರ ಶ್ರಾವಣ



ಜಯಂತ ಕಾಯ್ಕಿಣಿ

ಹನೇಹಳ್ಳಿ ರೇವೆಯಗುಂದೆ, ಗಾಳಿಮರಗಳು, ಹಳೇ ಸಂಕ, ಮುರ್ಕುಂಡಿ ದೇವಸ್ಥಾನ. ಶ್ರಾವಣದ ಹಸಿರು ಬೇಲಿ ಪಾಗಾರ. ಹಿನ್ನೆಲೆಗೆ ನಿರಂತರ ಸಮುದ್ರ ಘೋಷ. ಹೂವಿನಂಥ ಅಬೋಲೀನಳ ತುಟಿಗಳನ್ನು ಮುದ್ದಿಸುತ್ತ ಮನವೇಲ "ಆಯಿತು, ಇನ್ನು ನೀನು ಬಸುರಿ" ಎಂದು ನಿಷ್ಕಾರುಣವಾಗಿ ವಿಚಿತ್ರವಾಗಿ ಹೆದರಿಸುತ್ತಿದ್ದಾನೆ.

ಮನೆ ಹಿತ್ತಿಲ ಬಾವಿಯ ಬಳಿ ಗೆಳತಿಯನ್ನು ಕರೆದು ಅಬೋಲೀನ ತನ್ನ ಕಿರಗಣೆ ಲಂಗ ಸಡಿಸಲಿ ತುಸು ಜಾರಿಸಿ ಗೆಳತಿಯ ಕೈ ಸೆಳೆದು ಕಿಬ್ಬೊಟ್ಟೆಗೆ ಹಿಡಿದು, "ಹೇಳೆ, ನಾನು ಬಸುರಿಯೇನೇ?" ಎಂದು ಆರ್ತವಾಗಿ ಕೇಳುತ್ತಿದ್ದಾಳೆ.

ಕಿಟಕಿಯಾಚೆ ರಸ್ತೆಯಲ್ಲಿ ಮರವೊಂದು ಭೋರೆಂದು ಅಡ್ಡ ಬಿದ್ದಿದೆ. ಇಡೀ ದಿನ ನಿಷ್ಕ್ರಿಯನಾಗಿ, ತನ್ನ ಕೋಣೆಯಿಂದ, ಈ ಅಡ್ಡಬಿದ್ದ ಮರದ ವಿಲೇವಾರಿಯನ್ನು ನೋಡುತ್ತಿರುವ, ವ್ಯಗ್ರ ತರುಣ ಪೀಜೀ (ಪೇಯಿಂಗ್ ಗೆಸ್ಟ್) ತನ್ನ ಕಾಮನೆಗಳ ಪ್ರಪಂಚದಲ್ಲಿ ವಿಹ್ವಲನಾಗುತ್ತಿದ್ದಾನೆ.

ಸಾವು ಬದುಕಿನ ನಡುವೆ ತುಯ್ಯುತ್ತ ಕಾಯಿಲೆಯಲ್ಲಿ ಮಲಗಿರುವವನ ಕಂಗಳಲ್ಲಿ ಮೇಲಿನ ಜಂತಿ ತೊಲೆಗಳು ವಿಲಕ್ಷಣ ಬಿಂಬಗಳನ್ನು ಮೂಡಿಸುತ್ತಿರುವಂತೆಯೇ, "ನೆರೆ ಮನೆಯ ಪೊಕ್ಕ ಬಂದಾನೋ" ಎಂದು ಕಿವಿ ತುಂಬಿದ ಕೂಗು ವಿಚಿತ್ರ ಅದೃಷ್ಟದ ಬಾಗಿಲು ತೆರೆಯುತ್ತಿದೆ. ಪಯಣಕ್ಕೆ ಸ್ವಯಂ ಸಿದ್ಧನಾದ ನಾಯಕ ಸೂಟುಬೂಟಿನಲ್ಲಿ ಸೂಟಕೇಸನ್ನೂ ಕೈಲಿ ಹಿಡಿದು ಕರೆಗೆ ಕಾಯುತ್ತ ಮಂಚದ ಮೇಲೊರಗಿ ನಿದ್ದೆ ಹೋಗಿದ್ದಾನೆ.

ಜಡಿ ಮಳೆಯ ರಾತ್ರಿಯಲ್ಲಿ ಫಳೀರನೆ ಝಗ್ಗೆಂದ ಮಿಂಚಿಗೆ ಓಣಿ, ಅದರಲ್ಲಿ ನಿಂತ ಚಕ್ಕಡಿ ದೂರದಲ್ಲಿ ಸರಿದ ಕಂಬಳಿ ಕೊಪ್ಪೆ ಹೊದ್ದುಕೊಂಡಿರುವ ಎಲ್ಲ ಒಂದೇ ಚಣ ಕಂಡು ಮತ್ತೆ ಕಗ್ಗತ್ತಲ್ಲಿ ಕರಗಿ ಹೋಗಿದೆ. 'ಛಲ'ದ ಅಮಾನುಷ ರೂಪದಂತಿರುವ ಪದ್ದಕ್ಕನ ಕೆಂಪು ಸೆರಗು ಸರಿದು ಅವಳ ಬೋಳಿಸಿದ ತಲೆಯ ಮೇಲಿನ ಕುರುಚಲು ಕೂದಲು ವಿಕಾರವಾಗಿ ಕಣ್ಣುಕುಕ್ಕುತ್ತಿದೆ. ಮೈಯಲ್ಲಿ ಪ್ರಾಯ ಮುಸುಗುಡುವ ದೇವಿ ಒಳಬರುತ್ತಲೇ ಹಿಂಬದಿಯಿಂದ ಬಾಗಿಲು ಚಿಲಕ ಹಾಕಿ ಕಣ್ಣ ಕಿಡಕಿಗಳನ್ನು ತೆರೆದು 'ಆಟ'ಕ್ಕೆ ಕರೆಯುತ್ತಿದ್ದಾಳೆ. ಕೋಟಿ ತೀರ್ಥದಲ್ಲಿ ಅಲೆಗಳೇಳುತ್ತಿವೆ. ಮೂರು ದಾರಿಗಳ ನಡುವೆ ನಿರ್ಮಲೆಯ ನಿಷ್ಕಳಂಕ ತಾರಿ ದೋಣಿ ತುಯ್ಯುತ್ತಿದೆ.

ಅರವತ್ತರ ದಶಕದ ಈ ಅಚ್ಚಳಿಯದ ಚಿತ್ರಗಳನ್ನು ಮನದಲ್ಲಿ ಹೊತ್ತುಕೊಂಡು ನಾವು ಎಳೆಯರು, ನಾವು ಗೆಳೆಯರು, ಹೊಟ್ಟೆಪಾಡಿಗೆಂದು ಮುಂಬಯಿಗೆ ಬಂದಾಗ ಅದು ಎಪ್ಪತ್ತರ ದಶಕದ ಉತ್ತರಾರ್ಧ, ಬ್ಯಾಂಡ್‌ಸ್ಟ್ಯಾಂಡಿನ ಬಾಲ್ಕನಿಯ ಎದುರು ಅದೇ ಸಮುದ್ರ, ಹನೇಹಳ್ಳಿಯ ರೇವೆಗುಂದೆ ಇಲ್ಲಿ ಕಲ್ಲು ಬಂಡೆಯಾಗಿದೆ. ಖೇತವಾಡಿಯ ಗಲ್ಲಿಗಳಲ್ಲಿ, ಕಾರ್ಪೋರೇಟ್ ಏಣಿಗಳಲ್ಲಿ, ಜನ ಅರಣ್ಯದ ಲಿಫ್ಟ್‌ಗಳಲ್ಲಿ ನರಬೇಟೆ. 'ಶಿಕಾರಿ' ಮನುಷ್ಯ ಮನುಷ್ಯನನ್ನು ಅಟ್ಟಿಸಿಕೊಂಡು ಹೋಗಿದ್ದಾನೆ. ಹತಾಶನಾಗಿ ಕೈ ಚೆಲ್ಲಿ ನಿಂತಿದ್ದಾನೆ.

ಗುಣವಾಗದ ಬೇನೆಗೆ ತುತ್ತಾಗುತ್ತಿರುವ ಹೊಟ್ಟೆಯ ಮಗಳು ಜಾನಕಿ ತನ್ನ ದುರಾದೃಷ್ಟದ ವಿವಿಧ ರೂಪಗಳಲ್ಲಿ ಕಲೆಗಾರನನ್ನು ಕಸುಬಿಗೆಳಸುತ್ತಿದ್ದಾಳೆ. ಸಮೂಹ ಬಲತ್ಕಾರಕ್ಕೊಳಗಾಗುತ್ತಾಳೆ. ಛಸ್‌ನಾಲಾ ಗಣಿಯಲ್ಲಿ ಉಸಿರು ಗಟ್ಟಿ ಸಾಯುತ್ತಾಳೆ. ಯಾವ ರೂಪದಲ್ಲಿ 'ಆಕರ್ಷಕ ನೋವಾ'ಗಬಲ್ಲೆ ಎಂದು ಕತೆಗಾರನನ್ನು ಕೇಣಕುತ್ತಾ, ಕತೆಯಾಗುತ್ತಾಳೆ ಹುಡುಗಿ. ಬೆಳಕನ್ನು ಕಟ್ಟಿ ಹಾಕಿ own ಮಾಡುವವರನ್ನೆ ನೋಡ್ತಾ ಬೇನ್ಯ ನಿಂತಿದ್ದಾನೆ. ಬಟ್ಟೆಯಲ್ಲಿ ಸುತ್ತಿಟ್ಟ ಹೆಣದಂತಿರುವ ಮೂಟೆಯನ್ನು ನಡುಗುವ ಕೈಗಳಿಂದ ಬಿಡಿಸಿದರೆ ಹೊರ ಬೀಳುತ್ತದೆ. ಕಳುವಾದ ಆಳೆತ್ತರದ ದೇವತಾ ವಿಗ್ರಹ.

ಕತೆಯಲ್ಲಿ ಬಂದ ವೋಮೂ ಈಗ ಮನೆಗೂ ಬಂದು ಕದ ತಟ್ಟುತ್ತಿದ್ದಾನೆ. ಅಮಾಯಕ ಬಾಲಕ ಮಲಗಿದಲ್ಲೇ ಮಂಚಕ್ಕೆ ಕಟ್ಟಲ್ಪಟ್ಟಿದ್ದಾನೆ. ಗಿಡಗಳೊಂದಿಗೆ ಮಾತಾಡುತ್ತಾನೆ. ಹಠಾತ್ತನೆ ಒಂದು ದಿನ ಬಾಲ್ಕನಿ ಸೋಫಾಗಳ ತನ್ನ ಸುರಕ್ಷಿತ ಕೋಟೆಯನ್ನು ಮುರಿದು ಹೊರಬಿದ್ದು ಕೊಲೆಗೊಂಡ ಕಾರ್ಮಿಕ ಮುಂದಾಳುವಿನ ಚಿತಾಭಸ್ಮವನ್ನು ಆತನ ತಂದೆ ತಾಯಿಗಳ ಕೈಗಿತ್ತು, ಅವರ ದೇಖರೇಖಗೆಂದು ಅವರೆಡೆಯೇ ಉಳಿದುಬಿಡುತ್ತಾನೆ.

ಎಂಭತ್ತರ ದಶಕದಲ್ಲಿ ಇದೇ ಅನ್ವೇಷಣೆ. daring actನಲ್ಲೇ ನಿಜವಾಗುವ ಸಂಕಲ್ಪ. ತೊಟ್ಟಿಯಲ್ಲಿ ಯಾರೋ ಎಸೆದು ಹೋದ ನವಜಾತ ಶಿಶುವಿನ ಸುತ್ತ ನೆರೆದು ನಾಗರಿಕರು ಚರ್ಚಾಕೂಟ ನಡೆಸಿದಾಗ ಮೊದಲು ಅದನ್ನು ಎದೆಗೆತ್ತಿಕೊಂಡು ನೀರು ಹನಿಸಲು ಮುಂದಾದ ಶ್ರೀಮತಿ ಬಾಸ್ಲಾ. ನಾಪತ್ತೆಯಾದ ಮಗ ಎಂತೆಂಥ ನರಕ ಕೂಪದಲ್ಲಿ ಹಾಯುತ್ತಿರುವನೋ ಎಂದು ನಿದ್ದೆಯಿಲ್ಲದೆ ಹೊರಳಾಡಿ ತಾನೂ ಆ ಪಾಡು ಪಡಬೇಕೆಂದು ಕೊಳೆಗೇರಿಯಲ್ಲಿರಲು ಹವಣಿಸುವ ತಂದೆ. ಬೇರ್ಪಟ್ಟು ಭೇದಿಸಲ್ಪಟ್ಟ ಅಣ್ಣ ತಮ್ಮಂದಿರ ನಡುವಿನ ನಿಗೂಢ ಅಗೋಚರ ಅನುಬಂಧದ ಪ್ರತೀಕದಂತಿರುವ ಹಕ್ಕಿಯ ಒಂಟಿ ಗರಿ.

ಹನೇಹಳ್ಳಿಯ ಹಳೆ ಮಾವಿನಮರದ ಮೇಲೆ ಮತ್ತು ದಾದರ್ ಹಾರ್ನಿಮನ್ ಸರ್ಕಲ್ ಮೇಲೆ ಒಂದೇ ಥರ ಬೀಳುವ ಅದೇ ಅರಿಷಿಣ ಬಣ್ಣದ ಬಿಸಿಲು. ತೊಂಭತ್ತರ ದಶಕದ ಆರಂಭ. ಹಣದಾಮಿಷಕ್ಕೆ ಬಲಿಯಾಗದ ಪುರುಷೋತ್ತಮ, ತನ್ನನ್ನು ತೊರೆದ ತಾಯಿ ನಿಜಕ್ಕೂ ಹೆತ್ತ ತಾಯಲ್ಲ ಎಂಬ ಮಾಹಿತಿ ತಿಳಿದ ತಕ್ಷಣ ಕಿಂಚಿತ್ತೂ ವಿಚಲಿತನಾಗದೆ so what ಅಂದು ಅಂತಃಕರಣದ ಹಾದಿಯಲ್ಲೇ ಮುನ್ನಡೆಯುತಾನೆ.


ಖೇತವಾಡಿಯ ಮೂವರು ಬಡ ಸೋದರಿಯರೂ ಗುಟ್ಟಾಗಿ ಒಬ್ಬನನ್ನೇ ಪ್ರೇಮಿಸತೊಡಗಿ ನಂತರ ಪರಸ್ಪರರಿಗಾಗಿ ತಂತಮ್ಮ ಪ್ರೇಮವನ್ನು ಹೊಸಕಿಕೊಳ್ಳುತ್ತಾರೆ. ಆತ್ಮಹತ್ಯೆಯ ಚೀಟಿ ಅಂತ ಎಲ್ಲರೂ ಅಂದುಕೊಂಡ ಒಡೆಯದ ಪತ್ರವೊಂದು ಅಂಚೆಗೆ ಹಾಕದ ಪ್ರೇಮ ಪತ್ರವಾಗಿತ್ತು ಎಂದು ತಿಳಿಯುವ ಹೊತ್ತಿಗೆ ಅಂತರಂಗದ ಕಿಟಕಿಗಳು ಹಾಳು ಬಿದ್ದುಹೋಗಿರುತ್ತವೆ. ಕೇಂದ್ರದ ವೃತ್ತಗಳೆಲ್ಲ ಊರ್ಧ್ವಮುಖಿಯಾದ spiral ಆಕಾರವನ್ನು ಪಡೆಯತೊಡಗುತ್ತದೆ.

ಕಳೆದ ಐವತ್ತು ವರ್ಷಗಳಿಂದ ತಮ್ಮ ಕಥೆ, ಕಾದಂಬರಿ, ಪ್ರಬಂಧಗಳ ಮೂಲಕ ಇಂಥ ಅಸಂಖ್ಯ ಸನ್ನಿವೇಶಗಳನ್ನು, ರೂಪಕ, ಪ್ರತಿಮೆಗಳನ್ನು ಕನ್ನಡ ಭಾಷೆಗೆ, ಮನಸ್ಸಿಗೆ ಕೊಡುತ್ತ ಬಂದಿರುವ ನಮ್ಮ ಪ್ರೀತಿಯ ಯಶವಂತ ಚಿತ್ತಾಲರಿಗೆ ಶ್ರಾವಣದಲ್ಲಿ ಎಪ್ಪತ್ತು ತುಂಬಿದೆ.

ಅಂದು ಬಾಂದ್ರಾ ಸಮುದ್ರಕಿನಾರೆಯ ತಮ್ಮ ಎಂದಿನ ಅಚ್ಚುಕಟ್ಟಾದ ಪುಟ್ಟ ಮನೆಯಲ್ಲಿ ಮಕ್ಕಳು ಮೊಮ್ಮಕ್ಕಳೊಂದಿಗೆ ವಾಸಿಸುತ್ತಿರುವ ಕುಟುಂಬವತ್ಸಲ ಯಶವಂತ ಸದ್ದಿಲ್ಲದೆ ಆಗಸ್ಟ್ 3ರಂದು ಎಪ್ಪತ್ತು ದಾಟಿದ್ದಾರೆ. ಹೇಗೆ ಆಚರಿಸುತ್ತಿದ್ದೀರಿ? ಅಂತ ಫೋನಲ್ಲಿ ಕೇಳಿದರೆ "ಏನಿಲ್ಲ ಮನೆ ಮಂದಿಯೊಂದಿಗೆ, ಬರೀತಾ ಇರೋ ಹೊಸ ಕತೆಯೊಂದಿಗೆ" ಎಂದಿದ್ದರು. ವಿಜ್ಞಾನಿ, ಚಿಂತಕ, ಸಾಹಿತಿ, ಸೂಕ್ಷ್ಮಜ್ಞ, ಸ್ನೇಹಶೀಲ ಸಜ್ಜನ, ಶಿಸ್ತು ನೇಮನಿಷ್ಠೆಯ ಮಾನವತಾವಾದಿ, ಮುಂಬಯಿ ಕನ್ನಡ ಜೀವಿಗಳ ನೈತಿಕ ದೀಪಸ್ತಂಭದಂತಿದ್ದ ಪ್ರಿಯ ಯಶವಂತರಿಗೆ ಮಮತೆಯ ಅಭಿವಂದನೆಗಳು.

ಚಿತ್ತಾಲರ ಚಿತ್ತಲೋಕದ ಗಾಳಿ ಬೆಳಕು ಕನ್ನಡ ಸಂವೇದನೆಯನ್ನು ಹಸನುಗೊಳಿಸಿದೆ. ಅವರ ಕೃತಿಗಳ ಮಾನವೀಯ ತುಡಿತಗಳು ಮರಗಟ್ಟಿದ ಮನಗಳನ್ನು ಸ್ಪರ್ಶಿಸಿದೆ. ಅಂದು ಸುರಿದ ಎಪ್ಪತ್ತನೇ ಶ್ರಾವಣದ ಮಳೆ ಅವರ ಮುಂದಿನ ಕೃತಿಗಳ ಹಾದಿಗೆ ಹಸಿರು ನಿಶಾನೆ ಹಿಡಿದಿದೆ. ಇಂದು ಯಶವಂತ ಚಿತ್ತಾಲ ನಮ್ಮೊಂದಿಗೆ ಇಲ್ಲ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಹಾರೈಸುವೆ.

# ಅನನ್ಯ ಸೃಜನಶೀಲ ಲೇಖಕ : ಚಿತ್ತಾಲ



ಡಾ. ಜಿ. ಎನ್. ಉಪಾಧ್ಯ

"ಇಂದಿನ ಸಮಾಜದಲ್ಲಿ ನಾವು ಮನುಷ್ಯರಾಗಿ ಬಿಚ್ಚಿಕೊಳ್ಳಲು ಆರಿಸಿಕೊಳ್ಳಬಹುದಾದ ಜೀವಂತ ಮಾಧ್ಯಮಗಳಲ್ಲಿ ಸಾಹಿತ್ಯವೂ ಒಂದಾಗಿದೆ. ಮಾತ್ರವಲ್ಲ, ಮನುಷ್ಯ ತನ್ನ ಬದುಕಿನ ನಕಾಶೆಯಲ್ಲಿ ಮೂಡಿಸಿಕೊಳ್ಳಲೇಬೇಕಾದ ಅತ್ಯಂತ ಮೌಲಿಕ ಸಂಗತಿಗಳಲ್ಲಿ ಕೆಲವು ಸಂಗತಿಗಳು ಸಾಹಿತ್ಯದಿಂದ ಮಾತ್ರ ಒದಗಬಲ್ಲಂಥವುಗಳಾಗಿವೆ" ಎಂದು ನಂಬಿ ನೆಚ್ಚಿ ಬರೆಯುತ್ತಾ ಬಂದವರು ಯಶವಂತ ಚಿತ್ತಾಲರು. ಕನ್ನಡದ ಪ್ರಮುಖ ಕಥೆಗಾರರಲ್ಲಿ ಅವರೂ ಒಬ್ಬರು. ಕನ್ನಡ ಕಾದಂಬರಿ ಲೋಕದಲ್ಲಿ ಈಗ ಅವರದೇ ಅಗ್ರಮಾನ್ಯ ಹೆಸರು. ತಮ್ಮ ಬದುಕು ಬರೆಹಗಳಲ್ಲಿ ಅನನ್ಯವಾದ ಸಂಬಂಧವನ್ನು ಕಂಡುಕೊಂಡವರವರು. "ನಾನು ಬರೆಯುತ್ತಿದ್ದುದು ನಾನು ನಾನೇ ಆಗಲು. ನಾನು ನಾನಾಗಿಯೇ ಉಳಿದು ಉಳಿದವರೊಂದಿಗೆ ಬೆರೆಯಲು, ಪ್ರೀತಿಸಲು, ಪ್ರೀತಿಸುವುದನ್ನು ಕಲಿಯಲು, ಪ್ರೀತಿಸುವುದರ ಮೂಲಕ ಜೀವಂತ ಸಂಬಂಧಗಳನ್ನು ಹುಟ್ಟಿಸಿಕೊಳ್ಳಲು" ಎಂಬ ದೃಢನಂಬಿಕೆ ಚಿತ್ತಾಲರದು. ಇದೇ ಅವರ ಬರವಣಿಗೆಯನ್ನು ಬೆಳೆಸಿದೆ. ಗಟ್ಟಿಗೊಳ್ಳುವಂತೆ ಮಾಡಿದೆ. "ತಮ್ಮ ಸಾಹಿತ್ಯರಚನೆಯ ಪ್ರಕ್ರಿಯೆ ಮತ್ತು ಆಂತರಂಗಿಕ ಬದುಕಿನ ಬೆಳವಣಿಗೆಯ ಬಗ್ಗೆ ಚಿತ್ತಾಲರಷ್ಟು ಸಮೃದ್ಧ ವಿವರಗಳನ್ನು ಒದಗಿಸಿರುವ ಕನ್ನಡ ಸಾಹಿತಿ ಮತ್ತೊಬ್ಬರಿಲ್ಲ" ಎಂಬ ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್ ಅವರ ಮಾತಿನಲ್ಲಿ ನಿಜಾಂಶವಿದೆ. ಒಟ್ಟಿನಲ್ಲಿ ಇದೆಲ್ಲವೂ ಚಿತ್ತಾಲರು ಇತರ ಕಥೆ ಕಾದಂಬರಿಕಾರರಿಗಿಂತ ಹೇಗೆ ಭಿನ್ನ, ತಮ್ಮದೇ ಆದ ಒಂದು ಮಾರ್ಗವನ್ನು ಕಂಡುಕೊಂಡು ಅದರಲ್ಲಿ ಅವರು ಅನನ್ಯತೆ ಸಾಧಿಸಿದ್ದನ್ನು ತಿಳಿಸಿಕೊಡುತ್ತದೆ.

ಚಿತ್ತಾಲರ ಈ ವ್ಯಕ್ತಿ ವಿಶಿಷ್ಟತೆಗೆ ಅವರು ಬೆಳೆದುಬಂದ ಪರಿಸರ ಕಾರಣವಾಗಿದೆ. ಅವರ ಹುಟ್ಟೂರು ಹನೇಹಳ್ಳಿ. ಅದು ಅವರ ಭಾವಕೋಶದಲ್ಲಿ ಸೇರಿಹೋಗಿಬಿಟ್ಟಿದೆ. ಯಶವಂತ ಚಿತ್ತಾಲರು 1928 ಆಗಸ್ಟ್ ಮೂರರಂದು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ತಾಲೂಕಿನ ಹನೇಹಳ್ಳಿಯಲ್ಲಿ ಜನಿಸಿದರು. ಕೊಂಕಣಿ ಅವರ ಮಾತೃಭಾಷೆ. ಹನೇಹಳ್ಳಿಯಲ್ಲೇ ಆರಂಭದ ಶಿಕ್ಷಣ. ಬಾಲಕ ಯಶವಂತರಿಗೆ ಈ ಹಳ್ಳಿ ಬರೇ ಹೆಸರಿಗಷ್ಟೇ ಹುಟ್ಟೂರಾಗಿರಲಿಲ್ಲ. ಆದ್ದರಿಂದಲೇ ಅವರೇ ಒಂದು ಕಡೆ "ಉತ್ತರ ಕನ್ನಡ ಜಿಲ್ಲೆ ಅದರಲ್ಲೂ ನನ್ನ ಹುಟ್ಟೂರಾದ ಹನೇಹಳ್ಳಿ ಇವು ನನ್ನ ಮಟ್ಟಿಗೆ ಬರೇ ನೆಲದ ಹೆಸರುಗಳಲ್ಲ. ಬದಲಾಗಿ ನನ್ನ ಸಾಹಿತ್ಯದ ಹುಟ್ಟಿಗೆ ಕಾರಣವಾಗಿ, ಅದರ ಚೈತನ್ಯಕ್ಕೆ ನಿರಂತರವಾದ ಜೀವಸೆಲೆಯಾಗಿ ನಿಂತ ಮೂಲಭೂತವಾದ ಪ್ರೇರಕಶಕ್ತಿಯೂ ಆಗಿದೆಯೆಂದು ನಾನು ನಂಬಿದ್ದೇನೆ. ನನ್ನ ಮಾನಸಿಕ ಗೆಸ್ಟಾಲ್ಟ್ (Gastalt)ನ್ನು ಅಂದರೆ ಭಾವಪ್ರತಿಮೆಗಳ ವಿನ್ಯಾಸ ಹಾಗೂ ಭಾವನೆಗಳ ಶಿಲ್ಪಗಳನ್ನು ರೂಪಿಸಿದ ಉತ್ತಮಿ, ಪಾರೂ, ಆಬೋಲಿನ, ಗಿರಿಯಣ್ಣ, ಪರಮೇಶ್ವರಿ, ದೇವಿ, ಮಯ ಶೆಟ್ಟಿ, ಭೊಮ್ಮಿ, ಎಂಕು, ಮುರ್ಕುಂಡಿ, ಬಡಣಸಾಬ ಇವರೆಲ್ಲ ಈ ನೆಲದವರು. ಇಲ್ಲಿಯ ಬೇಲಿಗಳು, ಅಡ್ಡೆ, ಪಾಗಾರ, ದಣಪೆಗಳು, ಗುಡಿಸಲುಗಳು, ಅಂಗಳ, ಚಪ್ಪರಗಳು, ಹಿತ್ತಲು, ಗದ್ದೆ, ಬೇಣ, ಗುಂದೆ, ಗುಡ್ಡ, ಘಾಟಿಗಳು, ಓಣಿ, ಕೇರಿಗಳು, ಹೊಂಡ, ತೀರ್ಥ, ಗುಡಿ, ದೇವಸ್ಥಾನಗಳು, ಹಬ್ಬ, ತೇರು ಬಂಡಿ, ಜಾತ್ರೆಗಳು, ಹಳ್ಳ, ಹೊಳೆ, ಕಡಲಕೆರೆ, ತಾರಿ, ಧಕ್ಕೆಗಳು, ಅಡವಿ, ಬೆಟ್ಟಗಳು ಇವುಗಳೆಲ್ಲ ನನ್ನ ಸಾಹಿತ್ಯ ಕೃತಿಯಲ್ಲಿ ಪಾತ್ರಗಳ ಜೀವಂತ ಉಸಿರಾಟಕ್ಕೆ ಅವಶ್ಯಕವಾಗಿ ಬಂದ ಭೌತಿಕ ಪರಿಸರದ ಅಂಶಗಳು, ಮಾತ್ರವಲ್ಲ, ಅದೇ ತಾನೇ ಕಣ್ಣುಬಿಡುತ್ತಿದ್ದ, ಹೆಜ್ಜೆ ಇಡುತ್ತಿದ್ದ, ತಲೆ ಎತ್ತಿ ನಿಲ್ಲುವ ಹವಣಿಕೆಯಲ್ಲಿದ್ದ ಎಳೆಯ ಜೀವಕ್ಕೆ "ಬೆಳೆ, ಗಟ್ಟಿಯಾಗಿ 'ಅರಳು' ಎಂದು ಪ್ರೋತ್ಸಾಹವಿತ್ತ ಜೀವಂತ ಸಂಗತಿಗಳೂ ಆಗಿವೆಯೆಂದು ನಾನು ಬಾವಿಸಿದ್ದೇನೆ" ಎಂದು ಅವರೇ ಹೇಳಿಕೊಂಡಿದ್ದಾರೆ. ಹುಟ್ಟೂರು ಅವರ ಬದುಕಿನ ಗತಿಯನ್ನೇ ಬದಲಾಯಿಸಿ ಬಿಟ್ಟಿತು. ಚಿತ್ತಾಲರ ತಂದೆ ವಿಠೋಬ, ತಾಯಿ ರುಕ್ಮಿಣಿ, ಗಂಗಾಧರ ಹಾಗೂ ದಾಮೋದರ ಎಂಬಿಬ್ಬರು ಸಹೋದರರು. ಗಂಗಾಧರ ಚಿತ್ತಾಲರು ಕನ್ನಡ ಕಾವ್ಯ ಪ್ರಪಂಚದಲ್ಲಿ ಹೆಸರುವಾಸಿಯಾದವರು. ಕುಮಟಾ, ಧಾರವಾಡ, ಮುಂಬಯಿ, ನ್ಯೂಜರ್ಸಿ ಮೊದಲಾದ ಕಡೆ ಚಿತ್ತಾಲ ಅವರು ಹೆಚ್ಚಿನ ಶಿಕ್ಷಣ ಪಡೆದರು. ಕಳೆದ ಅನೇಕ ದಶಕಗಳಿಂದ ಅವರು ಮುಂಬಯಿಯಲ್ಲಿ ನೆಲೆಸಿದ್ದಾರೆ. ಮಾಯಾನಗರಿ ಮುಂಬಯಿಯ ಒಳಹೊರಗಿನ ಪರಿಚಯ ಅವರಿಗಿದೆ. ಇದು ಹೊಸ ಲೋಕವನ್ನು ಅವರಿಗೆ ತೆರೆದು ತೋರಿತು. ಅಷ್ಟೇ ಅಲ್ಲ, ಯುರೋಪ್, ಇಂಗ್ಲೆಂಡ್, ಜಪಾನ್ ಇನ್ನನೇಕ ರಾಷ್ಟ್ರಗಳಲ್ಲಿ ಇದ್ದು ಓದಿ ಬಂದವರು. ಅಲ್ಲಿನ ಜನರ ಬದುಕನ್ನು ಅವರು ಓದಿದರೆನ್ನಬಹುದು. ಈ ಸಮೃದ್ಧ ಅನುಭವ ಅವರ ಸಾಹಿತ್ಯ ಪ್ರಪಂಚವನ್ನು ವಿಚಾರ ಪ್ರಪಂಚವನ್ನು ಹಿರಿದಾಗಿಸಿದೆ.

ಚಿತ್ತಾಲರದು ಮೂಲತಃ ವೈಜ್ಞಾನಿಕ ಮನೋಭಾವ. ಓದಿ ಅರಗಿಸಿಕೊಂಡದ್ದೆಲ್ಲ ತಂತ್ರಜ್ಞಾನವನ್ನು. ಅಣ್ಣ ಗಂಗಾಧರ ಚಿತ್ತಾಲ, ಚಿಂತಕ, ಬುದ್ಧಿಜೀವಿ; ಗೌರೀಶ ಕಾಯ್ಕಿಣಿ, ಶಾಂತಿನಾಥ ದೇಸಾಯಿ ಮೊದಲಾದವರ ಆತ್ಮೀಯ ಒಡನಾಟ; ಧಾರವಾಡದ ಅಂದಿನ ಸಾಹಿತ್ಯಿಕ ವಾತಾವರಣ ಇದೆಲ್ಲವೂ ಯಶವಂತರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದವು. ಚಿತ್ರಕಲೆಯಲ್ಲಿಯೂ ಅವರಿಗೆ ವಿಶೇಷ ಆಸಕ್ತಿ ಇತ್ತು. ಎಂ.ಎನ್. ರಾಯ್ ಅವರ ವಿಚಾರಗಳ ಕಡೆಗೆ ಆಕರ್ಷಿತರಾದರು. "ಮಾಸ್ತಿಯವರ ಸಂಪ್ರದಾಯದಲ್ಲಿಯೇ, ಅವರ ಪ್ರಭಾವದಿಂದಾಗಿ ಕಥೆ ಬರೆಯಲಿಕ್ಕೆ ಆರಂಭಿಸಿದ್ದು, ನನ್ನ ಇಂದಿನವರೆಗಿನ ಎಲ್ಲಾ ಸಾಹಿತ್ಯದ ಮೇಲೆ ಮಾಸ್ತಿಯವರ ಗಾಢ ಪ್ರಭಾವವಿದೆಯೆಂದು ಒಪ್ಪಿಕೊಳ್ಳುತ್ತೇನೆ. ಅಲ್ಲದೇ ಕುವೆಂಪು, ಶಿವರಾಮ ಕಾರಂತ, ಬೇಂದ್ರೆ, ಅಡಿಗ ಅವರಿಂದಲೂ ಪ್ರಭಾವ ಪಡೆದಿದ್ದೇನೆ ಎಂದಿರುವ ಅವರ ಮೇಲೆ ಕಾಫ್ಕಾ, ಕಾಮೂ, ಐರ್ಬಾಕ್, ಸಿಂಗರ್, ದಸ್ತಾವಸ್ಕಿ, ಚೆಕಾವ್ ಮೊದಲಾದ ಪಾಶ್ಚಾತ್ಯ ಲೇಖಕರ ಪ್ರಭಾವವೂ ಆಗಿದೆ. "ಹನೇಹಳ್ಳಿಯ ಹಸಿರು ತುಂಬಿದ ಪರಿಸರದಿಂದ ಸೃಜನಶೀಲ ಚೈತನ್ಯದ ಬುತ್ತಿ ಹೊತ್ತುತಂದ ತರುಣನಿಗೆ ಮುಂಬಯಿಯೆಂಬ ನಗರ ರಾಕ್ಷಸನೊಂದಿಗೆ ಆದ ಮುಖಾಮುಖಿ ಹುಟ್ಟಿಸಿದ ತಲ್ಲಣಗಳು ಅವರ ಬರವಣಿಗೆಯ ಹಲವು ಕಾಳಜಿಗಳಿಗೆ ಕಾರಣವಾದವು". 'ಬೊಮ್ಮಿಯ ಹುಲ್ಲು ಹೊರೆ' ಎಂಬ ಕಥೆಯನ್ನು ಚಿತ್ತಾಲರು 1949 ರಲ್ಲಿ ಬರೆದರು. 1957ರಲ್ಲಿ ಅವರ ಚೊಚ್ಚಲ ಕಥಾಸಂಕಲನ 'ಸಂದರ್ಶನ' ಪ್ರಕಟವಾಯಿತು. ಮತ್ತೆ ಅವರು ಹಿಂದಿರುಗಿ ನೋಡಲಿಲ್ಲ. 'ಅಬೋಲಿನ' (1960), 'ಆಟ' (1969), 'ಆಯ್ದ ಕತೆಗಳು' (1969), 'ಕತೆಯಾದಳು ಹುಡುಗಿ' (1976), 'ಬೇನ್ಯಾನ' (1983), 'ಸಮಗ್ರ ಕತೆಗಳು' (1983), 'ಸಿದ್ಧಾರ್ಥ' (1988), 'ಸಮಗ್ರ ಕತೆಗಳ' ಮೊದಲಾದ ಕಥಾಸಂಕಲನವನ್ನು ಅವರು ಕನ್ನಡ ವಾಙ್ಮಯಕ್ಕೆ ನೀಡಿದ್ದಾರೆ. ಅದನ್ನು ಸಾಕಷ್ಟು ಶ್ರೀಮಂತಗೊಳಿಸಿದ್ದಾರೆ. ನವ್ಯ ಮಾರ್ಗದಲ್ಲೇ ತಮ್ಮ ಸೃಜನಶೀಲತೆಯನ್ನು ಕಂಡುಕೊಂಡವರು ಚಿತ್ತಾಲರು. ಈ ಅಂಶ ಅವರ ಕತೆಗಳಿಗಿಂತ ಹೆಚ್ಚಾಗಿ ಕಾದಂಬರಿಗಳಲ್ಲಿ ಢಾಳಾಗಿ ಕಂಡುಬರುತ್ತದೆ. "ಗೋಪಾಲಕೃಷ್ಣ ಅಡಿಗರ ಕಾವ್ಯ ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯದ ಮುಖ್ಯ ಪ್ರವಾಹವನ್ನು ಪ್ರತಿನಿಧಿಸಿದರೆ, ಚಿತ್ತಾಲರ ಕಥೆಗಳು ಈ ಕಾರ್ಯವನ್ನು ಕಥಾ ಸಾಹಿತ್ಯದ ಕ್ಷೇತ್ರದಲ್ಲಿ ನೆರವೇರಿಸುತ್ತದೆ" ಎಂಬ ಜಿ.ಎಸ್. ಅಮೂರ ಅವರ ಅಭಿಪ್ರಾಯ ಸ್ವೀಕಾರಾರ್ಹವಾದುದು.

ಆರಂಭದಲ್ಲಿ ಚಿತ್ತಾಲರು ಕಥೆಗಾರರಾಗಿಯೇ ಹೆಸರುವಾಸಿಯಾದವರು. ತದನಂತರ ಕಾದಂಬರಿ ಕ್ಷೇತ್ರಕ್ಕೆ ಕಾಲಿಟ್ಟು ಅಲ್ಲಿಯೂ ಸೈ ಎನಿಸಿಕೊಂಡವರು. 1964 ರಲ್ಲಿ ಅವರ 'ಮೂರು ದಾರಿಗಳು' ಕಾದಂಬರಿ ಪ್ರಕಟವಾಯಿತು. ಹನೇಹಳ್ಳಿಯೇ ಇದರ ಕೇಂದ್ರಬಿಂದು. ಅಲ್ಲಿಯ ಶಾನುಭಾಗ ವಿಶ್ವನಾಥರ ಮಗಳಾದ ನಿರ್ಮಲೆಯ ದುರಂತದ ಬದುಕನ್ನು ಈ ಕಾದಂಬರಿ ಚಿತ್ರಿಸಿದೆ. ಉತ್ತರ ಕನ್ನಡ ಜಿಲ್ಲೆಯ ಜನಸಾಮಾನ್ಯರ ಬದುಕನ್ನು ಚಿತ್ತಾಲರು ಇಲ್ಲಿ ಕಾವ್ಯಾತ್ಮಕವಾಗಿ ಚಿತ್ರಿಸಿ ಮುಂದೊಂದು ದಿನ ತಾನು ಉತ್ತಮ ಕಾದಂಬರಿಗಳನ್ನು ಬರೆಯಬಲ್ಲೆ ಎಂಬುದನ್ನು ಸಾಬೀತುಗೊಳಿಸಿದರು. ಅನಂತರ

ಬಂದ ಅವರ ಕಾದಂಬರಿಗಳೆಲ್ಲ ಕನ್ನಡದಲ್ಲಿ ಹೊಸ ಅಲೆಯನ್ನು ಎಬ್ಬಿಸಿದವು. ಚಿತ್ತಾಲರ 'ಶಿಕಾರಿ' ಕನ್ನಡದ ಸರ್ವಶ್ರೇಷ್ಠ ಕಾದಂಬರಿಗಳಲ್ಲಿ ಒಂದು. ಇದು 1979ರಲ್ಲಿ ಬೆಳಕು ಕಂಡಿತು. ಕನ್ನಡದ ಮಟ್ಟಿಗಂತೂ ತೀರಾ ಭಿನ್ನವಾದ ವಸ್ತುವನ್ನು ಎತ್ತಿಕೊಂಡು ನವೀನ ರೀತಿಯಲ್ಲಿ ಎರಕ ಹೊಯ್ದರು. "ನಾವು ಅಸಮಗ್ರತೆಯಿಂದ ಸಮಗ್ರತೆಯ ಕಡೆಗೆ ಅಪ್ರಬುದ್ಧತೆಯಿಂದ ಪ್ರಬುದ್ಧತೆಯ ಕಡೆಗೆ ಸಾಗುವ, ಸ್ವಲ್ಪದರಲ್ಲಿ ಮನುಷ್ಯರಾಗಿ ಮಾಗುವ ಪ್ರಕ್ರಿಯೆಗೆ 'ಶಿಕಾರಿ' ರೂಪಕವಾಗಿದೆ. ಕಾದಂಬರಿಯ ಲಕ್ಷ್ಯ ನಾಗಪ್ಪನ ವ್ಯಕ್ತಿತ್ವವಲ್ಲ, ಅವನ ಬೆಳವಣಿಗೆಯಾಗಿದೆ" ಎಂದು ಒಂದೆಡೆ ಅವರೇ ಹೇಳಿಕೊಂಡಿದೆ. ನಮ್ಮೊಳಗಿನ ಮನುಷ್ಯತ್ವವನ್ನು ಹುಡುಕುವ ಪ್ರಾಮಾಣಿಕ ಪ್ರಯತ್ನವಿಲ್ಲಿದೆ. ಸಾಹಿತ್ಯ-ಸಮಾಜ-ಬದುಕಿನ ಬಗೆಗಿರುವ ಚಿತ್ತಾಲರ ತೀವ್ರವಾದ ಕಾಳಜಿ ಇಲ್ಲಿ ಎದ್ದು ಕಾಣುತ್ತದೆ. ಅವರ ಛೇದ ಕಾದಂಬರಿ 1985 ರಲ್ಲಿ ಬಿಡುಗಡೆ ಯಾಯಿತು.

ಕನ್ನಡ ಕಾದಂಬರಿ ಪ್ರಪಂಚಕ್ಕೆ ಚಿತ್ತಾಲರು ಕೊಟ್ಟ ಮತ್ತೊಂದು ಮಹತ್ವದ ಕಾಣಿಕೆ 'ಪುರುಷೋತ್ತಮ' ಕಾದಂಬರಿ. ಇದು 1990ರಲ್ಲಿ ಪ್ರಕಟವಾಯಿತು. ಪುರುಷೋತ್ತಮ ಕಾದಂಬರಿಯ ಕುರಿತು ಸಾಕಷ್ಟು ಚರ್ಚೆ ನಡೆಯಲಿಲ್ಲ. ಇದರ ಧಾರೆ ಮಹಾಕಾವ್ಯದ್ದು. ಒಂದು ಸಮಾಜದ ಒಂದು ಸಮುದಾಯದ ಕತೆಯಾಗಿ ಇದರ ಹರಹು ಚಾಚಿಕೊಳ್ಳುತ್ತದೆ. ಅವರ ಸೃಜನಶೀಲ ಬದುಕಿನ ಮತ್ತೊಂದು ಮಹತ್ವದ ಘಟ್ಟವನ್ನು ಈ ಕಾದಂಬರಿ ಪ್ರತಿನಿಧಿಸುತ್ತದೆ. ಇಲ್ಲಿ ಚಿತ್ತಾಲರು ವ್ಯಷ್ಟಿ ಸಮಷ್ಟಿ ಪ್ರಜ್ಞೆಯನ್ನು ದುಡಿಸಿಕೊಂಡ ರೀತಿಯಂತೂ ಮನೋಜ್ಞವಾದುದು. ಚಿತ್ತಾಲರ ಪ್ರಮುಖ ಕಾಳಜಿಗಳೆಲ್ಲ ಏಕತ್ರ ಸಂಘಟಿಸಿರುವ, ಅವರ ಸೃಜನಶೀಲ ಚೈತನ್ಯವು ಮಡುಗಟ್ಟಿರುವ, ಮಹತ್ವಾಕಂಕ್ಷೆಯ ಕೃತಿಯಿದೆಂದು ವಿಮರ್ಶಕ ಎಚ್.ಎಸ್. ಆರ್. ಕೊಂಡಾಡಿರುವುದು ಗಮನಾರ್ಹ ಅಂಶವಾಗಿದೆ.

'ಕೇಂದ್ರ ವೃತ್ತಾಂತ' ಚಿತ್ತಾಲರ ಇತ್ತೀಚಿನ ಕಾದಂಬರಿ. ಪ್ರಸ್ತುತ ಕೃತಿ ನಿರೂಪಣೆಯಲ್ಲಿ, ತಂತ್ರದಲ್ಲಿ ಸಾಕಷ್ಟು ಭಿನ್ನವೂ ವಿಶಿಷ್ಟವೂ ಆದುದು. ಈ ಕಥೆಯ ಕೇಂದ್ರ ಸಹ ಮುಂಬಯಿಯೇ ಆಗಿದೆ. ಮನುಷ್ಯನ ನಡವಳಿಕೆಗಳು ಆತನನ್ನು ಸುತ್ತಿಕೊಳ್ಳುವ ಸಂಬಂಧಗಳು ಏನೆಲ್ಲ ಮಾಡಬಲ್ಲ, ಅವನ ಸಾಧ್ಯಾಸಾಧ್ಯತೆಗಳೇನು ಈ ಮನುಷ್ಯನ ಸೃಷ್ಟಿಯ ಹಿಂದಿರುವ ಸೋಜಿಗ, ಹೀಗೆ ಇವೆಲ್ಲ ವಿವಿಧ ಮಗ್ಗಲುಗಳಲ್ಲಿ ಬೆಳೆದು 'ಕೇಂದ್ರ ವೃತ್ತಾಂತ' ಕಾದಂಬರಿ ಮೈತಾಳಿದೆ. ಅದು ಮನುಷ್ಯನ ಬಾಹ್ಯ ಮತ್ತು ಅಂತಃಸಂಬಂಧವನ್ನು ಎಳೆಯೆಳೆಯಾಗಿ ಚಿತ್ರಿಸಿದೆ. ಅತ್ತ ಹಳ್ಳಿಯೂ ಅಲ್ಲದ ಇತ್ತ ನಗರದೊಳಗಿದ್ದೂ ಪ್ರತ್ಯೇಕವಾಗಿಯೇ ಉಳಿಯುವ ಮುಂಬಯಿಯ ಚಾಳುಗಳು, ಅಲ್ಲಿನ ನರಕಸದೃಶ ಬದುಕು, ವ್ಯಕ್ತಿ ವಿಶಿಷ್ಟತೆಯನ್ನು ಬರಿದಾಗಿಸುವ, ಜೀವನ ಮೌಲ್ಯವನ್ನು ವಿದ್ರೂಪಗೊಳಿಸುವ ನಗರ ಜೀವನದ ಯಾಂತ್ರಿಕತೆ, ಮಧ್ಯಮವರ್ಗದ ಹೊಯ್ದಾಟದ ಬದುಕು ವಾಸ್ತವವೆನಿಸುಷ್ಟು ಸಹಜವಾಗಿ ಇಲ್ಲಿ ಅನಾವರಣಗೊಂಡಿದೆ.

ದಕ್ಷಿಣ ಕನ್ನಡದ ಜೀವನವನ್ನು ಚಿತ್ರಿಸಿದ ಡಾ. ಶಿವರಾಮ ಕಾರಂತರ ಸ್ಥಾನಕ್ಕೆ ಉತ್ತರ ಕನ್ನಡದ ಜೀವನವನ್ನು ಚಿತ್ರಿಸಿದ ಶ್ರೀ ಚಿತ್ತಾಲರು ಪ್ರತಿಸ್ಪರ್ಧಿಗಳಾಗಬಲ್ಲರು ಎಂದು ನಾಟಕಕಾರ ಶ್ರೀರಂಗರು ಒಂದೆಡೆ ಹೇಳಿದ್ದುಂಟು. ಆದರೆ, ಕೇಂದ್ರ ವೃತ್ತಾಂತದಲ್ಲಿ ಚಿತ್ತಾಲರು ಅದನ್ನೂ ಮೀರಿ ಮುನ್ನಡೆದಿದ್ದಾರೆ. ತಮ್ಮ ಆಯ್ದ ಕತೆಗಳ ಮುಮ್ಮಾತಿನಲ್ಲಿ ಒಂದು ಕಡೆ "ನನ್ನ ಲಕ್ಷ್ಯ ಈಗ ನಿಶ್ಚಿತವಾಗಿ ಸಮಕಾಲೀನ ಸಮಾಜದಲ್ಲಿಯ ವಿದ್ಯಮಾನಗಳ ಕಡೆಗೆ, ಈ ಸಮಾಜದ ಸ್ವರೂಪವನ್ನು ಅರಿಯುವುದರ ಕಡೆಗೆ" ಎಂದಿದ್ದಾರೆ. ಅದನ್ನು ನಾವು 'ಕೇಂದ್ರವೃತ್ತಾಂತ' ಕಾದಂಬರಿಯಲ್ಲಿ ಕಾಣಬಹುದು. ಚಿತ್ತಾಲರ ಮಹತ್ವದ ಕಾದಂಬರಿಗಳಲ್ಲಿ ಇದೂ ಒಂದು.

ಇದೊಂದು ಪರಿಚಯಾತ್ಮಕ ಲೇಖನ. ಚಿತ್ತಾಲರ ಕತೆ, ಕಾದಂಬರಿಯ ವಿಮರ್ಶೆಗೆ ಇಲ್ಲಿ ಅವಕಾಶವಿಲ್ಲ. ಚಿತ್ತಾಲರು, ಬಲ್ಲಾಳರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ ನಗರ ಪ್ರಜ್ಞೆಯ ಸ್ವರೂಪ, ಕೈಗಾರಿಕಾ ಮನಃಶಾಸ್ತ್ರ ಮೊದಲಾದ ಅಂಶಗಳ ಕುರಿತು ವಿಮರ್ಶಕರು ಅಷ್ಟಾಗಿ ಚರ್ಚಿಸಿಲ್ಲವೆಂಬುದು ನಮ್ಮ ವಿಮರ್ಶೆಯ ಮಿತಿಯನ್ನು ತೋರಿಸುತ್ತದೆ. ದೂರದ ಮುಂಬಯಿಯಲ್ಲಿದ್ದುಕೊಂಡು ಗಂಭೀರವಾಗಿ ಸಾಹಿತ್ಯ ಕೃಷಿಯಲ್ಲಿ ನಿರತರಾಗಿರುವ ಚಿತ್ತಾಲರು ಪ್ರಶಸ್ತಿ ಪುರಸ್ಕಾರಕ್ಕೆ ಹಾತೊರೆದವರಲ್ಲ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಾಸ್ತಿ ಕಥಾಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ ಮೊದಲಾದವು ಅವರ ಪ್ರತಿಭೆಗೆ ಸಂದ ಪುರಸ್ಕಾರಗಳು. ತಮ್ಮ ಬರಹದ ಮುಖಾಂತರವಾಗಿ ಓದುಗ ವರ್ಗದ ಅಭಿರುಚಿಯನ್ನು ತಿದ್ದಿತೀಡಿ ಅವರಲ್ಲಿ ಹೊಸ ಚಿಂತನಕ್ರಮವನ್ನು ಮೂಡಿಸಿದವರು ಚಿತ್ತಾಲರು ಎಂಬುದು ಅಭಿಮಾನದ ಸಂಗತಿ.

■


## MATRIMONIAL

Alliance for Brahmin Smartha Boy Age 30 years, Kaushik Gotra, Simha Rashi, Magha Nakshatra, Height 5'.11", Fair complexion, B.Com Graduate working in International Global Service in Mumbai, earning Rs. 45,000/- per month. Girl wanted with service in Mumbai (Smartha or Madhava), Graduate age between (25-28 years) Height 5'.5" to 5'.8", Good looking.

Contact : Mrs. Meenakshi V. Begoor – 022-28970741 / 9892588861 / 9930466951


# ಯಶವಂತ ಚಿತ್ತಾಲ

ಹನೇಹಳ್ಳಿಯ ಬಾಲ್ಯದ ಸವಿಗನಸುಗಳು
ಟಿಸಿಲೊಡೆದದ್ದು ಮಾಯಾನಗರಿಯಲ್ಲಿ
ಮನೆಯಲ್ಲಿ, ಓದು, ದುಡಿತದಲ್ಲಿ ಹಲವು ಭಾಷೆಗಳು
ಮನ ಮೆಚ್ಚಿ ಬರೆದದ್ದು ಕಸ್ತೂರಿಯಲ್ಲಿ
ವಿಜ್ಞಾನ ತಂತ್ರಜ್ಞಾನದ ಅಧ್ಯಯನದಲ್ಲಿ
ದೇಶವಿದೇಶದಿ ವಿಶಿಷ್ಟ ಶಿಕ್ಷಣದಲ್ಲಿ
ಮುಳುಗೆದ್ದು, ಒಲಿದದ್ದು, ನಲಿದದ್ದು,
ಮುದ್ದಿಸಿದ್ದು, ಕನಸಿದ್ದು ಸವಿಗನ್ನಡದಲ್ಲಿ
ಮಹಾನಗರದ ಮಹಾ ವೈಭವದಲ್ಲಿ
ತೋರಿಕೆಯ ಆಡಂಬರದಲ್ಲಿ
ಹೆಕ್ಕಿ ತೆಗೆದದ್ದು, ಬಿಕ್ಕಿ ಬರೆದದ್ದು, ಮೆರೆದದ್ದು
ಉತ್ತರ ಕನ್ನಡ ಜೀವನಾಡಿಯಲ್ಲಿ
ನವಿರೇಳಿಸುವ ಕಥಾಧಾರೆಯ ಹರಿಸಿ
ಮನವ ತೋಯಿಸಿದ ಕಥೆಗಾರನ ಲೇಖನಿಯಲ್ಲಿ
ಕನ್ನಡದ ವಾಙ್ಮಯಕ್ಕೆ ಸಿರಿಮೂಡಿ
ಪುಳಕಗೊಂಡಿತು ಕರುನಾಡು ತನ್ಮಯತೆಯಲ್ಲಿ
ಕನ್ನಡದ ಸವಿಯನ್ನು ಚವಿಯನ್ನು
ಕಥೆಯಲ್ಲಿ ಅರಳಿಸುವಲ್ಲಿ
ಕನ್ನಡದ ಬೆಡಗನ್ನು ಬಿನ್ನಾಣವನ್ನು
ಕಾದಂಬರಿಗಳಲ್ಲಿ ಇಳಿಸುವಲ್ಲಿ
ಮಸ್ತಕವ ಚುರುಕಿಸಿ ಮಿರುಗಿಸುವ
ಲಯಬದ್ಧ ಸಾಲುಗಳಲ್ಲಿ
ಪ್ರತಿಭೆಯನ್ನು ಹೊಳೆಯಿಸಿದ
ಬರಹದಾರನ ಚರಣಗಳಲ್ಲಿ
ಭಾವಪೂರ್ಣ ಶ್ರದ್ಧಾಂಜಲಿ!

– ಸುರೇಖ ರಾಧಾಕೃಷ್ಣ ನಾಯ್ಕ್, ಅಮ್ಮೆ
(M. 9987769458)

# ಬ್ಯಾಂಡ್ ಸ್ಟಾಂಡಿನೊಳಗೊಂದು ದಣಪೆ

ಯಶವಂತ ಚಿತ್ತಾಲರ ಲ.ಬ.ಸಾ ರಚನೆಗಳನ್ನು ಕೈಗೆತ್ತಿಕೊಂಡು ಅದರ ಚಂದದ ಮೈಯನ್ನು ಆಪ್ಯಾಯಮಾನದಿಂದ ಸವರುತ್ತಾ ಒಳತೆರೆದಾಗ ಧುತ್ತನೇ ಕಣ್ಣೆದುರಿಗೆ ಬಂದದ್ದು ವಿಲಿಯಂ ಬ್ಲೇಕ್ ನ ಮುಗ್ಧತೆಯ ಹಾಡುಗಳು. (ಸಾಂಗ್ಸ್ ಆಫ್ ಇನೋಸೆನ್ಸ್) ಕುರಿಮರಿಯನ್ನು ಹೆಗಲಿಗೇರಿಸಿಕೊಂಡು ಸ್ವತಃ ಕುರಿಮರಿಯೇ ಆಗಿಬಿಡುವ ಆನಂದ, ಸ್ವಚ್ಛಂದ ಛಂದದ ಬಣ್ಣದಲೋಕ. ಕೇವಲ ಮುಗ್ಧತೆಯಿಂದ ಕೂಡಿದ ಅರಳುಗಣ್ಣಿನ ಬಾಲ್ಯ ಕಾಲವದು. ಅಲ್ಲಿ ಅರಳುವ ಪ್ರತಿಯೊಂದು ಬೇಲಿ ಹೂವಿಗೂ, ಚಿಟ್ಟೆ ದುಂಬಿಗಳಿಗೂ, ಮನೆಯೊಳಗಿನ ಕಂಭ ಕಟ್ಟೆಗಳಿಗೂ, ಅಂಗಳದ ತುಳಸಿ ಪಾರಿಜಾತ ಅಬ್ಬಲಿಗೆ ದಾಸವಾಳಗಳಿಗೂ–ಅಲ್ಲದೆ ಇವೆಲ್ಲನ್ನೂ ಒಂದು ಬಂಧದೊಳಗೆ ಪ್ರತಿಬಂಧಿಸುವ ದಣಪೆಗೂ ಜೀವಬಂದುಬಿಡುತ್ತದೆ. ಯಾಕೆಂದರೆ ಅದನ್ನು ಕಾಣುತ್ತಿರುವ ಮುಗ್ಧನೋಟಕ್ಕೆ "ತೆಗೆ ಜಡವೆಂಬುದೆ ಸುಳ್ಳು" ಎಂಬುದನ್ನು ಆತ್ಮಸಾತ್ ಮಾಡಿಕೊಂಡ ಬೆರಗು ಮಾತ್ರವೇ ಸ್ಥಾಯಿಯಾಗಿರುತ್ತದೆ.

ದಣಪೆಯಾಚೆ ಎನ್ನುವುದು ಲೋಕವಾದರೆ ದಣಪೆಯ ಈಚೆ ಎನ್ನುವುದು ಗೃಹ. ಆದರೆ ಇಲ್ಲಿ, ಗೃಹ ಮತ್ತು ಲೋಕಗಳು ಇನ್ನೂ ವಿಚ್ಛಿದ್ರಗೊಳ್ಳದ ಒಂದು ಅಖಂಡ ಸ್ಥಿತಿಇದೆ. ಯಾಕೆಂದರೆ ಗೃಹದೊಳಗಿನಿಂದ ಕಾಣುತ್ತಿರುವ ಗ್ರಹಿಕೆಯ ಮೂಲ ಕೇವಲ ವಿಸ್ಮಯ ಮತ್ತು ಮುಗ್ಧತೆಯಿಂದ ಕೂಡಿದ್ದು. ನಮ್ಮ ಭಾವಕೋಶ ರೂಪುಗೊಳ್ಳುವುದೇ ಬಾಲ್ಯದ ಈ ಮುಗ್ಧತೆಯ ಆನಂದದಿಂದ ( ಸಾಂಗ್ಸ್ ಆಫ್ ಇನೊಸೆನ್ಸ್). ಅದರೆ ಕಾಲವೆಂಬ "ದಂಡಪಾಣಿ" ನಮ್ಮನ್ನು ಈ ಮುಗ್ಧತೆಯೆಂಬ ಸ್ವರ್ಗದಿಂದ ಅನಾಮತ್ತಾಗಿ ತಳ್ಳಿಬಿಡುತ್ತದೆ. ಸ್ವರ್ಗದಿಂದ ಚ್ಯುತಿಯಾದ ಯಾತನೆ ಮತ್ತು ಅದನ್ನು ಮತ್ತೆ ಪಡೆಯಬೇಕೆಂಬ ಹಂಬಲ ಇದೇ ಮನುಷ್ಯ ಬದುಕಿನ ಹೋರಾಟವೇನೋ. ಯಾಕೆಂದರೆ ವರ್ತಮಾನವೆನ್ನುವುದು ಆತಂಕಕಾರಿಯಾಗಿದೆ. ಈ ಆತಂಕಕಾರಿಯಾದ ವರ್ತಮಾನ, ಭವಿಷ್ಯದ ಬಗೆಗೆ ಭೀಕರತೆಯನ್ನು ಹುಟ್ಟಿಸುತ್ತಿದೆ. ಹೀಗೆ ಆತಂಕ ಮತ್ತು ಭೀಕರತೆಯಿಂದ ತಪ್ಪಿಸಿಕೊಳ್ಳಬೇಕೆಂದರೆ ವಿಸ್ಮಯದ ಅದ್ಭುತ ಸ್ಥಿತಿಗೆ, ಅಂದರೆ ಮಗುತನಕ್ಕೆ ಮೊಗಚಿಕೊಳ್ಳುವುದೊಂದೇ ಪರ್ಯಾಯ. ಹೀಗೆ ಮೊಗಚಿಕೊಳ್ಳುವಾಗ ಮಗುತನಕ್ಕೆ ಸಹಜವಾಗಿ ಇರುವ ಅಜ್ಞಾನ ಇರುವುದಿಲ್ಲ ಎಂಬುದು ಮುಖ್ಯವಾದುದು. ಇಲ್ಲಿನ ರಚನೆಗಳು ಹೀಗೆ ಮಗುತನಕ್ಕೆ ಮೊಗಚಿಕೊಳ್ಳುತ್ತಿರುವುದರ ಪ್ರತೀಕವಾಗಿ ಕಾಣಿಸುತ್ತಿವೆ. ಈ ರಚನೆಗಳ ಶಿಲ್ಪದ ಬಗೆಗೆ ಚರ್ಚೆಗೆ ಹೋಗದೆ ಅವುಗಳ ಓದು ತಂದುಕೊಟ್ಟ ಅನುಭವವನ್ನು ಮಾತ್ರ ಇಲ್ಲಿ ಹಂಚಿಕೊಳ್ಳುವುದು ಮುಖ್ಯವೆನಿಸುತ್ತದೆ.

ಚಿತ್ತಾಲರ ಸಮಗ್ರ ಸಾಹಿತ್ಯದ ಪರಿಚಯವಿರುವವರಿಗೆ ಅವರ ಲ.ಬ.ಸಾ. ಗಳು ಅಪರಿಚಿತಯೆನಿಸುವುದೇ ಇಲ್ಲ. ಅವರ ಕಥಾ ಸಾಹಿತ್ಯದ ತುಂಬೆಲ್ಲಾ ಜೀವಂತ ಪಲ್ಲವಿಸುವ ಅವರ ಜಾನಕಿ, ಸಿದ್ಧಾರ್ಥ, ಪುರುಷೋತ್ತಮ, ಗಿರಿಯಣ್ಣ, ನಾಗಪ್ಪ, ಉತ್ತುಮಿ, ಪಾರು, ನಿರ್ಮಲೆ, ಅಜ್ಜಿ ಇವರೆಲ್ಲಾ ದಣಪೆ ತರೆದಾಕ್ಷಣ ಪರಿಚಯದ ನಗೆ ಬೀರಿ "ಬಾ..ಹ್ಯಾಗಿದ್ದೀಯಾ" ಎಂದು ಕೈ ಹಿಡಿದು ಒಳ ಕರೆಯುತ್ತವೆ. "ಪರಕೀಯನನ್ನು ತನ್ನವನಾಗಿಸುವ ಈ ದಿವ್ಯ ಮಂತ್ರ" ಕೈಹಿಡಿದು ಒಳ ಕರೆಯುವ ಆರ್ದ್ರತೆಗೆ ದಂಗಾಗಿಬಿಡಬೇಕು. ಹಾಗೆಯೇ ಚಿತ್ತಾಲರ ಸೃಷ್ಟಿಶೀಲ ಶಕ್ತಿಯ ಮೂಲದ ಸ್ವರೂಪವೂ ಒಮ್ಮೆಲೇ ಓದುಗರಿಗೆ ಬಯಲಾಗಿ 'ಯುರೇಕಾ' ಎನ್ನಬೇಕು.

ಚಿತ್ತಾಲರ ಕಥಾ ಸಾಹಿತ್ಯದಲ್ಲಿ ಒಂದಲ್ಲ ಒಂದು ಪರಿವೇಷದಲ್ಲಿ ಬಂದ ಇವರೆಲ್ಲಾ (ಹೆಚ್ಚಿನವರು) ಮತ್ತೆ ಬಂದು ಚಿತ್ತಾಲರ ಮನೆ/ಮನದ ಕದ ತಟ್ಟಿರಬೇಕು. ಹೀಗೆ ಕದ ತಟ್ಟಲು ಕಾರಣ ಬಹುಶಃ ಮೇಲೆ ಹೇಳಿದ ಆತಂಕಕಾರಿಯಾದ ವರ್ತಮಾನ. ಯಾಕೆಂದರೆ ವಿಶ್ವದ ಭವ್ಯ ಸಂಸ್ಕೃತಿಯನ್ನು ಕಡೆದಿಟ್ಟ ಬಂಡೆಗಳಿಗೆ ಸಾವಿರಾರು ವರ್ಷಗಳ ಅದ್ಭುತವಾದ ಒಂದು ವಿಸ್ಮಯದ ಇತಿಹಾಸವಿದೆ. ಆದರೆ ಅವು ಇಂದು ನಾಗರೀಕತೆಯ ವಿನಾಶಕಾರಿ ಸಿಡಿಮದ್ದುಗಳಿಗೆ ಸಿಲುಕಿ ಚೂರು ಚೂರಾಗಿ ಪುಡಿಯಾಗುತ್ತಿವೆ. ಅವು ಇಂದು ಸ್ವರ್ಗದಿಂದ ನೆಲಕ್ಕುರುಳಿದ ಕೇವಲ ಶಾಪಗ್ರಸ್ತ ಕಗ್ಗಲ್ಲುಗಳಾಗಿ ಮಾತ್ರ ಉಳಿದಿವೆ. (ಬ್ಯಾಂಡ್ ಸ್ಟಾಂಡಿನ ಬಂಡೆಗಳು) ಈ ಮಣ್ಣಿಗೆ ಫಲವಂತಿಕೆಯನ್ನು, ಚೇತನವನ್ನು ಒದಗಿಸಿದ ಬಂಡೆಗಳು ಇಂದು



ಗಿರಿಜಾ ಶಾಸ್ತ್ರಿ

ಕೊಳ್ಳುಬಾಕ, ಉಪಭೋಗಿ ಸಂಸ್ಕೃತಿಯ ಸಾಧನವಾಗಿ ಬಿಟ್ಟಿವೆ. ಆಧುನಿಕ ಜನಾಂಗ ಇದರ ಬೆನ್ನು ಹತ್ತಿರುವಾಗ ''ದಣಪೆಯಾಚೆಯ ಓಣಿ"ಯೊಳಗೆ ಹಾಯುವರಿಲ್ಲದೆ ಅದಕ್ಕೆ ರಾವುಬಡಿದಿದೆ. ಇಲ್ಲಿ ತುಳಿಸಿ ಕಟ್ಟೆಯೂ ಇಲ್ಲ, ಪಾರಿಜಾತ ಕರವೀರ ಶಂಖಾಸುರ ಪುಷ್ಪಗಳೂ ಇಲ್ಲ. ಅವು ನಮ್ಮನ್ನು "ಹೊರಟಿರಾ ಆಗಲೇ ವಾಯುಸೇವನೆಗೆ? ಕಪಿಲತೀರ್ಥಕ್ಕೋ? ಚಕ್ರಖಂಡೇಶ್ವರಕ್ಕೋ? ಇಲ್ಲವೇ ಇಗರ್ಜಿ ನಿಂತ ಘಾಟಿಯ ಗುಡ್ಡಕ್ಕೋ?" ಎಂದು ಪಿಸುದನಿಯಲ್ಲಿ ಪ್ರೀತಿಯಿಂದ ಕೇಳುವುದೇ ಇಲ್ಲ. ಯಾಕೆಂದರೆ "ಗಿಡಗಳೊಡನೆ ಮಾತನಾಡುವುದನ್ನು" ನಾವು ಮರೆತುಬಿಟ್ಟಿದ್ದೇವೆ. "ಕೆಂಪು ಧೂಳಿನ" ಅಪ್ಪಟ ದೇಸೀಯತೆ ಘಮ್ಮೆನ್ನುವ ಮಣ್ಣಿನ ಮಕ್ಕಳು ಅಂದು ಬಡವರಾಗಿದ್ದರೂ ಭ್ರಷ್ಟರಾಗಿರಲಿಲ್ಲ. ಆದರೆ ಇಂದು ನಾಗರೀಕತೆಯ ಬೆನ್ನತ್ತಿದ ಯುವಕರಿಗೆ ಹಳ್ಳಿ ಹಾಳು ಕೊಂಪೆಯಾಗಿದೆ. ಈಗ ಇಲ್ಲಿ ಮಾತನಾಡುವುದು ಮರಗಿಡಗಳಲ್ಲ, ಪ್ರಾಣಿ ಪಕ್ಷಿಗಳಲ್ಲ, ಬದಲಿಗೆ ಹಣ. "ಇದ್ದ ಬಿದ್ದ ಮನೆಗಳಲ್ಲೀಗ ಮಕ್ಕಳು ಕಳಿಸುವ ಹಣಕ್ಕಾಗಿ ಕಾದು ಕುಳಿತ ಮುದಿ ಜೀವಗಳು" ಕೂತಲ್ಲೇ ಮುದಿಯಾಗುತ್ತಿದ್ದಾರೆ. ಈಗ ಇದೊಂದು ಎಲಿಯಟ್ಟಿನ "ವೇಸ್ಟ್ ಲ್ಯಾಂಡ್". "ಕಾದು ಗಾರಾದ ನೆಲ". ವರ್ತಮಾನವೆನ್ನುವುದು ಹೀಗೆ ಭಯೋತ್ಪಾದನೆಯನ್ನು ಸೃಜಿಸಿದಾಗೆಲ್ಲಾ ಭೂತ ತಾನೆ ಬಂದು ಕೈಹಿಡಿಯಬೇಕು, ಅನೇಕ ಅವತಾರಗಳಲ್ಲಿ ಮೈತಳೆದು ಬಂದು ಈ ಭೂಮಿಯನ್ನು ಎತ್ತಬೇಕು. "ವ್ಯಕ್ತ ಮಧ್ಯಕ್ಕೆ ಬಂದುರಿವ ಶಬರಿ" (ರಾಮನವಮಿಯ ದಿವಸ) ಎನ್ನುತ್ತಾರೆ ಅಡಿಗರು. ಅಂದರೆ ಇಡೀ ಬದುಕೇ ಶಬರಿಯಂತೆ ಹೊಸ ಹುಟ್ಟಿಗೆ ಕಾಯುತ್ತಾ ನಿಂತಿದೆ. ಆದುದರಿಂದಲೇ ಧರ್ಮಕ್ಕೆ ಹೀಗೆ ಗ್ಲಾನಿ ಆವರಿಸಿದಂತೆಲ್ಲಾ "ಪುರುಷೋತ್ತಮ" ಮತ್ತೆ ಮತ್ತೆ ಹುಟ್ಟಿಬರಬೇಕಾಗಿರುವುದು ಅನಿವಾರ್ಯವಾಗಿದೆ. ನಿಜವಾಗಿ 'ದಣಪೆಯಾಚೆಯ ಓಣಿ"ಯಲ್ಲಿ ಕಾಣೆಯಾಗಿಯೇ ಬಿಟ್ಟ ಖಾಸಾ ಗೆಳೆಯ ಪುರುಷೋತ್ತಮ ಕಾದಂಬರಿಯಲ್ಲಿ ಬಂದು ಗರುಡನಾಗಿ ಬೆಳೆಯುತ್ತಾನೆ. ಅದನ್ನು "ಅಭಿನಂದನ", "ವೈಶಾಲಿ" ಯಂತಹ ಅಸಾಮಾನ್ಯರಾದ ಮೂರನೆಯ ಪೀಳಿಗೆಯ ಮಕ್ಕಳು ಅದರ ಚುಕ್ಕಾಣಿ ಹಿಡಿದು ಮುಂದುವರೆಸುತ್ತಾರೆ.

ಈ ವರ್ತಮಾನವೆನ್ನುವುದೇ ಹೀಗೆ ಹಿಡಿಯಬೇಕೆನ್ನುವಷ್ಟರಲ್ಲೇ ಹಾರಿಬಿಟ್ಟಿರುತ್ತದೆ, ಬೇಲಿಯ ಮೇಲಿನ ಹಾವಿಗೆ ಕೂತ ಚಿಟ್ಟೆಯಂತೆ. ಆಗ ಕೇವಲ ಉಳಿಯುವುದು ಅದರ ನೆನಪಷ್ಟೇ. ಹೀಗೆ ವರ್ತಮಾನವನ್ನು ಹಿಡಿಯಬೇಕೆಂಬ ಹಟದಲ್ಲಿ ನಾವು ಹಿಡಿಯುವುದು ಕೇವಲ ಭೂತವನ್ನೇ. ಮನುಷ್ಯನ ದೊಡ್ಡ ಸಂಕಟವೆಂದರೆ ವರ್ತಮಾನವೇ ಇಲ್ಲ ಎನ್ನುವುದು. ಹೀಗೆ ವರ್ತಮಾನವನ್ನು ಹಿಡಿಯಬೇಕೆಂಬ ಹಂಬಲ ಮತ್ತು ಹಿಡಿಯಲಾರದ ಅಸಹಾಯಕತೆ, ಮತ್ತು ಭವಿಷ್ಯದ ಭೀಕರತೆಯಿಂದ ಮನುಷ್ಯ ಸಂಸ್ಕೃತಿಯನ್ನು ಪಾರುಮಾಡಬೇಕೆಂಬ ಕನಸು ಇದು ಆದಿಮವಾದುದೋ ಏನೋ. ಈ ಹಂಬಲ ಅಪರಿಚಿತ ಆಕೃತಿಗಳಲ್ಲಿ ಮೈದಳೆಯುವ ಬಗೆ ಮಾತ್ರ ಬೆರಗು ಹುಟ್ಟಿಸುವಂತಹದು. ಇದು ನಮ್ಮ ಬೌದ್ಧಿಕ ಗ್ರಹಿಕೆಯ ಆಚೆಗೆ ನಿಲ್ಲುವಂತಹುದು. ಇವು ಯಾಕೆ, ಎಲ್ಲಿ, ಹೇಗೆ ಪ್ರಕಟವಾಗುತ್ತವೆ ಎಂಬ ಚಿಂತನೆಯೇ ನಮ್ಮನ್ನು ನಡುಗಿಸಿಬಿಡುತ್ತದೆ. ನಮ್ಮ ಭಾವಕೋಶವನ್ನು ರೂಪಿಸುವ ಈ ಗತಕಾಲದ ನೆನಪುಗಳು ಹೀಗೆ ರಸ, ರೂಪ, ಗಂಧ, ಸ್ಪರ್ಶ, ನಾದಗಳಲ್ಲಿ ಮೈದೋರುವಾಗ "ಇದು ಬರಿ ಬೆಳಗಲ್ಲೋ ಅಣ್ಣಾ!" ಎನ್ನುವ ವಿಸ್ಮಯ ಮಾತ್ರ ಉಳಿದುಬಿಡುತ್ತದೆ. "ಹ್ಯಾಗಿದ್ದೀಯಾ?", "ಅಜ್ಜಿ", "ಗಾಳಿಪಟ","ತೇರು", "ಪಾರು","ಅಮ್ಮನ ನೆನಪು", "ಜೋಹೋ ಜೋಯ್", "ಸಂಜೆ ಹಾಡು" ಮುಂತಾದ ಕವಿತೆಗಳು ಸಹೃದಯರ ಗತಕಾಲದ ನೆನಪುಗಳೊಳಗೆ ಸೇರಿಹೋಗಿ ಅವರವರ ಭಾವಕ್ಕೆ ಮೈದೋರುವುದಿದೆಯಲ್ಲಾ ಅದು ಎಲ್ಲಕ್ಕಿಂತ

ವಿಸ್ಮಯಕಾರಿಯಾದುದು.

ಚಿತ್ತಾಲರ ಈ ಲ.ಬ.ಸಾ.ಗಳು ಆಧುನಿಕ ಕವಿತೆಗಳಂತೆ ಕಬ್ಬಿಣದ ಕಡಲೆಯಲ್ಲ. ಕಠಿಣವಾಗಲೇಬೇಕೆಂಬ ಹಠದಲ್ಲಿ ಒಂದೊಕ್ಕೊಂದು ಸಂಬಂಧವಿಲ್ಲದೆ ಪೋಣಿಸುವ, ಹೊಸೆಯುವ ಅಸಂಬದ್ಧ ಕವಿತೆಗಳಿಗಿಂತ ಇಂತಹ ರಚನೆಗಳು ಯಾರನ್ನಾದರೂ ಸುಲಭವಾಗಿ ತಟ್ಟಬಲ್ಲವು, ಇವು ಸರಳ ರಚನೆಗಳೆಂದ ಮಾತ್ರಕ್ಕೆ ನಮ್ಮನ್ನು ಚಿಂತನೆಗೆ ಹಚ್ಚವುದಿಲ್ಲ ಎನ್ನುವುದಲ್ಲ. ಕವಿತೆಗಳ ಕಾಲ್ಪನಿಕ ಹರವು ವಿಸ್ತಾರ ಇವಕ್ಕಿಲ್ಲದಿರಬಹುದು, ಆದರೆ ಧ್ಯಾನಸ್ಥ ನೆಲೆಯಲ್ಲಿ ಇವು ಚಿಂತನೆಯ ಯಾವ ಆಳಕ್ಕಾದರೂ ಸಹೃದಯರನ್ನು ಕೊಂಡೊಯ್ಯಬಲ್ಲವು. ಸಾಹಿತ್ಯಕ ವಲಯಗಳ ಇತ್ತೀಚಿನ ಸಭೆ ಸಮಾರಂಭಗಳಲ್ಲಿ ಕೇಳಿಬರುತ್ತಿರುವ ಒಂದೇ ಘೋಷಣೆ ಎಂದರೆ "ಕವಿತೆಗಳಿಗೆ ಈಗ ಓದುಗರಿಲ್ಲ" ಎಂಬುದು. ಬಹುಶಃ ನಮ್ಮ ಅವಸರದ ಬದುಕಿನ ಈ ಸಮಕಾಲೀನ ಸಂದರ್ಭ ಹೊಸ ಬಗೆಯ ಕವಿತಾ ಪ್ರಕಾರಕ್ಕೆ ಕಾಯುತ್ತಿದೆಯೇನೋ. ಅದನ್ನು ಪೂರ್ಣಗೊಳಿಸುವ ಸಲುವಾಗಿಯೋ ಎನ್ನುವಂತೆ ಚಿತ್ತಾಲರು ಕನ್ನಡ ಸಾಹಿತ್ಯದ ಪರಂಪರೆಯೊಳಗೆ ಹೊಸದೊಂದು ಸಾಹಿತ್ಯಕ ಪ್ರಕಾರವನ್ನು – ಲ.ಬ.ಸಾ. ಗಳನ್ನು ಹರಿಯಬಿಟ್ಟಿದ್ದಾರೆ. ಮಾಸ್ತಿಯವರು ಕನ್ನಡದೊಳಗೆ ಸಣ್ಣಕಥೆಗಳನ್ನು ಹರಿಯಬಿಟ್ಟಂತೆ, ಅವರ ಜಾಡಿನಲ್ಲಿಯೇ ನಡೆದು ಸಣ್ಣಕಥೆಯ ಪ್ರಕಾರವನ್ನು ಸಮೃದ್ಧಗೊಳಿಸಿದ ಚಿತ್ತಾಲರು ಈಗ ಲ.ಬ.ಸಾ. ಪ್ರಯೋಗವನ್ನು ಮಾಡಿದ್ದಾರೆ. ಇದರ ಪ್ರಭಾವ ಪರಿಣಾಮಗಳನ್ನು ಕಾದುನೋಡಬೇಕಾಗಿದೆ. ■

## ಬದಲಾವಣೆಗೆ ಹಾತೊರೆದಿದೆ ದೇಶ

ಶಶಿಯು ತನ್ನ ರಾಜ್ಯವ ತ್ಯಾಗಮಾಡಿ
ದಿನಕರನಿಗೆ ಕಾರ್ಯಭಾರವ ವಹಿಸಿದಾಗಲೇ
ಬೆಳಗಾಗುವುದು.. ಬೆಳಗು ಮೂಡುವುದು
ಬೆಳಕಾಗುವ ಮುನ್ನ ಕತ್ತಲು ನಿರ್ಗಮಿಸಲೇಬೇಕು
ಕತ್ತಲಾಗುವ ಮುನ್ನ ಬೆಳಕು ಅಸ್ತಂಗತವಾಗಲೇಬೇಕು
ಇದುವೇ ವಿಧಿ ನಿಯಮ..
ಜಗಳವಿಲ್ಲ. . . ತಾಕಲಾಟವಿಲ್ಲ
ಬಾನದಾರಿಯಲ್ಲಿ ಒಬ್ಬ ಮಾಯವಾದರೆ
ಮತ್ತೊಬ್ಬ ಉದಯಿಸುವನು
ಜಗವ ಬೆಳಗುವರಿವರು ನಿಸ್ವಾರ್ಥದಿಂದ
ಇದನ್ನರಿಯದ ಮೂರ್ಖಶಿಖಾಮಣಿಗಳು ನಮ್ಮಲ್ಲೂ ಇದ್ದಾರೆ,
ರಾಜಕಾರಣಿಗಳೆಂದು ಅವರನ್ನು ಕರೆಯುತ್ತಾರೆ
ಶ್ವಾನಗಳಿಗಿಂತ ಕಡೆಯಾಗಿ ವರ್ತಿಸುವ
ಅಧಿಕಾರದ ಲಾಲಸೆಯಿಂದ ತಮ್ಮನ್ನೇ ಮರೆವ
ತಾವು ಜನಪ್ರತಿನಿಧಿಗಳೆಂಬುದನ್ನೇ ಮರೆತು ಮೆರೆವರು
ಸ್ವಾರ್ಥವೇ ತುಂಬಿತುಳುಕುವ ಇವರು ನಮ್ಮಾನ್ನಾಳುವವರು
ಜಗತ್ತನ್ನೇ ಕತ್ತಲಾಗಿಸುವ ಸ್ವಾರ್ಥಿ ಪ್ರಭುಗಳು
ಜನತೆಯ ಶಾಂತಿ ನೆಮ್ಮದಿಗೆ ಉರುಳಾಗುವರು
ಚುನಾವಣೆಯ ಸಮಯವಾದರೂ ಎಚ್ಚೆತ್ತುಕೊಳ್ಳೋಣ
ನಮ್ಮ ಹಕ್ಕನ್ನು ಸರಿಯಾಗಿ ಉಪಯೋಗಿಸೋಣ
ದೇಶದ ಚುಕ್ಕಾಣಿಯನ್ನು ಯಾರ ಕೈಗೆ ಕೊಡೋಣ
ಯೋಚಿಸೋಣ, ಆಲೋಚಿಸೋಣ
ಇಂದಿನ ನಿರ್ಧಾರವೇ ನಮ್ಮ ದೇಶದ ಬೆಳಕು
ಅದೇ ನಮ್ಮ ಭವಿಷ್ಯದ ಹೊಳಹು



– ಪೂರ್ಣಿಮಾ ಸುಧಾಕರ ಶೆಟ್ಟಿ
(M: 9820310893)

## ನನ್ನ ರಾಮಾಯಣ ಕೇಳ ಹೋದರೆ ಮಹಾಭಾರತವಾದೀತು...

ದ್ವಾಪರ ಮತ್ತು ತ್ರೇತಾಯುಗಗಳಲ್ಲಿ
ಹಾಸುಹೊಕ್ಕಾಗಿದೆ ನನ್ನ ಕಲಿಯುಗ
ನಿಶೆಯಲ್ಲಿ ನಾನು ಚಂದ್ರವಂಶಿ
ಉಷೆಯಲ್ಲಿ ಸೂರ್ಯವಂಶಿ
ನಾನು ಆಯೋಧ್ಯೆಯ
ಹಸ್ತಿನಾಪುರವಾಸಿ
ವ್ಯಾಸನ ಗಣೇಶ ನಾನಾಗಬಾರದಿತ್ತೆ?
ವಾಲ್ಮೀಕಿಯ ತಾಳೆಗರಿ ನಾನೇಕಾಗಲಿಲ್ಲ?
ನಾನು ರಾಮನಲ್ಲ ಅಂತ ಎಲ್ರಿಗೂ ಗೊತ್ತು
ನಾನು ಕೃಷ್ಣನಲ್ಲ ಅಂತ ನನಗೆ ಮಾತ್ರ ಗೊತ್ತು
ಏಕೆಂದರೆ, ನಾನು ಮರ್ಯಾದಾ ಪುರುಷೋತ್ತಮನಲ್ಲ
ನಾ ಕೃಷ್ಣನಾಗೋಕ್ಕೆ ಗೋಪಿಕೆಯರು ಸುತರಾಂ ಒಪ್ಪಲಿಲ್ಲ
ನಮ್ಮನೆ ಪಾಂಡವರಲ್ಲಿ ನಾನು ಮಾದ್ರಿ ಪುತ್ರ, ಕೌಂತೇಯ
ನನ್ನಪ್ಪ ದಶರಥನಿಗೆ ನಾನು ಶತ್ರುಘ್ನ
ಸಂದಿಪಾಣಿಯಿಂದ ವಶಿಷ್ಟರ ವರೆಗೂ
ನನ್ನ ದ್ರೋಣರಿಗೆಲ್ಲ ನಾನೇ ಅರ್ಜುನ
ಊರ್ಮಿಳೆಯನ್ನು ಕಡೆಗಣಿಸುವಷ್ಟು ಭ್ರಾತೃಪ್ರೇಮ ನನ್ನಲ್ಲಿಲ್ಲ
ದ್ರೌಪದಿಯನ್ನು ಪಾಂಚಾಲಿಯಾಗಿಸುವ ಔದಾರ್ಯವೂ ನನಗಿಲ್ಲ
'ನೀ ಕಂಸ ಮಾಮ ಅಲ್ಲ', ಅಂತಾರೆ ನನ್ನ ಸೋದರಳಿಯಂದಿರು
'ಏಯ್ ಶಕುನಿ ಮಾಮ', ಅಂತಾರೆ ನನ್ನ ಸೊಸೆಯಂದಿರು
ನನಗೆ ವಿದುರ ಅಂದ್ರೆ ಸ್ವಲ್ಪ ದೂರ
ವಿಭೀಷಣನಿಗೆ ನಾನು ಭೂಷಣ ಅಲ್ಲ
ಯಾವ ಸುಗ್ರೀವಾಜ್ಞೆಯೂ ನನಗೆ ಭರತವಾಕ್ಯವಲ್ಲ,
ಹಾಗಾಗಿ, ನನ್ನ ಭೀಷ್ಮ ಪ್ರತಿಜ್ಞೆಗಳಿಗೆಲ್ಲ ಶರಶಯ್ಯೆಯೇ ಗತಿ
ನನ್ನ ಮಂಥರೆ ಬುದ್ಧಿಗೆ ಲಕ್ಷ್ಮಣರೇಖೆಯ ಕಟುಪಾಡಿದೆ
ನನ್ನೊಳಗಣ ದುಶ್ಯಾಸನನಿಗೆ ಲಂಕಾದಹನದ ಭಯವಿದೆ
ವೃತ್ತಿ ಕುಂಡಲದಲಿ ನಾ ಕಿವಿಯಾರೆ ಕರ್ಣ
ಆಗೊಮ್ಮೆ ಈಗೊಮ್ಮೆ ನಾನೂ ಕುಂಭಕರ್ಣ
ನಾ ರಾವಣನಾಗೋದು ನನ್ನ ಮಂಡೋದರಿಗೆ ಇಷ್ಟವಿಲ್ಲ
ನಾ ಧುರ್ಯೋದನನೋ ಯುಧಿಷ್ಠಿರನೋ ನನಗೇ ಸ್ಪಷ್ಟವಿಲ್ಲ
ನನ್ನ ಕಪಿಸೇನೆ ಅಳಿಲ ಸೇವೆಗೆ ಸದಾ ಸಿದ್ಧ
ನನ್ನ ಸುದಾಮನಲ್ಲೂ ಶಬರಿ ಭಕ್ತಿ ಇದ್ದೇ ಇದೆ
ನಾನು ಒಮ್ಮೆ ಅಶ್ವತ್ಥಾಮ, ಒಮ್ಮೆ ಇಂದ್ರಜಿತು
ಒಮ್ಮೆ ನರ, ಒಮ್ಮೆ ಕುಂಜರ - ಒಮ್ಮೆ ಪ್ರತ್ಯಕ್ಷ ಒಮ್ಮೆ ಅಪ್ರತ್ಯಕ್ಷ
ರಾಮರಾಜ್ಯ, ನನಗೊಂದು ಯಕ್ಷಪ್ರಶ್ನೆ
ಭಗವದ್ಗೀತೆಯೇ ನನಗೆ ಸಂಜೀವಿನಿ
ಹೇಳ ಹೋದರೆ ನನ್ನ ರಾಮಾಯಣ
ಆದೀತು ಮಹಾಭಾರತ
ಹೇಳಹೋದರೆ ೭ ಕಾಂಡಗಳು ಸಾಲವು
೧೮ ಪರ್ವಗಳು ಸಂದಾವು
ಬೆಳೆದೀತು ಹನುಮಂತನ ಬಾಲದಂತೆ
ಘಟೋತ್ಕಚನ ಕಾಯದಂತೆ....
ಈ ನನ್ನ || ಚರ್ವಿತ ಚರ್ವಣ ||

- ಮನೋಹರ ನಾಯಕ್
(M: 9820267025 ) **E-mail:** lingoindia@gmail.com

# ಸ್ನೇಹಾಕಾಂಕ್ಷಿ ಯಶವಂತ ಚಿತ್ತಾಲರು-ನಾ ಕಂಡಂತೆ

೨೦೦೩ರ ಫೆಬ್ರವರಿ ತಿಂಗಳು. ನಾನು ಕನ್ನಡದಲ್ಲಿ ಎಂ.ಎ. ದ್ವಿತೀಯ ವರ್ಷ ಓದುತಿದ್ದ ಸಮಯ. ಮುಂಬಯಿ ವಿಶ್ವವಿದ್ಯಾಲಯದ ಜೆ.ಪಿ.ನಾಯಕ ಭವನದಲ್ಲಿ ಮುಂಬಯಿ ಕನ್ನಡ ಲೇಖಕಿಯರ ಬಳಗ 'ಸೃಜನಾ'ದ ಉದ್ಘಾಟನಾ ಕಾರ್ಯಕ್ರಮಕ್ಕೆ ಯಶವಂತ ಚಿತ್ತಾಲರು ಗೌರವ ಅತಿಥಿಗಳಾಗಿ ಆಗಮಿಸಿದ್ದರು. ಯಶವಂತ ಚಿತ್ತಾಲರು ಅಂದು ಆಡಿದ ಮಾತುಗಳು ನನ್ನನ್ನು ಓರ್ವ ಬರಹಗಾರ್ತಿಯನ್ನಾಗಿ ರೂಪಿಸುವಲ್ಲಿ ಖಂಡಿತವಾಗಿಯೂ ಮಹತ್ವದ ಪಾತ್ರವನ್ನು ವಹಿಸಿತು. "ಎಲ್ಲಕ್ಕೂ ಮೊದಲು, ' ನಾನು ಬರೆಯಬಲ್ಲೆ' ಎನ್ನುವ ಆತ್ಮವಿಶ್ವಾಸ ಬೇಕು. ನನಗೆ ಅಸಾಧ್ಯವಾದದ್ದೇನೂ ಇಲ್ಲ ಎನ್ನುವ ಮನವರಿಕೆ ಬೇಕು. . . (ಪುರುಷೋತ್ತಮ ಕಾದಂಬರಿಯ ಮಾತುಗಳನ್ನು ಉದ್ಗರಿಸುತ್ತಾ) 'ಗರುಡನಪ್ಪಾ ನೀನು! ಪಕ್ಕ ಕತ್ತರಿಸಿ ಬಿದ್ದ ಗುಬ್ಬಿಯ ಹಾಗೆ ತೆವಳಬೇಡ. ಗರಿ ಬಿಚ್ಚು, ನೆಗೆ!'.." ಎಂಬ ತಮ್ಮ ಮಾತುಗಳ ಮೂಲಕ ನನ್ನಲ್ಲಿ ಹುದುಗಿದ್ದ ಸೃಜನಶೀಲತೆಗೆ ಚಾಲನೆಯನ್ನಿತ್ತು ಕನ್ನಡ ಸಾರಸ್ವತಲೋಕದ ಗಗನದಲ್ಲಿ ಗರಿಬಿಚ್ಚಿ ಮುಕ್ತವಾಗಿ ಹಾರಾಡಲು ಪ್ರೇರೇಪಿಸಿದ ಧೀಮಂತ ಚೇತನ ನಮ್ಮ ಯಶವಂತ ಚಿತ್ತಾಲರು.

ಸ್ವತಃ ಸಾಹಿತ್ಯದ ವಿದ್ಯಾರ್ಥಿಯಲ್ಲದಿದ್ದರೂ, ಅವರ ಮನೆಮಾತು ಕನ್ನಡವಲ್ಲದಿದ್ದರೂ, ಕನ್ನಡ ಭಾಷೆಯ ಖಚಿತತೆಯ ಕುರಿತಾದ ಅವರ ಎಚ್ಚರ, ಕಾಳಜಿ ಬಹಳ ಅಪರೂಪವಾದುದು. 'ದೋಷವಿಲ್ಲದೆ, ಸ್ವಚ್ಛ ಸುಂದರವಾಗಿ ಬರೆಯುವ ತಾಳ್ಮೆ, ಶಿಸ್ತು ನಾವು ಮನಸ್ಸಿನ ಸೃಜನಶೀಲ ಸ್ಥಿತಿಗೆ ಆ ಮೂಲಕ ಬದುಕಿಗೆ ತೋರುವ ಗೌರವವೂ ಆಗಿದೆ.' ಎನ್ನುವ ಚಿತ್ತಾಲರ ಮನೋಭಾವ ಇಂದು ಎಷ್ಟು ಮಂದಿ ಸಾಹಿತಿಗಳಿಗಿದೆ?. . ಸಾಹಿತ್ಯದ ವಿದ್ಯಾರ್ಥಿಗಳಿಗಿದೆ? ಭಾಷೆಯ ಕುರಿತಾದ ಔದಾಸೀನ್ಯ ಎನ್ನುವುದು ಅವರ ಪಾಲಿಗೆ ಅಕ್ಷಮ್ಯ ಅಪರಾಧವಾಗಿತ್ತು. ತಮ್ಮ ಭಾಷೆಯನ್ನು ಕೆಡದಂತೆ ಕಾಪಾಡುವುದು ಸಾಹಿತಿಗಳ ಆದ್ಯ ಕರ್ತವ್ಯವೆನ್ನುವುದನ್ನು ಒತ್ತಿ ಒತ್ತಿ ಹೇಳುತ್ತಿದ್ದರು. ಒಳ್ಳೆಯ ಮನಸ್ಸು ಒಳ್ಳೆಯ ಭಾಷೆಯ ಮೂಲಕ ಒಳ್ಳೆಯ ಸಾಹಿತ್ಯವನ್ನು ಸೃಷ್ಟಿಸಲು ಸಾಧ್ಯ; ಇಂಥಹ ಒಳ್ಳೆಯ ಸಾಹಿತ್ಯದ ಓದು ಮನುಷ್ಯನನ್ನು ಒಳ್ಳೆಯವನಾಗಿಸುತ್ತದೆ ಎನ್ನುವುದನ್ನು ದೃಢವಾಗಿ ನಂಬಿದವರು. ಚಿತ್ತಾಲರು ತಮ್ಮ ಕೊನೆಯುಸಿರಿನ ತನಕ ಒಳ್ಳೆಯ ಸಾಹಿತ್ಯವನ್ನು ಸೃಷ್ಟಿಸುತ್ತಾ ಆ ಮೂಲಕ ಎಲ್ಲೆಲ್ಲೂ ಒಳ್ಳೆಯತನವನ್ನು ಪ್ರತಿಬಿಂಬಿಸಲು ಪ್ರಾಮಾಣಿಕ ಪ್ರಯತ್ನವನ್ನು ನಡೆಸುತ್ತಲೇ ಇದ್ದವರು. ಇವೇ ಕಾರಣಗಳಿಂದಾಗಿ ಚಿತ್ತಾಲರು ನನ್ನನ್ನು ತುಂಬಾ ಪ್ರಭಾವಿಸಿದರು.

ಜೀವನದ ಆರು ದಶಕಗಳ ಕಾಲ ಕರ್ನಾಟಕದ ಹೊರಗೆ ಬಹುಭಾಷಾ ನಗರಿಯಲ್ಲಿ, ಕನ್ನಡ ಕಿವಿಗೆ ಬೀಳದ ಕೌಟುಂಬಿಕ ಪರಿಸರದಲ್ಲಿದ್ದುಕೊಂಡು ಬರವಣಿಗೆಯನ್ನು ಒಂದು ತಪಸ್ಸಿನಂತೆ ನಂಬಿ ಬದುಕಿದವರು. ಓರ್ವ ಸಂವೇದನಾಶೀಲ ಮಿತಭಾಷಿ ಪ್ಲಾಸ್ಟಿಕ್ ತಂತ್ರಜ್ಞ, ಮನುಷ್ಯನನ್ನು ಅರಿಯಬೇಕೆನ್ನುವ ತಮ್ಮ ತುಡಿತದಿಂದಾಗಿ ಕನ್ನಡದ ಕತೆಗಾರನಾಗಲು ಹೊರಟದ್ದು; ಕತೆ–ಕಾದಂಬರಿಗಳನ್ನು ರಚಿಸುತ್ತಾ, ಆ ಕೃತಿ ಮೂಡಿ ಬರುವುದನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಅವುಗಳಲ್ಲಿರುವ ಪಾತ್ರಗಳ ಒಡನಾಟದಲ್ಲಿ ಅವುಗಳ ಜಗತ್ತಿನಲ್ಲಿ ತಮ್ಮ ಏಕಾಂತವನ್ನು ಮರೆಯಲು ಪ್ರಯತ್ನಿಸಿದ್ದು ; ಮಾತ್ರವಲ್ಲ ಕನ್ನಡ ಭಾಷೆಯನ್ನು ಕೆಡದಂತೆ ಪ್ರಜ್ಞಾಪೂರ್ವಕವಾಗಿ ಬಳಸುತ್ತಾ ತಮ್ಮತನದ ಛಾಪನ್ನು ಉಳಿಸಿ ಕನ್ನಡದ ಅಗ್ರಗಣ್ಯ ಕಥೆಗಾರರೆಂದು ಗುರುತಿಸಿಕೊಂಡದ್ದು ಇಂದು ಇತಿಹಾಸವಾಗಿದೆ.

ಪ್ರತಿವರ್ಷ ಅಗೋಸ್ತು ೩ರಂದು ಚಿತ್ತಾಲರ ಜನ್ಮದಿನ ನಿಮಿತ್ತ ಬೆಳಿಗ್ಗೆನೇ ಫೋನ್ ಮಾಡಿ ಶುಭಾಶಯಗಳನ್ನು ಸಲ್ಲಿಸಿದಾಗ ತುಂಬಾ ಖುಷಿಪಡುತ್ತಿದ್ದರು. 'ಇವತ್ತು ಏನು ವಿಶೇಷ ಸರ್?' ಎಂದು ಕೇಳುವುದೇ ತಡ ಸಣ್ಣ ಮಕ್ಕಳಂತೆ ಲವಲವಿಕೆಯಿಂದ ತಮ್ಮ ಹೊಸ ಪುಸ್ತಕದ ಬಿಡುಗಡೆಯ ಕುರಿತು ಅಥವಾ ದೀಪಾವಳಿ ವಿಶೇಷಾಂಕಕ್ಕಾಗಿ ತಾವು ಬರೆಯುತ್ತಿರುವ ಹೊಸ ಕಥೆಯ ಕುರಿತು



**ಮಮತಾ ರಾವ್ ಅವರು ಚಿತ್ತಾಲರ ನಿವಾಸಕ್ಕೆ ಭೇಟಿ ಕೊಟ್ಟ ಸಂದರ್ಭ**

ಮಾತನಾಡುತ್ತಿದ್ದರು. ಹಲವು ಸಲ ನಾವು 'ಸೃಜನಾ'ದ ಗೆಳತಿಯರು ಮೊದಲೇ ಫೋನಿನ ಮೂಲಕ ತಿಳಿಸಿ ಅವರ ಮನೆಗೆ ಭೇಟಿ ನೀಡಿದ್ದುಂಟು. ಹೆಚ್ಚಾಗಿ ನೀಲಿ ಬಣ್ಣದ್ದೆ ಟೀ ಶರ್ಟ್ ತೊಟ್ಟು ನೀಟಾಗಿ, ಸೋಫಾದಲ್ಲಿ ತಮ್ಮ ನಿಶ್ಚಿತ ಜಾಗದಲ್ಲಿ ಕುಳಿತು ನಾವು ಬರುವುದನ್ನೇ ಕಾಯುತ್ತಾ ಚಡಪಡಿಸುತ್ತಿದ್ದರು.

✍ ಡಾ. ಮಮತಾ ರಾವ್ (M: 9920045329)

ಕಾರಣಾಂತರದಿಂದ ಸ್ವಲ್ಪ ತಡವಾದರಂತೂ ಮನೆಗೆ ಹೋದಕೂಡಲೇ ಗದರಿಸುತ್ತಿದ್ದರು. ಆಮೇಲೆ ಸಾವರಿಸಿಕೊಂಡು ತಮ್ಮ ಸಹಜಸ್ಥಿತಿಗೆ ಮರಳುತ್ತಿದ್ದರು. ಆಪ್ತರು ಬರುವುದು, ಅವರೊಂದಿಗೆ ಸಂಭಾಷಿಸುವುದು ಸ್ನೇಹಾಕಾಂಕ್ಷಿಯಾಗಿದ್ದ ಅವರಿಗೆ ತುಂಬಾ ಇಷ್ಟದ ಸಂಗತಿ. ಚಹಾ–ತಿಂಡಿಯನ್ನು ಆಗ್ರಹದಿಂದ ತಿನ್ನಿಸುತ್ತಾ ಪ್ರತಿಯೊಬ್ಬರನ್ನು ಅತ್ಮೀಯತೆಯಿಂದ ಮಾತಾನಾಡಿಸುವ ಅವರ ಪರಿ ಅಮೋಘವಾದುದು. ಕತೆಗಾರ ವಸುಧೇಂದ್ರರೊಂದಿಗೆ ಅವರ ಮನೆಗೆ ಕೊನೆಯ ಬಾರಿಗೆ ಹೋದಾಗ ತಮ್ಮ ಪತ್ನಿಯನ್ನು ತಾವು ಮೊದಲಸಲ ಭೇಟಿಯಾದ ಸವಿ ನೆನಪುಗಳನ್ನು ಮೆಲುಕಾಡಿ ಪತ್ನಿಯನ್ನು ನಸು ನಾಚುವಂತೆ ಮಾಡಿದ್ದರು. ಅಂದಿನ ಅವರ ತುಂಟಾಟದ ನಗು ಕಂಡು ನಾವೆಲ್ಲರೂ ಸಂಭ್ರಮಿಸಿದ ಕ್ಷಣಗಳು ನನ್ನ ಮನಸ್ಸಿನಂಗಳದಲ್ಲಿ ಸದಾ ಹಸಿರಾಗಿಯೇ ಉಳಿಯುವಂಥದ್ದು.

ಯಶವಂತ ಚಿತ್ತಾಲರೊಂದಿಗಿನ ನನ್ನ ಕೊನೆಯ ಮಾತುಕತೆ ನಡೆದದ್ದು ನವೆಂಬರ ೨೦೧೩ರ ತಿಂಗಳಲ್ಲಿ. ಕಾರಣಾಂತರದಿಂದ ನನ್ನ ಪ್ರಕಟಿತ ಕೃತಿ 'ಮುಂಬಯಿ ಕನ್ನಡ ಕಥಾಸಾಹಿತ್ಯ' ದ ಪ್ರತಿಯನ್ನು ಪ್ರತ್ಯಕ್ಷವಾಗಿ ಅವರಿಗೆ ಕೊಡಲು ಅವಕಾಶ ಕೂಡಿ ಬರಲಿಲ್ಲ. ಆದರೂ ತಡಮಾಡಬಾರದೆಂಬ ಇಚ್ಛೆಯಿಂದ ಅಂಚೆಮುಖೇನ ಪುಸ್ತಕವನ್ನು ಕಳುಹಿಸಿಕೊಟ್ಟಿದ್ದೆ; ಹಾಗೂ ಸ್ವಲ್ಪ ಬಿಡುವು ಮಾಡಿಕೊಂಡು ಅವರನ್ನು ಭೇಟಿಯಾಗಬೇಕೆಂದಿದ್ದೆ. ಪುಸ್ತಕ ದೊರೆತ ಕೂಡಲೇ ಚಿತ್ತಾಲರು ಸ್ವತಃ ನನಗೆ ಫೋನ್ ಮಾಡಿದ್ದರು. 'ಕ್ಷಮಿಸಿ ಸರ್. . ನಾನೇ ಬರಬೇಕೆಂದು ಇದ್ದೆ, ಆದರೆ . .' ಎಂದಾಗ ತಟ್ಟನೆ 'ಏನಾಯಿತು? ನರಿ ಅಡ್ಡ ಬಂತೆ?' ಎಂದು ಪ್ರೀತಿಯಿಂದ ಗದರಿದ್ದರು. ಈಗೀಗ ಕಣ್ಣಿನ ರೆಪ್ಪೆಗಳನ್ನು ಎತ್ತಿಹಿಡಿದು ಬಹಳ ಪ್ರಯಾಸ ಪಟ್ಟು ಓದಬೇಕಾಗುತ್ತದೆ.

ಆದುದರಿಂದ ತಮ್ಮ ಕುರಿತಾದ ಭಾಗವನ್ನಷ್ಟೇ ಓದಿರುವೆನು ಎನ್ನುತ್ತಾ ಇಡಿ ಪುಸ್ತಕ ಓದಲು ತಾನು ಅಸಮರ್ಥನಾಗಿರುವ ಕುರಿತು ಕಳಕಳಿಯಿಂದ ಹೇಳಿಕೊಂಡರು. ಆಧುನಿಕ ಕನ್ನಡ ಸಾಹಿತ್ಯದ ಅಗ್ರಗಣ್ಯ ಲೇಖಕರು ಇಷ್ಟೊಂದು ಪ್ರೀತಿಯಿಂದ ಮಾತನಾಡುತ್ತಾರೆ ಎನ್ನುವುದೇ ಬಹಳ ಜನರಿಗೆ ಗೊತ್ತಿಲ್ಲದ ಸಂಗತಿ. ಅಂಥಹ ಅವಕಾಶವನ್ನು ಪಡೆದವರು ಧನ್ಯರೆ ಸೈ.

ಚಿತ್ತಾಲರನ್ನು ನೆನೆಸಿಕೊಂಡರೆ ಸಾಕು, ಫೋನಿನ ಮೂಲಕ ಅಥವಾ ಪ್ರತ್ಯಕ್ಷ ಭೇಟಿಯಲ್ಲಿ ಸಂಭಾಷಿಸುವಾಗ ಅವರ ದನಿಯಲ್ಲಿರುವ ಉತ್ಕಟವಾದ ಆನಂದ, ಉತ್ಸಾಹ ನನ್ನ ಕಿವಿಯಲ್ಲಿ ಗುಣುಗುಣಿಸುತ್ತದೆ. ಬಾಂದ್ರಾ ಬ್ಯಾಂಡ್ ಸ್ಟ್ಯಾಂಡಿನಲ್ಲಿರುವ ಅರಬ್ಬೀ ಸಮುದ್ರದ ಸುಂದರ ದೃಶ್ಯವನ್ನು ಕಣ್ತುಂಬ ಕಾಣಬಹುದಾದ ತಮ್ಮ ಮನೆಯ ಸೋಫಾದಲ್ಲಿ ಕಾಲಮೇಲೆ ಕಾಲು ಹಾಕಿ ಶಿಸ್ತಿನಿಂದ ಕುಳಿತು ನಗುಮುಖದಿಂದ ಮಾತನಾಡಿಸುವ ಪರಿ ಕಣ್ಣಿನ ಪರದೆಯ ಮೇಲೆ ನಲಿದಾಡುತ್ತದೆ. ಯಶವಂತ ಚಿತ್ತಾಲರು ನನ್ನಂತಹ ಸಾವಿರಾರು ಅಭಿಮಾನಿಗಳ ನೆನಪುಗಳಲ್ಲಿ, ಅವರ ಕತೆ–ಕಾದಂಬರಿಗಳಲ್ಲಿ ನೂರಾರು ವರ್ಷಗಳ ಕಾಲ ಅಜರಾಮರವಾಗಿ ಇರುತ್ತಾರೆ. ಈ ಲೇಖನ ಅವರ ನೆನಪಿನಂಗಳದಲ್ಲಿ ಹಚ್ಚಿಟ್ಟ ಹಣತೆ. ■

ಕೃತಿ ವಿಮರ್ಶೆ

# ಮಮತಾ ರಾವ್ ಅವರ ಮುಂಬಯಿ ಕನ್ನಡ ಕಥಾ ಸಾಹಿತ್ಯ

ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಇತ್ತೀಚೆಗಷ್ಟೇ ಪ್ರಕಟಿಸಿದ ಸಂಶೋಧನಾ ಪ್ರಬಂಧ ಮಮತಾ ರಾವ್ ಅವರ ಮುಂಬಯಿ ಕನ್ನಡ ಕಥಾ ಸಾಹಿತ್ಯ ಒಂದು ಅಧ್ಯಯನ. ಮಮತಾ ರಾವ್ ಅವರು ಬ್ಯಾಂಕ್ ಉದ್ಯೋಗಿಯಾಗಿ ಕನ್ನಡ ಸಾಹಿತ್ಯದತ್ತ ಒಲುಮೆ ತೋರಿಸಿ ಪಿ.ಎಚ್.ಡಿ. ಪದವಿಯನ್ನು ಪಡೆದು ಡಾಕ್ಟರ್ ಮಮತಾ ರಾವ್ ಎಂದು ಕರೆಯಿಸಿಕೊಳ್ಳುತ್ತಿರುವುದು ಸ್ತುತ್ಯಾರ್ಹವಾದುದು.

ಕನ್ನಡದಲ್ಲಿ ಕಾದಂಬರಿಯ ನಂತರ ಸಣ್ಣಕತೆ ಜನಪ್ರಿಯ ರೂಪವಾಗಿದೆ. ಇವು ಮನುಷ್ಯನ ವೈಯಕ್ತಿತ ಅನುಭವಗಳ ಕಲ್ಪನೆಗಳ ಸಮಾಜದ ಸ್ಥಿತಿಗತಿಗಳ ಅಭಿವ್ಯಕ್ತಿಗಳು ಈ ಸಾಹಿತ್ಯ ಪ್ರಕಾರದಲ್ಲಿ ಕೃಷಿ ಮಾಡುವವರ ಸಂಖ್ಯೆಯೂ ಅಪಾರ. ಹೀಗೆ ಪ್ರಕಟಗೊಳ್ಳುವ ಸಣ್ಣಕಥೆಗಳ ಸಂಖ್ಯೆಯನ್ನು ಲೇಖಕರ ಸಂಖ್ಯೆಯನ್ನು ಹೇಳುವುದು ಪ್ರಯಾಸದ ಕೆಲಸವೇ ಆಗಿದೆ. ಇದರಿಂದ ಮುಂಬಯಿ ಕಥಾಲೋಕವು ಹೊರತಾಗಿಲ್ಲ. ಆದರೆ, ಮಮತಾ ರಾವ್ ಅವರು ಇದನ್ನೇ ಆಸಕ್ತಿಯಾಗಿಸಿಕೊಂಡು ಅಧ್ಯಯನ ಕೈಗೊಂಡು ಸಫಲರಾಗಿದ್ದಾರೆ. ಇಲ್ಲಿ ಕಥೆಗಾರರಷ್ಟೇ ಅಲ್ಲದೆ ಅವರು ಬರೆದ ಕಥೆಗಳನ್ನು ಶೋಧಿಸಿ, ವಿನ್ಯಾಸಗೊಳಿಸಿ ಸಂಶೋಧನಾ ರೂಪವಾಗಿ ಅಭ್ಯಸಿಸಿದ್ದು ಶ್ಲಾಘನೀಯ.

ಡಾ. ಮಮತಾರವರ ಪ್ರಬಂಧವನ್ನು ಓದಿದಾಗ ಮುಂಬಯಿಯಲ್ಲಿ ಇಷ್ಟೊಂದು ಕಥೆಗಾರರಿದ್ದಾರೆಯೇ ಎಂಬುದು ಅಚ್ಚರಿಯೆನಿಸುತ್ತದೆ. ಮುಂಬಯಿ ಕನ್ನಡ ಕಥೆಗಳಿಗೆ ವಿಸ್ತೃತವಾದ ಹಾಗೂ ಸುದೀರ್ಘವಾದ ಇತಿಹಾಸವೇ ಇದೆ. ಈ ಮಹಾಪ್ರಬಂಧದಲ್ಲಿ ಮುಂಬಯಿ ಕನ್ನಡ ಕಥಾ ಸಾಹಿತ್ಯದ ಹಿನ್ನೆಲೆಯಾಗಿ ಕರ್ನಾಟಕದಲ್ಲಿ ಬೆಳೆದು ಬಂದ ಸಣ್ಣಕಥೆಗಳ ಪರಂಪರೆಯ ಸವಿಸ್ತಾರ ವಿವರಣೆ ಇದೆ. ನಾಲ್ಕನೆಯ ಅಧ್ಯಾಯವು ಬೆಳಕಿಗೆ ಬಾರದ, ಬಂದ ಹಲವಾರು ಹಿರಿಯ ಕಿರಿಯ ಲೇಖಕರ ಪರಿಚಯಕ್ಕೆ ಮೀಸಲಾಗಿದೆ. ಇಲ್ಲಿ ಕಥೆಗಾರರ ಕಥಾಪ್ರಪಂಚದಲ್ಲಿಯ ಕೆಲವೊಂದು ಕಥೆಗಳನ್ನು ಉದಾಹರಣೆಯಾಗಿ ನಿರೂಪಿಸಿ ಕಥೆಗಳ ಕುರಿತಾಗಿ ಕುತೂಹಲ ಮೂಡಿಸಿದ್ದಾರೆ ಕಥೆಗಾರರ ವೈಯಕ್ತಿಕ ವಿವರಣೆಗಳೊಂದಿಗೆ ಕಥೆಗಳ ಸಮಗ್ರ ಪರಿಚಯ ದೊರೆಯುತ್ತದೆ.

ಈ ಅಧ್ಯಯನವು ಪ್ರಸಿದ್ಧಿಗೆ ಬಂದ ಕಥೆಗಾರರನ್ನಷ್ಟೇ ಅವಲಂಬಿಸಿ ನಡೆದದ್ದಲ್ಲ. ಮರೆಯಲ್ಲಿಯ ಕಥೆಗಾರರನ್ನು ಅರಸಿಕೊಂಡು ಅವರ ಕಥೆಗಳನ್ನು ಆಳವಾಗಿ ಓದಿ ಅದರ ವಸ್ತು ಆಶಯವನ್ನು ತಿಳಿಯಪಡಿಸಿದ್ದು ಈ ಮಹಾಪ್ರಬಂಧದ ವೈಶಿಷ್ಟ್ಯ. ಪ್ರಸ್ತುತ ಪ್ರಬಂಧದಲ್ಲಿಯ ನಾಲ್ಕನೆಯ ಅಧ್ಯಾಯವು ಇಡೀ ಮುಂಬಯಿ ಕಥಾಲೋಕದ ಒಳಹೊರಗನ್ನು ಅದ್ಭುತವಾಗಿ ನಿರೂಪಿಸಿದೆ. ಒಟ್ಟು 59 ಜನ ಕಥೆಗಾರರನ್ನು ಗುರುತಿಸಿದ ಸಂಶೋಧಕರು ಇನ್ನೂ ಅಗಣಿತ ಕಥೆಗಾರರು ಮುಂಬಯಿಯಲ್ಲಿ ಬಿಡಿ ಕಥೆಗಳನ್ನು ಬರೆಯುತ್ತಿದ್ದಾರೆ. ಆದರೆ, ಪ್ರಕಟಿಸುವ ಆಸಕ್ತಿಯನ್ನು ಇವರು ತೋರಿಲ್ಲ ಎಂದು ಹೇಳುತ್ತಾರೆ. ಆದರೆ, ಅಧ್ಯಯನದ ವ್ಯಾಪ್ತಿಯ ಉದ್ದಗಲಕ್ಕೂ ಪಯಣಿಸಿ ಕಥೆಗಾರರ ಬರವಣಿಗೆಯ ರೀತಿ ಪ್ರಯೋಗಗಳ ಕುರಿತಾಗಿ ಸೂಕ್ಷ್ಮವಾಗಿ ಅವಲೋಕಿಸಿದಾರೆ.

ಮುಂಬಯಿ ಕಥಾಗಾರರ ಕಥೆಗಳು ವಾಸ್ತವಕ್ಕೆ ಹತ್ತಿರವಾದಂಥವುಗಳು. ಇಲ್ಲಿ ಬದುಕಿನ ಸರ್ವಾಂಶಗಳು ಅನಿವಾರ್ಯವಾಗಿ ಕಥೆಯಲ್ಲಿ ಮೂಡಿಬಂದರೂ ಕೊನೆಯ ಗುರಿ ಮಾತ್ರ ಮುಂಬಯಿ ಜಗತ್ತಿನ ಹಿನ್ನೆಲೆ. ಮುಂಬಯಿ ಕನ್ನಡ ಕಥಾ ಸಾಹಿತ್ಯದ ಪ್ರಾರಂಭದ ಘಟ್ಟದಿಂದ ಅಂದರೆ, 1930 ರಿಂದ ಇತ್ತೀಚಿನ ಕಥೆಗಾರರವರೆಗಿನ ವ್ಯಾಪ್ತಿಯನ್ನು ಇಟ್ಟುಕೊಂಡು ನಡೆಸಿದ ಅಧ್ಯಯನ ಮುಂಬಯಿ ಮಹಿಳಾ ಕಥೆಗಾರರ ಕಥಾಲೋಕವು ಈ ಅಧ್ಯಯನದ ಪ್ರಮುಖ ಅಂಶಗಳಲ್ಲಿ ಒಂದು. ಮುಂಬಯಿ ಕಥೆಗಾರ್ತಿಯರು ವಿವಿಧ ಪರಿಸರ, ಸಂಸ್ಕೃತಿಗಳ ಹಿನ್ನೆಲೆ ಉಳ್ಳವರು. ಮುಂಬಯಿಯನ್ನು ತಮ್ಮದಾಗಿಸಿಕೊಂಡ ಮೇಲೆ ಹೊಸ ಪರಿಸರದ ವಿಭಿನ್ನತೆ ಅವರಿಗೆ ಅಚ್ಚರಿಯಾಗಿ ಕಂಡಿದೆ. ಮುಂಬಯಿ ಜನಜೀವನ ಒಳಿತುಕೆಡಕುಗಳನ್ನು, ಆಚಾರ ವಿಚಾರಗಳನ್ನು, ಶಕ್ತಿ ದೌರ್ಬಲ್ಯಗಳನ್ನು ತಮ್ಮ ಲೇಖನಿಯ ಮೂಲಕ ವ್ಯಕ್ತಪಡಿಸಿರು. ತಾವು ಕಂಡಿದ್ದು, ಕೇಳಿದ್ದು, ಅನುಭವಿಸಿದ ಘಟನೆಗಳನ್ನು ಕಥಾ ರೂಪದಲ್ಲಿ ಪುನಃ ಸೃಷ್ಟಿಸಿದರು. ಮುಂಬಯಿಯ ಕಥೆಗಾರರು ಕರ್ನಾಟಕದ ಸ್ತ್ರೀವಾದಿ ಲೇಖಕರಿಗಿಂತಲೂ ಮುನ್ನವೇ ಸ್ತ್ರೀ ಸ್ವಾತಂತ್ರ್ಯ ಕುರಿತು ಕಥೆಗಳನ್ನು ಬರೆದವರು ಎಂಬುದು ಗಮನಾರ್ಹ ಸಂಗತಿ.

ಮುಂಬಯಿ ಲೇಖಕರು ಅನಾಥ ಪ್ರಜ್ಞೆ, ವಸತಿ ಸಮಸ್ಯೆ, ಶೋಷಣೆ, ಮಾನವೀಯತೆ, ಕೋಮುಸೌಹಾರ್ದತೆ ಹೀಗೆ ಬದುಕಿನ ಹಲವಾರು ಸಮಸ್ಯೆಗಳು ಕಥೆಗಳ ಮುಖಾಂತರ ಪರಿಚಯಿಸಿ ಕೊಟ್ಟಿದ್ದಾರೆ. ಕಥೆಗಳಲ್ಲಿಯ ಪಾತ್ರಗಳ ಹೃದ್ಗತವಾದ ನೈಜಧ್ವನಿಯನ್ನು ಕೇಳಿಸಿದ್ದಾರೆ. ಅವರು ಕಲ್ಪನಾಲೋಕಕ್ಕೆ ತಮ್ಮ ಕಥೆಗಳಲ್ಲಿ ಹೆಚ್ಚು ಆಸ್ಪದ ನೀಡಿಲ್ಲ. ಇಲ್ಲಿಯ ಕಥೆಗಳು ಮನುಷ್ಯ ಸಂಬಂಧದ ಅವಸ್ಥೆಯನ್ನು ಸೂಚಿಸುತ್ತವೆ.

ಮುಂಬಯಿ ಕಥೆಗಾರರ ಕನ್ನಡ ಭಾಷೆಯ ಕುರಿತಾದ ಅಭಿಮಾನ ಅವರ ಕಥೆಗಳಲ್ಲಿ ಕಾಣಿಸುವ ಹೊಸತನ, ಅನನ್ಯತೆ, ಇತರ ಕನ್ನಡ ಕಥೆಗಳಿಗಿಂತ ಹೇಗೆ ಭಿನ್ನ ಎಂಬ ಹತ್ತು ಹಲವಾರು ಉದ್ದೇಶಗಳನ್ನು ಹೊಂದಿ ನಡೆಸಿದ ಡಾ. ಮಮತಾ ರಾವ್ ಅವರ ಅಧ್ಯಯನ ಇವುಗಳನ್ನು ಸ್ಪಷ್ಟಗೊಳಿಸುವಲ್ಲಿ ಸಫಲತೆ ಕಂಡಿವೆ. ಈ ಮಹಾಪ್ರಬಂಧವು ಮುಂಬಯಿ ಕಥಾಲೋಕಕ್ಕಷ್ಟೇ ಸೀಮಿತವಾಗಿದ್ದರೂ ಒಟ್ಟು ಕಥೆಗಾರರ ಸಾಧನೆಯು ಅಪರೋಕ್ಷವಾಗಿ ಕಾಣಿಸಿಕೊಂಡಿದೆ. ಸಂಶೋಧಕರು ನಿರ್ಣಯಾತ್ಮಕ ಅಭಿಪ್ರಾಯಗಳ್ನು ನೀಡಿ ಅಧ್ಯಯನದ ಖಚಿತತೆಯನ್ನು ಭದ್ರಗೊಳಿಸಿದ್ದಾರೆ.

ಡಾ. ಮಮತಾ ರಾವ್ ಅವರು ರಚಿಸಿದ ಗಿರೀಶ್ ಕಾರ್ನಾಡ್‌ರ ನಾಟಕಗಳಲ್ಲಿ ಸ್ತ್ರೀ (ಸಂಪ್ರಬಂಧ) ಹಾಗೂ ಕೈಲಾಸಾಧಿಪತಿಯ ಮನೆಯಂಗಳದಿ ಪ್ರವಾಸಕಥನ ಓದುಗರ ಮೆಚ್ಚುಗೆಯನ್ನು ಪಡೆದಿವೆ. ಈ ಪಟ್ಟಿಯಲ್ಲಿ 'ಮುಂಬಯಿ ಕನ್ನಡ ಕಥಾ ಸಾಹಿತ್ಯ - ಒಂದು ಅಧ್ಯಯನ' ಹೊಸ ಸೇರ್ಪಡೆ ಎನ್ನಬಹುದು.

ಕನ್ನಡ ನಾಡಿನಲ್ಲಿ ಬೆಳೆದು ಬಂದ ಕಥಾ ಸಾಹಿತ್ಯದಷ್ಟೇ ಸಮಾನ ಶ್ರೀಮಂತಿಕೆಯನ್ನು ಮುಂಬಯಿ ಕಥಾ ಸಾಹಿತ್ಯವೂ ಪಡೆದಿದೆ. ಇದನ್ನು ಗುರುತಿಸಿ ನಿರೂಪಿಸಿದ ಡಾ. ಮಮತಾ ರಾವ್ ಅವರು ಅಭಿನಂದನಾರ್ಹರು.

– *ಚಂದ್ರ ಮುತಾಲಿಕ*

(M: 09819552104)


# ಚಿತ್ತಾಲರ ಪಯಣ

ಕಳೆದ ಮಾರ್ಚ್ 22 ರಂದು ಚಿತ್ತಾಲರು ತಮ್ಮ ಇಹಲೋಕದ 'ಪಯಣ' ಮುಗಿಸಿದರು. ಕಪ್ಪು ಪೊತ್ತೆ ಮೀಸೆಯವನು ಬಂದು ಕದ ತಟ್ಟಿದನೋ ಅಥವಾ ತಲೆಯ ಮೇಲೆ ಕಂಬಳಿ ಕೊಪ್ಪೆ ಹಾಕಿಕೊಂಡಿದ್ದವನು ಬಂದು ಕರೆದನೋ - ಹೇಳಲು ಇಂದು ಚಿತ್ತಾಲರಿಲ್ಲ. ಸುಮಾರು ನಾಲ್ಕು ದಶಕಗಳ ಹಿಂದೆ ಪ್ರಕಟವಾದ ಚಿತ್ತಾಲರ 'ಆಟ' ಕನ್ನಡ ಸಣ್ಣಕತೆಯ ಇತಿಹಾಸಕ್ಕೆ ಹೊಸ ಆಯಾಮ ತಂದುಕೊಟ್ಟ ಕೃತಿ ಹಾಗೂ ಪ್ರಮುಖ ವಿಮರ್ಶಕರು ಗುರುತಿಸಿ ಪ್ರಶಂಸಿಸಿದ ಕೃತಿ. ಚಿತ್ತಾಲರೇ ಹೇಳಿಕೊಂಡಿರುವಂತೆ "ಆಟ ನನ್ನ ಈವರೆಗಿನ ಬರವಣಿಗೆಯಲ್ಲೇ ಒಂದು ಅನನ್ಯವಾದ ಘಟನೆಯಾಗಿದೆ. ನನ್ನ ಕತೆಗಳು ತೆಗೆದುಕೊಂಡ ಹೊಸ ತಿರುವು ಎನ್ನುವುದಕ್ಕಿಂತ ಹೆಚ್ಚಾಗಿ ಒಂದು ಹಂತ ಫಕ್ಕನೆ ಕೊನೆಗೊಂಡು ಹೊಸತೇ ಒಂದರ ಆರಂಭಕ್ಕೆ ಜನ್ಮವಿತ್ತ ಕತೆಗಳಾಗಿ ತೋರುವಷ್ಟು ಆಟದ ಕತೆಗಳು ಈ ಮೊದಲಿನ ಕತೆಗಳಿಗಿಂತ ಭಿನ್ನವಾಗಿವೆ".

1949 ರಲ್ಲಿ 'ಬೊಮ್ಮಿಯ ಹುಲ್ಲು ಹೊರೆ' ಕತೆಯ ಮೂಲಕ ಚಿತ್ತಾಲರು ಸಾಹಿತ್ಯ ಲೋಕಕ್ಕೆ ಕಾಲಿರಿಸಿದರು. ಅವರ ಆರಂಭದ ಕತೆಗಳಲ್ಲಿ ಮಾಸ್ತಿಯವರ ಪ್ರಭಾವ ಕಂಡುಬಂದರೂ 'ಆಟ'ದ ಆರು ಕತೆಗಳಲ್ಲಿ 'ಚಿತ್ತಾಲತನ'ದ ಮುದ್ರೆ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಸಂಕಲನದಲ್ಲಿರುವ ಸೆರೆ, ಹಾವು, ಅದೃಷ್ಟ, ಆಟ, ಛಲ ಕತೆಗಳ ಕಥಾವಸ್ತು ಚಿತ್ತಾಲರು ಬಾಲ್ಯ ಕಳೆದ ಹನೇಹಳ್ಳಿ ಮತ್ತು ಅದರ ಪರಿಸರ. ಆದರೆ, 'ಪಯಣ' ಈ ಕತೆಗಳಿಗಿಂತ ಭಿನ್ನ. ಇಡೀ ಕತೆ ಕೇವಲ ಒಂದು ರಾತ್ರಿಗೆ ಸೀಮಿತವಾಗಿದ್ದು. ಎಲ್ಲಾ ಘಟನೆ ನಡೆಯುವುದು ಕಲ್ಕತ್ತಾದ ಗ್ರಾಂಡ್ ಹೋಟೇಲ್‌ನ ಒಂದು ರೂಮಿನಲ್ಲಿ. ಕಥಾ ನಾಯಕ ಮುಂಬಯಿಯ ರೇಜರ್ ಬ್ಲೇಡ್ ಮಾರುವ ಕಂಪೆನಿಯ ಉಚ್ಚ ತರಗತಿಯ ಟ್ರಾವೆಲ್ಲಿಂಗ್ ಸೇಲ್ಸ್‌ಮನ್. ಕಂಪೆನಿಯ ಕೆಲಸಕ್ಕಾಗಿ ಕಲ್ಕತ್ತಾಕ್ಕೆ ಬಂದು ಅಲ್ಲಿಯ ಹೊಟೇಲ್‌ನಲ್ಲಿ ತಂಗಿದ್ದಾನೆ. ಅವನ ಹೆಸರಿನಲ್ಲಿ ರೂಮ್ ಹತ್ತು ದಿನಕ್ಕಾಗಿ ಕಾದಿರಿಸಿದೆ. ಹಾಗಂತ ಅವನು ಕಲ್ಕತ್ತಾಕ್ಕೆ ಬಂದದ್ದೂ ತುಂಬಾ ಅನಿರೀಕ್ಷಿತವೇ. ಅವನ ಸಹೋದ್ಯೋಗಿ ಅವಸರದಲ್ಲಿ ಮದುವೆಯಾಗಿ ಹನಿಮೂನಿಗೆ ಹೋದ ಕಾರಣ ಅವನ ಬಾಸ್ ಈತನನ್ನು ಕಲ್ಕತ್ತಾಕ್ಕೆ ಅಟ್ಟಿದ್ದ. ಇಲ್ಲಿಂದ ಮುಂದೆ ಎಲ್ಲಿಗೆ ಹೋಗಬೇಕೆಂಬುದೂ ಈತನಿಗೆ ಅರಿವಿಲ್ಲ. ಹೊಟೇಲ್‌ನ ರಿಜಿಸ್ಟರ್‌ನಲ್ಲಿ ಯುವರ್ ನೆಕ್ಸ್ಟ್ ಡೆಸ್ಟಿನೇಶನ್ ಕಾಲಮಿನಲ್ಲಿ 'ನಾಟ್ ನೋನ್' ಎಂದೇ ಬರೆದಿದ್ದ. ಆದರೆ, ಅಂದು ಮುಸ್ಸಂಜೆ ಒಬ್ಬ ಅಪರಿಚಿತ ಕದ ತಟ್ಟಿ ಒಳ ಬಂದು ಮುಂಜಾನೆ ಕೋಳಿ ಕೂಗುವ ಮುಂಚೆಯೇ ತಾನು ಬರುವುದಾಗಿಯೂ ಆ ವೇಳೆಗೆ ಹೊರಡಲು ತಯಾರಿರಬೇಕೆಂದು ಅಣತಿ ಇತ್ತು ನಡೆದಿದ್ದ.

ಅಪರಿಚಿತ ಹೋದ ಮೇಲೆಯೇ ಈತನ ಗಲಿಬಿಲಿ ಶುರುವಾಗಿದ್ದು. ರೂಮಿನಲ್ಲಿ ಅಸ್ತವ್ಯಸ್ತವಾಗಿ ಬಿದ್ದಿದ್ದ ಬಟ್ಟೆಗಳನ್ನು ಒಟ್ಟು ಮಾಡಿ ಸೂಟ್‌ಕೇಸಿನಲ್ಲಿ ತುಂಬುತ್ತಾನೆ. ಬೆಳಿಗ್ಗೆ ಬೇಗ ಹೊರಡಬೇಕೆಂದು ಸಾಕಷ್ಟು ಗಡ್ಡ ಬೆಳೆಯದೇ ಇದ್ದರೂ ಸೋಪು ಹಚ್ಚಿ ನುಣ್ಣಗೆ ಶೇವ್ ಮಾಡಿಕೊಳ್ಳುತ್ತಾನೆ. ಲಾಂಡ್ರಿಗೆ ಫೋನ್ ಮಾಡಿ ತನ್ನ ಬಟ್ಟೆಗಳನ್ನು ತರಿಸಿಕೊಳ್ಳುತ್ತಾನೆ. ಮುಂಬಯಿಗೆ ಫೋನ್ ಮಾಡಿ ತನ್ನ ಬಾಸ್‌ಗೆ ತನ್ನ ಅನಿರೀಕ್ಷಿತ ಪಯಣದ ಬಗ್ಗೆ ತಿಳಿಸಲು ಪ್ರಯತ್ನಿಸುತ್ತಾನೆ. ಆದರೆ, ಮುಂಬಯಿಯ ಲೈನ್ ಸಿಗದೆ ಬಾಸ್ ಜೊತೆಗೆ ಮಾತನಾಡಲು ಸಾಧ್ಯವಾಗುವುದಿಲ್ಲ.

ಕತೆಯ ನಾಯಕ ಸುಮಾರು ನಲ್ವತ್ತು ವರ್ಷ ದಾಟಿದ ಮನುಷ್ಯ. ಹೆಂಡತಿಯಿಲ್ಲ, ಮಕ್ಕಳಿಲ್ಲ. ಹತ್ತಿರದ ಸಂಬಂಧಿಕರೂ ಇಲ್ಲ. ಹಾಗಾಗಿ ಯಾರು ಬೇಕಾದರೂ ಅವನನ್ನು ತನಗೆ ಬೇಕಾದಂತೆ ಉಪಯೋಗಿಸಿಕೊಳ್ಳಬಹುದು. ತನ್ನ ಹಿಂದಿನ ಟೂರ್ ಮುಗಿಸಿ ಬರುತ್ತಿದ್ದಂತೆಯೇ ಅವನ ಬಾಸ್ ಕಲ್ಕತ್ತಾಕ್ಕೆ ಹೊರಡಲು ಹೇಳಿದಾಗ, ಚಿಕ್ಕಂದಿನಲ್ಲಿ ಅವನ ಗೆಳೆಯರು ಸಿನಿಮಾಕ್ಕೆ ಕರೆದಾಗ ಎಷ್ಟು ಸಹಜವಾಗಿ ಒಪ್ಪುತ್ತಿದ್ದನೋ ಅಷ್ಟೇ ಸಹಜವಾಗಿ ಅವನ ಬಾಸ್‌ಗೆ ಒಪ್ಪಿಗೆ ಇತ್ತಿದ್ದ. ಅದೇ ರೀತಿ ಮುಸ್ಸಂಜೆಯಲ್ಲಿ ಬಂದ ಆಗುಂತಕ ಕೋಳಿ ಕೂಗುವ ಮುನ್ನವೇ ಹೊರಡಲು ಹೇಳಿದಾಗಲೂ ಹಿಂದೆ ಮುಂದೆ ಯೋಚಿಸದೆ ಒಪ್ಪಿಗೆ ಕೊಟ್ಟಿದ್ದ. ಅವನ ಸ್ವಭಾವವೇ ಹಾಗೆ. ಯಾವುದೇ ವಿಷಯಕ್ಕೂ ಎಂದೂ ಉಲ್ಲಂಘನೆ. ನಿರಾಕರಣೆ, ಪ್ರತಿಭಟನೆ



ತೋರಿದವನೇ ಅಲ್ಲ. ಅಪರೂಪಕ್ಕೊಮ್ಮೆ ಆತನಿಗೆ ಸಿಟ್ಟು ಬಂದಾಗ ಅದರ ಬಗ್ಗೆ ಖುಶಿ ಪಡುತ್ತಾನೆ. ತನ್ನ ಪ್ರವಾಸ ಮೊಟಕುಗೊಳಿಸಿದ್ದರ ಬಗ್ಗೆ ರಿಸೆಪ್ಶನ್ ಅವರಿಗೆ ತಿಳಿಸಿದಾಗ ಆತ ಮಾತು ಮುಂದುವರಿಸಲು ಕೊಡದೆ ಫೋನ್ ಕುಕ್ಕುತ್ತಾನೆ. ಹಾಗೆಯೇ ಲಾಂಡ್ರಿಯವನೊಂದಿಗೆ ದನಿ ಎತ್ತರಿಸಿ ಮಾತನಾಡುತ್ತಾನೆ. ಪ್ರತ್ಯಕ್ಷವಾಗಿ ಯಾರಿಗೂ ಗದರಿಸಲು ತನ್ನಿಂದ ಸಾಧ್ಯವಿಲ್ಲವೆಂದು ಆತನಿಗೆ ಅರಿವಿದೆ. ಹಾಗಾಗಿ ಪರೋಕ್ಷವಾಗಿ ಬೇರೆಯವರನ್ನು ವಿರೋಧಿಸಿದಾಗ ಅವ್ಯಕ್ತ ಆನಂದವನ್ನು ಅನುಭವಿಸುತ್ತಾನೆ.

ನಾಯಕನ ವ್ಯಕ್ತಿತ್ವವನ್ನು ಅನಾವರಣಗೊಳಿಸುವ ಚಿತ್ತಾಲರ ರೀತಿ ವೈಶಿಷ್ಟ್ಯಪೂರ್ಣವಾಗಿದೆ. ಚಿಕ್ಕಂದಿನಲ್ಲಿ ತಂದೆಯ ಕೋಪ ಹೊಡೆತಕ್ಕೆ ಹೆದರಿ ಬಾಯಿ ಬಿಡಲು ಹೆದರುತ್ತಿದ್ದ ಮಗುವಿಗೆ ಮುಂದೆಯೂ ಪ್ರತಿಭಟನೆಗೆ ಅರ್ಥವೇ ಇಲ್ಲ ಎನ್ನುವುದೇ ಅವನ ಜೀವನದ ತತ್ವಜ್ಞಾನವಾಯಿತು. ರಾತ್ರಿಯ ವೇಳೆ, ತನ್ನದೇ ಆದ ಸ್ವಂತಿಕೆ ಇರದ ನಾಯಕ, ರೂಮಿನಲ್ಲಿ ಅಸ್ತವ್ಯಸ್ತವಾಗಿ ಹರಡಿಕೊಂಡಿರುವ ಬಟ್ಟೆಗಳು ಇವುಗಳ ಮೂಲಕ ಚಿತ್ತಾಲರು ಓದುಗನನ್ನು ಯಾವುದೋ ಒಂದು ನಿಗೂಢ ಸನ್ನಿವೇಶದತ್ತ ಎಳೆದೊಯ್ಯುತ್ತಾರೆ. ಕೋಳಿ ಕೂಗುವ ಮೊದಲೇ ಹೊರಡಲು ತಯಾರಿ ನಡೆಸಿದ ನಾಯಕ ರೂಮ್ ಬಾಯ್‌ಗೆ ಬೆಳಿಗ್ಗೆ ನಾಲ್ಕು ಗಂಟೆಗೇ ಎಬ್ಬಿಸಲು ಹೇಳಿ ಮಲಗುತ್ತಾನೆ. ಮಧ್ಯ ರಾತ್ರಿಯಲ್ಲಿ ಗುಡುಗು, ಮಿಂಚು, ಮಳೆ ಸುರಿಯುತ್ತಿದ್ದಾಗ ಧಡಕ್ಕನೆ ಎದ್ದಾಗ ಮುಸ್ಸಂಜೆ ಬಂದ ಅಪರಿಚಿತನ ನೆನಪಾಗುತ್ತದೆ. ಕೆದರಿದ ಕೂದಲು, ಹರವಾದ ಭುಜಗಳು, ಹರವಾದ ಎದೆ, ಮಾಂಸಲ ಕೈ ರಟ್ಟೆಗಳು, ಕಪ್ಪು ಮೈ ಬಣ್ಣ, ಮೋರೆಗೆ ಇಷ್ಟುದ್ದ ಕಪ್ಪು ಪೊತ್ತೆ ಮೀಸೆಗಳು, ಕಪ್ಪು ಎದೆಯ ಮೇಲೆ ಕಪ್ಪು ರೋಣೆ, ಎಡಗೈ ರಟ್ಟೆಗೆ ಕಪ್ಪು ಬಣ್ಣದ ಇಷ್ಟು ದಪ್ಪ ದಾರ, ಬಂದ ಕದ ತಟ್ಟಿದ, ತಾನೇ ಕದ ತೆರೆದ, ಸೊಂಟದವರೆಗಿನ ದೇಹ ಒಳಗೆ ಹಾಕಿದ "ನಾಳೆ ನಸುಕಿನಲ್ಲಿ ಕೋಳಿ ಕೂಗುವ ಮೊದಲೇ ಹೊರಡಬೇಕು ಸಿದ್ಧವಾಗಿರು" ಎಂದು ಮೈ ತೆಗೆದುಕೊಂಡ. ಜೀವನದುದ್ದಕ್ಕೂ ಎಲ್ಲರಿಗೂ ವಿಧೇಯನಾಗಿ ನಡೆದುಕೊಂಡಿದ್ದ ನಾಯಕ ಸಂಜೆ ಕದ ತಟ್ಟಿ ಕರೆದ ಆಗುಂತಕನಿಗೂ ಒಪ್ಪಿಗೆ ಕೊಟ್ಟಿದ್ದ ಅಜ್ಜ ಸತ್ತ ರಾತ್ರಿಯನ್ನು ನೆನೆಯುತ್ತಾ ಪುನಃ ನಿದ್ದೆ ಮಾಡುತ್ತಾನೆ. ಅವನಲ್ಲಿ ಯಾವುದೇ ಕಳವಳ ಇಲ್ಲ, ಗೊಂದಲವೂ ಇಲ್ಲ. ಮುಂಜಾನೆ ನಾಲ್ಕು ಘಂಟೆಗೆ ಅವನನ್ನು ಎಬ್ಬಿಸಲು ಮರೆತ ರೂಮ್ ಬಾಯ್ ಐದು ಘಂಟೆಗೆ ಬಂದು ನೋಡಿದಾಗ ನಾಯಕ ದೂರದ ಲೋಕಕ್ಕೆ ಪಯಣ ಬೆಳೆಸಿರುತ್ತಾನೆ. ಜೀವನದಂತೆ ಸಾವೂ ಕೂಡ ಅತ್ಯಂತ ಸಹಜವಾದದ್ದು. ಇಲ್ಲಿಯ ನಾಯಕ ಜೀವನದುದ್ದಕ್ಕೂ ಬೇರೆಯವರ ನಿರ್ಧಾರಕ್ಕನುಗುಣವಾಗಿಯೇ ನಡೆದವನು. ಮುಂದಿನ ಡೆಸ್ಟಿನೇಶನ್ ನಾಟ್ ನೋನ್ ಎನ್ನುತಲೇ ಕಪ್ಪು ಪೊತ್ತೆ ಮೀಸೆಯವನೊಡನೆ ಹೊರಟು ಬಿಡುತ್ತಾನೆ

ಚಿತ್ತಾಲರು ತಮ್ಮ ಸೃಷ್ಟಿಕ್ರಿಯೆಯ ಜೀವಸೆಲೆಗಳಲ್ಲಿ ತಾನು ಅನುಭವಿಸುವ ಕ್ರಮಗಳನ್ನು ನಿರ್ಧರಿಸಿ, ತಮ್ಮ ಸಂವೇದನೆಯ ಮೇಲೆ ನನ್ನತನದ ಮುದ್ರೆಯೊತ್ತಿದ್ದ ಮೂಲ ಕಾರಣಗಳಲ್ಲಿ ಮೂರು ಮುಖ್ಯವಾಗಿದೆಯೆಂದು ನನಗೆ ತೋರಿದೆ. ಹನೇಹಳ್ಳಿ ನನ್ನ ಅಪ್ಪನ ಸಂಬಂಧ ಹಾಗೂ ಮೃತ್ಯು ಪ್ರಜ್ಞೆ ಎಂದು ಹೇಳಿಕೊಂಡಿದ್ದಾರೆ. ಆಟ ಸಂಕಲನದ ಮೂರು ಕತೆಗಳಲ್ಲಿ ಸಾವಿನ ಚಿತ್ರಣ ಚಿತ್ರಿತವಾಗಿದೆ. ಎಳೆಯ ವಯಸ್ಸಿನಲ್ಲೇ ತೀರಿಕೊಂಡ ಅವರ ಅಣ್ಣ, ಭೀಕರ ಅಪಘಾತದಲ್ಲಿ ಮರಣ ಹೊಂದಿದ ಅವರ ತಂದೆ, ಈ ಘಟನೆಗಳು ಅವರ ಮನದಲ್ಲಿ ಅಚ್ಚಳಿಯದ ಗಾಯವನ್ನು ಮೂಡಿಸಿದ್ದಿರಬಹುದು. ಸಾವನ್ನು ಪಯಣದೊಂದಿಗೆ ಸಮೀಕರಿಸುವ ರೀತಿ ಅಪೂರ್ವವಾಗಿದೆ. ಚಿತ್ತಾಲರ ಓದಲೇಬೇಕಾದ ಕತೆಗಳಲ್ಲಿ ಇದೂ ಒಂದು.

✍ ರಮಾ ಉಡುಪ, ಥಾಣೆ. (M: 9820551203)

# ಕಥಾ ಸಾಗರ ಯಶವಂತ ಚಿತ್ತಾಲ

ಮಾನವ ಸಮಾಜದಲ್ಲಿ ಪ್ರೀತಿಯನ್ನು ಸ್ಥಾಪಿಸುವುದೇ ಎಲ್ಲ ಸೃಷ್ಟಿ ಕಾರ್ಯಗಳ ಅಂತಿಮ ಗುರಿಯೆಂದು ಸಾರಿದ ಚಿತ್ತಾಲರ ಚೇತನವಿಂದು ಅನಂತದಲ್ಲಿ ಲೀನವಾಗಿದೆ. ತಮ್ಮ ಬ್ಯಾಂಡಸ್ಟ್ಯಾಂಡ್ ಅಪಾರ್ಟ್‌ಮೆಂಟ್‌ನಲ್ಲಿ ಸಾಗರಕ್ಕೆದುರಾಗಿ ಕುಳಿತು ಕಥಾಸಾಹಿತ್ಯ ಶರಧಿಯಲ್ಲಿ ಮಿಂದೇಳುತ್ತಿದ್ದ ಆ ಲೇಖನಿ ಇಂದು ಚಿರಶಾಂತಿಗೆ ಸಂದಿದೆ. ಜೀವನ ಪ್ರೀತಿ ಹಾಗೂ ಸಾಹಿತ್ಯ ಬದ್ಧತೆಯ ಮರೆಯಲಾಗದ ಪಾಠಗಳನ್ನು ನಮಗಾಗಿ ಉಳಿಸಿ ಹೋಗಿದೆ.

ಕನ್ನಡ ಕಥಾ ಸಾಹಿತ್ಯಲೋಕದ ಅಪ್ರತಿಮ ಕಥೆಗಾರ, ಮುಂಬಯಿಯ ಹಿರಿಯ ಸಾಹಿತಿ ಯಶವಂತ ಚಿತ್ತಾಲರು ತಮ್ಮ ಕೃತಿಗಳಲ್ಲಿ ಪ್ರೀತಿ, ಸೃಜನಶೀಲತೆಯ ಸಾಧ್ಯತೆಗಳನ್ನು ಅನ್ವೇಷಿಸಿದವರು. ಮನುಷ್ಯ ಅಂತಃಕರಣದಲ್ಲಿ ಪ್ರೀತಿ, ಸೃಜನಶೀಲತೆಯ ಸಾಧ್ಯತೆಗಳನ್ನು ಅನ್ವೇಷಿಸಿದವರು. ಮನುಷ್ಯ ಅಂತಃಕರಣದಲ್ಲಿ ಪ್ರೀತಿ ಸೆಲೆಯೊಡೆಯುವಂತೆ ಭಾಷೆಯನ್ನು ರೂಪಿಸಿಕೊಂಡವರು. ತಮ್ಮ ಹುಟ್ಟು ಹನೇಹಳ್ಳಿ ಮತ್ತು ಸಾಧನಾ ಭೂಮಿ ಮುಂಬಯಿಯ ನಡುವೆ ತಮ್ಮ ಕಥೆಗಳ ಹಂದರವನ್ನು ಹಬ್ಬಿಸಿದವರು.

"ಸಮಯವಿಲ್ಲ ಎನ್ನಬೇಡಿ, ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಬರೆಯುವುದನ್ನು ರೂಢಿಸಿಕೊಳ್ಳಿ. ಮೇಜು, ಕುರ್ಚಿ ಇಲ್ಲವಾದರೆ ಸೋಫಾದಲ್ಲೋ, ಮಂಚದ ಮೇಲೆ ಕುಳಿತೋ ಬರೆಯಲು ತೊಡಗಿ. ವಿಪುಲವಾಗಿ ಓದಿಕೊಂಡು ಜಗತ್ತಿನ ಅತ್ಯಂತ ಒಳ್ಳೆಯ ಮನಸ್ಸುಗಳಿಗೆ ತೆರೆದುಕೊಳ್ಳಿ" ಎಂದು ಮುಂಬಯಿ ಕನ್ನಡ ಲೇಖಕಿಯರ ಬಳಗ ಸೃಜನಾಕ್ಕೆ ಅಪ್ಪಣೆಯಿತ್ತ ಶಿಸ್ತಿನ ಮೇರು ಸಾಧಕ, ಮಾರ್ಗದರ್ಶಿ ಅವರು.

ಮುಂಬಯಿ ಬಾಂದ್ರಾದ ಬ್ಯಾಂಡ್‌ಸ್ಟ್ಯಾಂಡ್‌ನಲ್ಲಿ ಸಾಗರಕ್ಕೆದುರುರಾಗಿ ವಾಸ್ತವ್ಯವಿದ್ದ ಚಿತ್ತಾಲರದು ಸಾಗರ ಗಂಭೀರ ವ್ಯಕ್ತಿತ್ವ. ಅಷ್ಟೇ ಆಳವಾದ ಚಿಂತನ. ಆರ್ದ್ರ ಹೃದಯ.. ಮುಂಬಯಿ ಮಣ್ಣು ಮತ್ತು ಹನೇಹಳ್ಳಿಯ ನೆನಪು ಅವರಿಂದ ಐದು ಕಾದಂಬರಿಗಳನ್ನೂ ಹತ್ತು ಕಥಾ ಸಂಕಲನಗಳನ್ನೂ, ಎರಡು ಪ್ರಬಂಧ ಸಂಕಲನಗಳನ್ನೂ ರೂಪಿಸಿ, ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತವಾಗಿಸಿದೆ. ಅದ್ಭುತ ಕಥೆಗಾರರಾದ ಚಿತ್ತಾಲರ ಕಥನ ಕಲೆ ಬೆರಗು ಮೂಡಿಸುವಂತಹುದು. ತಮ್ಮ 'ಕಥೆಯಾದಳು ಹುಡುಗಿ' ಕಥಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಚಿತ್ತಾಲರ ಅದೇ ಕೃತಿಗೆ ಹಾಗೂ 'ಶಿಕಾರಿ' ಹಾಗೂ 'ಪುರುಷೋತ್ತಮ' ಕಾದಂಬರಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನವೂ ಬಂದಿತ್ತು. ಜೊತೆಗೆ ಅಕಾಡೆಮಿಯ ಗೌರವ ಪುರಸ್ಕಾರವೂ ಚಿತ್ತಾಲರಿಗೆ ಪ್ರಾಪ್ತವಾಗಿತ್ತು. 'ಕಥೆಯಾದಳು ಹುಡುಗಿ' ಕೃತಿಗೆ ಮಹಾರಾಷ್ಟ್ರ ಗೌರವ ಪುರಸ್ಕಾರ ಹಾಗೂ ಕಥಾ ಸಾಹಿತ್ಯದ ಒಟ್ಟು ಕೊಡುಗೆಗಾಗಿ ಮಾಸ್ತಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಪಂಪ ಪ್ರಶಸ್ತಿಯೂ ಅವರನ್ನಲಂಕರಿಸಿತ್ತು.

ಅವರ 'ಆಟ' ಕಥೆಯ ಅದ್ಭುತ ಕಥೆಗಾರಿಕೆ, ಅವರ ಅಪ್ರತಿಮ ಸೃಜನಶೀಲತೆಗೆ ಸಾಕ್ಷಿ. 'ಶಿಕಾರಿ', 'ಛೇದ', 'ಪುರುಷೋತ್ತಮ' ಕೃತಿಗಳು ಮುಂಬಯಿ ನೆಲದ ಅನುಭವದ ಮೂಸೆಯಲ್ಲಿ ಅರಳಿವೆ. "ಅನುಭವ ಹಾಗೂ ಕಲ್ಪನೆಯ ಸೃಜನಾತ್ಮಕ ಸಂಯೋಗವೇ ಕಥೆಗಾರಿಕೆ" ಎನ್ನುತ್ತಿದ್ದ ಚಿತ್ತಾಲರು, ಸಾಹಿತಿಯೊಬ್ಬನ ಆರಂಭಿಕ ಕೃತಿಗಳಲ್ಲಿನ ಭಾವತೀವ್ರತೆಯನ್ನು ಅವನ ನಂತರದ ಕೃತಿಗಳಲ್ಲಿ ನಿರೀಕ್ಷಿಸುವುದು ಸರಿಯಲ್ಲವೆಂದೂ ಹೇಳಿದ್ದರು. ಅಂತೆಯೇ 'ದಿಗಂಬರ' ದಲ್ಲಿರುವುದು ಭಾವನಾತ್ಮಕ ಕಿರುಚಾಟವಿಲ್ಲದ ಶಾಂತ ಧ್ವನಿ ಎಂದೂ ಅವರಂದಿದ್ದರು.

ಸಿದ್ಧವಾಗುತ್ತಿದ್ದ ತಮ್ಮ ಹೊಸ ಕಾದಂಬರಿ 'ದಿಗಂಬರ' ವನ್ನು ಆದಷ್ಟು ಬೇಗ ಬರೆದು ಮುಗಿಸಬೇಕು ಎನ್ನುವ ಛಲ ಅವರಲ್ಲಿ ಇನ್ನೂ ಗಟ್ಟಿಯಾಗೇ ಇತ್ತಾದರೂ, ವಯಸ್ಸು ಹಾಗೂ ಆರೋಗ್ಯ ಅವರ ನೆರವಿಗಿರಲಿಲ್ಲ. ವಯಸ್ಸಾಗುವುದು ಇಷ್ಟೊಂದು ಕಷ್ಟದ ಕೆಲಸವೆಂದು ಗೊತ್ತಿರಲಿಲ್ಲ ಎಂದಂದಿದ್ದರು ಚಿತ್ತಾಲರು. ಸೃಜನಶೀಲ ಸಾಹಿತ್ಯವೇ ತನ್ನ ಮುಖ್ಯ ಮಾಧ್ಯಮವೆಂದಿದ್ದ ಅವರು, ಪ್ರಬಂಧಗಳು ಕೇವಲ ಇವಕ್ಕೆ ಪೂರಕವೆಂದು ತಮ್ಮ 'ಅಂತಃಕರಣ' ಪ್ರಬಂಧ ಸಂಕಲನದ ಬಗ್ಗೆ ಮಾತನಾಡುತ್ತಾ ಹೇಳಿದ್ದರು.

ಕೊನೆಗೂ ಅರ್ಧದಲ್ಲೇ ಉಳಿದು ಹೋದ 'ದಿಗಂಬರ'ಕ್ಕೆ ಅಷ್ಟಕ್ಕೇ ಒಂದು ಮುಕ್ತಾಯವನ್ನು ನೀಡಿ ಬೆಳಕು ತೋರುವುದು ಜಯಂತ್ ಅಂಥವರಿಂದಾದರೂ ಸಾಧ್ಯವೇನೋ ಎಂಬ ಆಶೆ, ನಿರೀಕ್ಷೆ ನಮ್ಮದು.

ಬಾಂದ್ರಾ ಬ್ಯಾಂಡ್‌ಸ್ಟ್ಯಾಂಡ್‌ನಲ್ಲಿ ಶಾರೂಖ್ ಖಾನ್ ಮನೆ ಪಕ್ಕದಲ್ಲೇ ಚಿತ್ತಾಲರ ಮನೆಯಿದೆ ಎಂದು ಯಾರಾದರೂ ಹೇಳಿದರೆ ಅಲ್ಲ, ಚಿತ್ತಾಲರ ಮನೆ ಪಕ್ಕದಲ್ಲಿ ಶಾರುಖ್ ಖಾನ್ ಮನೆಯಿದೆ ಎಂದು ತಿದ್ದುತ್ತಿದ್ದ ದೃಢತೆ, ಆತ್ಮವಿಶ್ವಾಸದ ಪ್ರತಿಮೂರ್ತಿ ನಮ್ಮ ಚಿತ್ತಾಲರು.

ಇಳಿವಯಸ್ಸು ಹಾಗೂ ಕ್ಷೀಣಿಸುತ್ತಿರುವ ದೇಹ ಪ್ರಕೃತಿ ಈ ಸೃಜನಶೀಲ ಪ್ರತಿಭೆಯನ್ನು ಸೋಲಿಸುತ್ತಾ ಬಂದಿತ್ತು. ವರ್ಷದ ಹಿಂದೆ ಕಥೆಗಾರ ವಸುಧೇಂದ್ರರು ಬಂದಿದ್ದಾಗಿನ ಭೇಟಿಯಲ್ಲಿ ತುಂಬ ಸೋತಂತಿದ್ದ ಚಿತ್ತಾಲರು, ಈಗ್ಗೆ ಮೂರು ತಿಂಗಳ ಹಿಂದಿನ ನಮ್ಮ ಭೇಟಿಯಲ್ಲಿ ಸಾಕಷ್ಟು ಚೇತರಿಸಿದಂತೆ ಕಂಡು ಬಂದು, ಮನಸ್ಸು ಖುಶಿಯಾಗಿತ್ತು. ಆರುವ ದೀಪ ಬೆಳಗುವಂತಹ ಚೈತನ್ಯವದು ಎಂಬುದು ನಮ್ಮರಿವಿಗೆ ಬಂದಿರಲಿಲ್ಲ. ತಮ್ಮ ಅಂತ್ಯಕ್ಕೆ ಎರಡು ತಿಂಗಳ ಹಿಂದೆ ಕರೆ ಮಾಡಿ, 'ಮಯೂರ'ದಲ್ಲಿ ಪ್ರಕಟವಾಗಿದ್ದ ನಾನು ನಡೆಸಿದ ಅವರ ಸಂದರ್ಶನದ ಪ್ರತಿಯೊಂದು ಬೇಕಾಗಿದೆ, ಸಂಕಲನದಲ್ಲಿ ಸೇರಿಸಲಿದೆ, ಕಳುಹಿಸಿ ಕೊಡಿ ಎಂದು ಕೇಳಿದ್ದರು ಎಂದಿನಂತೆ, ಏನ್ ಬರೀತಿದ್ದೀರಿ? ಎಂದೆಲ್ಲ ಕೇಳಿ, "ಬನ್ನಿ ಬನ್ನಿ ಯಾವಾಗ್ ಬರ್‍ತೀರಿ?" ಎಂದು ಪ್ರೀತಿಯಿಂದ ಆಗ್ರಹಿಸಿದ್ದರು. ಆ ಪ್ರೀತಿಯ ಕರೆ ಇನ್ನೂ ನನ್ನ ಮನದಲ್ಲಿ ಜೀವಂತ ವಾಗಿ ಸ್ಥಿರವಾಗಿದೆ.

ಆದಿತ್ಯವಾರ ಬೆಳ್ಳಂಬೆಳಗು, ಪ್ರಿಯ ಚಿತ್ತಾಲರ ಮರಣ ವಾರ್ತೆ ಬಂದೆರಗಿದಾಗ ಆ ಅಗಾಧ ನಷ್ಟದರಿವಿಗೆ ಹೃದಯ ಕಂಪಿಸಿತ್ತು. ತಕ್ಷಣ ಹೊರಟು, ಬೆಳಗಿನ ಆ ಟ್ರಾಫಿಕ್ ರಹಿತ ಪಯಣದಲ್ಲಿ ಕೇವಲ ಇಪ್ಪತ್ತು ನಿಮಿಷಗಳಲ್ಲಿ ಅಲ್ಲಿಗೆ ತಲುಪಿದ್ದೆ. ಹಿಂದೆಲ್ಲ ಸಂಜೆಯ ಭೇಟಿಗಳಲ್ಲಿ ಒಂದೂವರೆ ಗಂಟೆಗೂ ಹೆಚ್ಚು ಸಮಯ ಆ ವಾಹನ ದಟ್ಟಣೆಯಲ್ಲಿ ತಗಲುತ್ತಿದ್ದುದರಿಂದ ಬರತ್ತೇವೆ ಎಂದು ಹೇಳುತ್ತಿದ್ದಷ್ಟು ಸಲೀಸಾಗಿ ಅಲ್ಲಿಗೆ ಹೋಗುವುದಕ್ಕಾಗುತ್ತಿರಲಿಲ್ಲ. ನಾವು 'ಸೃಜನಾ' ಗೆಳತಿಯರು ಚಿತ್ತಾಲರಲ್ಲಿಗೆ ಹೋಗಬೇಕು ಎಂದು ಅಡಿಗಡಿಗೆ ನೆನಪಿಸಿಕೊಂಡು ಹೇಳಿಕೊಳ್ಳುತ್ತಿದ್ದುದೇ ಜಾಸ್ತಿ.

✍ ಶ್ಯಾಮಲಾ ಮಾಧವ

ಈಗ ಅಗಲಿದ ಚಿತ್ತಾಲರನ್ನು ಕಾಣಲು ಥಟ್ಟನೆ ಎದ್ದು ಹೋಗಿ, ಅಷ್ಟು ಬೇಗನೇ ತಲುಪಿದಾಗ ಅವರಿದ್ದಾಗ ಪ್ರೀತಿಯ ಕರೆಗೆ ಓಗೊಟ್ಟು ಸಾಕಷ್ಟು ಸಲ ಹೋಗಿ ಬರುತಿರಬಹುದಿತ್ತು. ಹಾಗೆ ಮಾಡಿ ಅವರಿಗೆ ಹೆಚ್ಚಿನ ಸಂತೋಷ ನೀಡಬಹುದಿತ್ತು ಎಂಬ ನೋವು ಕಾಡಿತು. ಹೋದಾಗಲೆಲ್ಲ, ಮರಳಿ ಹೊರಡಲು ಅವರ ಅನುಮತಿ ಕೇಳಿದರೆ, "ಏನಿಷ್ಟು ಅವಸರ? ಇರಿ ಸ್ವಲ್ಪ ಹೊತ್ತು" ಎನ್ನುತ್ತಿದ್ದ ಆ ವಾತ್ಸಲ್ಯಪೂರಿತ ದನಿ ಹೃದಯಾಳದಲ್ಲಿ ಮಿಡಿಯುತ್ತಿದೆ.

ಚಿತ್ತಾಲರ ಜೀವನ ಸಂಗಾತಿಯಾಗಿದ್ದ ಮಾಲತಿಯವರನ್ನು ಪುನಃ ಭೇಟಿ ಮಾಡಿ ಮಾತನಾಡಿಸಿಕೊಂಡು ಬರಲು ಹೋಗಿದ್ದಾಗ, ತೆರವಾದ ಚಿತ್ತಾಲರ ಆಸನ, ಸ್ತಬ್ಧವಾದ ಬ್ಯಾಂಡ್‌ಸ್ಟ್ಯಾಂಡ್ ದಂಡೆ, ಮೌನಸಾಗರ ಸ್ಥಿರಚಿತ್ರವಾಗಿ ಮೂಡಿತ್ತು. ಅದುವರೆಗಿನ ಭೇಟಿಗಳಲ್ಲಿ, ಚಿತ್ತಾಲರೂ ನಾವೂ ಮಾತಾಡುತ್ತಿದ್ದುದನ್ನು ಕೇಳುತ್ತಾ, ಹೆಚ್ಚಾಗಿ ಮಿತಭಾಷಿಯಾಗಿರುತ್ತಿದ್ದ ಮಾಲತಿ ಅವರು ಅಂದು ಮನಬಿಚ್ಚಿ ಬಹಳಷ್ಟು ಮಾತನಾಡಿದರು ತಮ್ಮ ಮದುವೆ, ಮುಂಬಯಿ ವಾಸ ಹಾಗೂ ಚಿತ್ತಾಲರ ಬಗ್ಗೆ ನೆನಪಿನಂಗಳದಿಂದ ಅವರ ಮಾತುಗಳು ಹರಿದು ಬರುತ್ತಿದ್ದವು. "ಹೌ ಹ್ಯಾಪಿ ಹೀ ಯೂಸ್ಡ್ ಟು ಬೀ, ವೆನ್ ಯೂ ಆಲ್ ಕೇಮ್!" ಎಂದ ಅವರು, ಚಿತ್ತಾಲರ ಶಿಸ್ತು, ಆಸಕ್ತಿ, ಜೀವನ ಪ್ರೀತಿಯ ಬಗ್ಗೆ, ಹನೇಹಳ್ಳಿಗೆ ತಾವಿಬ್ಬರೂ ಇತ್ತ ಕೊನೆಯ ಭೇಟಿಯ ಬಗ್ಗೆ, ಚಿತ್ತಾಲ ಬಂಧುಗಳ ಬಗ್ಗೆ ಹೇಳುತ್ತಾ ಹೋದರು. ಕೊನೆಯ ದಿನಗಳಲ್ಲಿ ಆಸ್ಪತ್ರೆಯಲ್ಲಿ ತಮ್ಮ ಸೇವೆಯಲ್ಲಿದ್ದ ದಾದಿಯೊಬ್ಬಾಕೆ ಕನ್ನಡದವಳೆಂದರಿತಾಗ, ಚಿತ್ತಾಲರಿಗಾದ ಸಂತಸ, ಆಕೆಯ ಕನ್ನಡ ನುಡಿಗಾಗಿ ಕಾತರಿಸುತ್ತಿದ್ದ ಜೀವ, ಆಕೆಗಾಗಿ ತಮ್ಮ ಕಾದಂಬರಿಯನ್ನು ತರಿಸಿಕೊಟ್ಟ, ಅವರ ಪ್ರೀತಿ ವಾತ್ಸಲ್ಯ ಎಲ್ಲವೂ ಅವರ ಮಾತಿನಲ್ಲಿ ತೆರೆದುಕೊಂಡವು. ತಮ್ಮ ಕೃತಿಗಳಲ್ಲಿ ಉಳಿವ ಇಂತಹ ಮಹಾನ್ ಚೇತನಗಳಿಗೆ ಅಳಿವೆಂಬುದಿದೆಯೇ?

# ಉಡುತಡಿ

ಉಡುತಡಿ ಎಂದೊಡನೆ ನೆನಪಿನಂಗಳದಲ್ಲಿ ಚಂದ್ರನಂತೆ ಬೆಳಗುವ 12ನೇ ಶತಮಾನದ ವೀರರಾಗಿಣಿ ಅಕ್ಕಮಹಾದೇವಿ ಕಾಣಿಸುತ್ತಾಳೆ. ಅಕ್ಕನು ಹುಟ್ಟಿದ ಊರು. ಉಡುತಡಿ ಎಂಬುದು ಕರ್ನಾಟಕದ ಜನಸಾಮಾನ್ಯರಿಗೂ ತಿಳಿದ ವಿಷಯ. 'ಅಕ್ಕಮಹಾದೇವಿ ಮತ್ತು ಮೀರಾಬಾಯಿ - ಒಂದು ತೌಲನಿಕ ಅಧ್ಯಯನ'. ಈ ವಿಷಯವನ್ನು ನನ್ನ ಸಂಶೋಧನೆಗಾಗಿ ಎತ್ತಿಕೊಂಡ ಮೇಲೆ ಉಡುತಡಿಯನ್ನು ಸಂದರ್ಶಿಸಿ ಅಕ್ಕನ ಇರುವಿಕೆಯ ಕುರುಹುಗಳನ್ನು ಕಂಡುಹಿಡಿಯುವುದು ಅಗತ್ಯವೆನಿಸಿತು. ನಾನು ಸೆಪ್ಟೆಂಬರ್ 7ನೇ ತಾರೀಕಿನಂದು (2013) ಅತ್ತ ಪಯಣ ಬೆಳೆಸಿದೆ. ನನ್ನ ಜೊತೆಗೆ ನನ್ನ ಸೋದರಿ ಆಕೆಯ ಸಂಗಾತಿ, ಅಕ್ಕನ ಮಕ್ಕಳು ಅವರ ಕುಟುಂಬ ಎಲ್ಲ ಸೇರಿ ಆರು ಜನ ಪ್ರೌಢರು, ಮೂರು ಮಕ್ಕಳು ಇದ್ದೆವು. ಹೊರಡುವ ಮೊದಲು ಇಲಕಲ್ಲ ಅಕ್ಕನ ಬಳಗದ ಸದಸ್ಯರಾದ ಶ್ರೀಮತಿ ಗಿರಿಜಾ ಶಿವಬಲ್ಲ ಅವರ ನೆರವಿನಿಂದ ಶ್ರೀಮತಿ ಲೀಲಾದೇವಿ ಪ್ರಸಾದ ಅವರೊಂದಿಗೆ ಮಾತನಾಡಿದೆವು. ನಮ್ಮ ಪ್ರವಾಸದ ಉದ್ದೇಶವನ್ನು ತಿಳಿದು ಅವರಿಗೆ ಸಂತೋಷವಾಯಿತು. ಉಡುತಡಿಯಲ್ಲಿ ತಂಗುವ ವ್ಯವಸ್ಥೆಯನ್ನು ಮಾಡುವದಾಗಿ ಭರವಸೆ ಕೊಟ್ಟರು.

ನಮ್ಮ ವಾಹನ ಶಿರಾಳಕೊಪ್ಪವನ್ನು ತಲುಪಿದಾಗ ರಾತ್ರಿ ಎಂಟು ಗಂಟೆಯಾಗಿತ್ತು. ಅಲ್ಲಿಂದ ಉಡುತಡಿ 2 ಕಿ.ಮೀ. ದೂರದಲ್ಲಿದೆ. ದಾರಿಯಲ್ಲಿ ಜನರನ್ನು ಕೇಳುತ್ತಾ ಈ ಅಂತರವನ್ನು ಕ್ರಮಿಸಿದೆವು. ದಾರಿಹೋಕರು ಹೇಳಿದ ಹೆಬ್ಬಾಗಿಲು ಕಾಣಿಸಲಿಲ್ಲ. ಹೆಬ್ಬಾಗಿಲು ರಸ್ತೆಯಿಂದ ಸುಮಾರು 10ರಷ್ಟು ಒಳಗೆ ಇದೆ. ರಸ್ತೆಯ ಬದಿಯಲ್ಲಿ ಸೂಚನಾ ಫಲಕವು ಇದ್ದರೂ ಅದರ ಮೇಲೆ ಒಂದೇ ಬದಿಗೆ ಬರಹ ಇದ್ದುದರಿಂದ ಇನ್ನೊಂದು ದಿಕ್ಕಿನಿಂದ ಬರುವ ಪ್ರವಾಸಿಗರಿಗೆ ಆ ಫಲಕದಲ್ಲಿ ಏನಿದೆ ಎಂಬುದು ಕಾಣಿಸುವದಿಲ್ಲ. ಅದನ್ನು ನೋಡಿಯೂ ನಾವು ಬರವಣಿಗೆ ಕಾಣದುದರಿಂದ ಒಂದು ಕಿ.ಮೀ. ಮುಂದೆ ಹೋಗಿ ದಾರಿ ತಪ್ಪಿತೆಂದು ಗೊತ್ತಾಗುತ್ತಲೇ ಅಲ್ಲಿಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಪರಮೇಶ್ವರಯ್ಯ ಎಂಬವರಿಗೆ ಫೋನು ಮಾಡಿ ಆತನ ಸೂಚನೆಯಂತೆ ಹಿಂದೆ ಬಂದು ಫಲಕದ ಪಕ್ಕದಿಂದ ಹೆಬ್ಬಾಗಿಲನ್ನು ಪ್ರವೇಶಿಸಿದೆವು. ಪರಮೇಶ್ವರಯ್ಯ ತನ್ನ ಟಾರ್ಚ್‌ನೊಂದಿಗೆ ಅಲ್ಲಿಯೇ ನಿಂತಿದ್ದ.

ಒಳಬಂದು ಯಾತ್ರಿ ನಿವಾಸದಲ್ಲಿ ಉಳಿದುಕೊಂಡೆವು. ಲಾಡ್ಜ್‌ನಲ್ಲಿರುವಂತೆ ಎಲ್ಲಾ ವ್ಯವಸ್ಥೆ ಇದೆ.

ಯಾತ್ರಿ ನಿವಾಸ, ಅಕ್ಕನ ಗುಡಿ ಹಾಗೂ ಇತರ ಸ್ಮಾರಕಗಳು ಎಲ್ಲವುಗಳನ್ನು ಒಳಗೊಂಡ ಪ್ರದೇಶಕ್ಕೆ ಹೆಬ್ಬಾಗಿಲು ಇದೆ. ನಮ್ಮ ಹೊರತು ಮತ್ತಾವ ಪ್ರವಾಸಿಯೂ ಅಲ್ಲಿರಲಿಲ್ಲ. ಇಷ್ಟಾಗುವಾಗ 8.30 ಗಂಟೆಯಾಗಿತ್ತು. ನಾವು ಊರಿನಿಂದ ತಂದ ಬುತ್ತಿಯನ್ನೇ ಸ್ವಾಹ ಮಾಡಿ ನಿದ್ರಾದೇವಿಗೆ ವಶವಾದೆವು. ಏಳು ಗಂಟೆಗಳ ಪಯಣದ ದಣಿವು ಕುಂಭಕರ್ಣ ನಿದ್ದೆಯನ್ನು ಕೊಟ್ಟಿತು.

ಮಾರನೇ ದಿನ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಅಕ್ಕನ ದರ್ಶನಕ್ಕಾಗಿ ಹೊರಬಿದ್ದೆವು. ಯಾತ್ರಿ ನಿವಾಸದಿಂದ 50 ಹೆಜ್ಜೆ ಎಡಕ್ಕೆ ನಡೆದರೆ ಬಲಗಡೆ ಅಕ್ಕನ ಮಂದಿರ ಗೋಚರಿಸುತ್ತದೆ. 50 ಹೆಜ್ಜೆಗಳು ನಡೆಯಬೇಕು. ಮಂದಿರದ ಅಕ್ಕನ ಮೂರ್ತಿ ಅಮೃತಶಿಲೆಯಲ್ಲಿದೆ. ಕಾವಿ ವಸ್ತ್ರವನ್ನು ಧರಿಸಿದ ಅಕ್ಕ ಅಂಗೈಯಲ್ಲಿ ಲಿಂಗವನ್ನು ಹಿಡಿದುಕೊಂಡು ಪೂಜಾನಿರತಳಾಗಿದ್ದಾಳೆ. ಗರ್ಭಗುಡಿಯ ಸುತ್ತಲಿನ ಗೋಡೆಯ ಹೊರಭಾಗದಲ್ಲಿ ಅಕ್ಕನ ವಚನಗಳನ್ನು ಬರೆಯಲಾಗಿದೆ. ಪ್ರದಕ್ಷಿಣೆ ಮಾಡುವವರಿಗೆ ವಚನ ಲೋಕಕ್ಕೆ ಬಂದ ಅನುಭವವಾಗುತ್ತದೆ.

ಗರ್ಭಗುಡಿಯ ಬಲಭಾಗದಲ್ಲಿ ಒಂದು ತೊಟ್ಟಿಲನ್ನು ಕಟ್ಟಲಾಗಿದೆ. ಅದರಲ್ಲೊಂದು ಗೊಂಬೆಯಿದೆ. ಅಕ್ಕನ ಜಯಂತಿಯಂದು ನಿಲ್ಲಿಸಲಾಗಿದೆ. ಆಕೆಯ ಬಲಗೈಯಲ್ಲಿ ರುದ್ರಾಕ್ಷಿ ಮಾಲೆ, ದೇಹವನ್ನು ಕೇಶಾಂಬರ ಆವರಿಸಿದೆ. ಮೂರ್ತಿಯ ಸುತ್ತಲೂ ಸುಮಾರು ನಾಲ್ಕು ಫೂಟುಗಳ ಅಂತರದಲ್ಲಿ ಒಂದು ವರ್ತುಳಾಕಾರದ ಕಬ್ಬಿಣದ ಸರಳುಗಳಿಂದಾದ ಬೇಲಿ, ಮೂರ್ತಿಯ ಸುತ್ತಲೂ ಸುಮಾರು ಅಂತರದಲ್ಲಿ ಕಬ್ಬಿಣದ



ಕಟಂಜನವಿದೆ. ಮೂರ್ತಿಯ ಸ್ಪರ್ಶಕ್ಕೆ ಸಿಗುವುದಿಲ್ಲ. ಸುಮಾರು 38 ಪಾವಟಿಗೆಗಳನ್ನು ಏರಿದ ನೆನಪು. ಪಾವಟಿಗೆಗಳ ಎತ್ತರವೂ ಹೆಚ್ಚು. ಈ ವೇದಿಕೆಯ ಹಿಂಭಾಗದಲ್ಲಿ ಕಂದಕವಿದೆ. ಅಲ್ಲಿ ನೀರು ಹರಿಯುತ್ತದೆ. ಈ ರೀತಿಯ ದಿನ್ನೆ ಗುಡಿಯ ಸುತ್ತಲೂ ನಾಲ್ಕೂ ದಿಕ್ಕಿಗೆ ಇದೆ.

ಅಕ್ಕನ ಮಂದಿರದಲ್ಲಿ ಎರಡೂ ಹೊತ್ತು ಪೂಜೆಯಾಗುತ್ತದೆ. ಗುಡಿಯ ಎದುರು ಒಂದು ಪುಷ್ಕರಣಿ ಇದೆ. ಈ ಪುಷ್ಕರಣಿಯಿಂದ ನೀರನ್ನು ಒಯ್ದು ಅಕ್ಕ, ಯಾರಿಗೂ ಕಾಣದಂತೆ ಹೋಗಿ ಪರದೇಶಿ ಮಲ್ಲಪ್ಪನ ಗುಡಿಯಲ್ಲಿ ಪೂಜೆಮಾಡುತ್ತಿದ್ದಳು ಎಂದು ಜನ ಹೇಳುತ್ತಾರೆ. ಪರದೇಶಿ ಮಲ್ಲಪ್ಪನ ಗುಡಿ ಇಲ್ಲಿಂದ ನಡೆದುಕೊಂಡು ಹೋಗುವಷ್ಟು ಅಂತರದಲ್ಲಿದೆ. ಯಾರಿಗೂ ಕಾಣದಂತೆ ಎಂದರೆ, ಬಸವಣ್ಣ ಹೇಳಿದ ಗಾಂಧಾರ ಮಾಂಧಾರಿ ಮುಹೂರ್ತವೆಂದಾಗುತ್ತದೆ. ಅಂದರೆ ರಾತ್ರಿ ಮೂರರಿಂದ ಬೆಳಗಿನ ಆರು ಗಂಟೆಯವರೆಗಿನ ಕಾಲ.

ಅಕ್ಕನ ಧ್ಯಾನ ಕುಟೀರದ ಬಲಪಕ್ಕದಲ್ಲಿ ಕೆಲವು ಶಿಲ್ಪಗಳಿವೆ. ಒಂದು ಮಾಸ್ತಿಕಲ್ಲು, ಕೆಲವು ನಾಗಶಿಲ್ಪಗಳು. ಅಕ್ಕನು ವಾಸಿಸಿದ ಮನೆ ಎಂಬ ನಂಬಿಕೆ ಪೂಜೆಗೆ ಹೋಗುತ್ತಿದ್ದಳು. ಈ ನಂಬಿಕೆಗೆ ಪೂರಕವಾಗಿದೆ.

ಇಲ್ಲಿಂದ ಹಿರೇಕಸವಿ ಎಂಬ ಊರು 2 ಕಿ.ಮೀ ದೂರದಲ್ಲಿದೆ. ಅಲ್ಲಿಂದ 1 ಕಿ.ಮೀ. ಮುಂದೆ ಚಿಕ್ಕ ಕಸವಿ ಉಡುತಡಿಯ ಈ ಮಂದಿರದ ಆವರಣದಿಂದ

✍ ದಾಕ್ಷಾಯಣಿ ಯಡಹಳ್ಳಿ (M: 9969174302)

(ಪುಷ್ಕರಣಿಯ ಹತ್ತಿರ) ಹಿರೇ ಕಸವಿಯವರೆಗೆ ಸುರಂಗ ಮಾರ್ಗವಿತ್ತೆಂದೂ, ಕೌಶಿಕ ಅಕ್ಕನನ್ನು ನೋಡಲು ಈ ಮಾರ್ಗದಿಂದ ದಿನವೂ ಬರುತ್ತಿದ್ದನೆಂದೂ ಹೇಳುವ ಕಥೆ ಇಲ್ಲಿ ಪ್ರಚಲಿತವಿದೆ.

ಇಲ್ಲಿ ಕೌಶಿಕನ ಅರಮನೆ ಇತ್ತೆಂಬುದಕ್ಕೆ ಕೋಟೆಗೋಡೆ ಅಥವಾ ಇನ್ನಾವ ಕುರುಹುಗಳಾಗಲೀ ಇಲ್ಲ. ಕೌಶಿಕ ಬಹುಶಃ ಹಿರೇಕಸವಿಯವನಾಗಿರಬೇಕು. ಅಲ್ಲಿಯ ದೇಸಾಯಿ ಅಥವಾ ಜಹಗೀರದಾರನಾಗಿರುವ ಸಾಧ್ಯತೆ ಇದೆ.

ಅಕ್ಕ ಪರದೇಶಿ ಮಲ್ಲಪ್ಪನ ಗುಡಿಗೆ ಹೋಗುತ್ತಿದ್ದಳೆಂಬ ಕಥೆ ಅಕ್ಕ ಮೂರ್ತಿ ಪೂಜಕಳಾಗಿದ್ದಳೇ ಎಂಬ ಸಂದೇಹವನ್ನು ಹುಟ್ಟಿಸುತ್ತದೆ. ಆದರೆ, ಮಲ್ಲಪ್ಪನ ಗುಡಿ ಎಂಬುದು ಅಕ್ಕನ ಗುರುಗಳಾದ, ಗುರುಲಿಂಗದೇವರಿದ್ದ ಗುರುವಾಡಿ ಮಠವಾಗಿರುವ ಸಾಧ್ಯತೆ ಹೆಚ್ಚು. ಇಲ್ಲಿಯೇ ಅಕ್ಕ ಶಿಕ್ಷಣ ಪೂರೈಸಿದಳು. ಇಲ್ಲಿ ಹನ್ನೆರಡನೇ ಶತಮಾನದ ಶಿವಚರಣ್ ಅಕ್ಕಮಹಾದೇವಿ ಇದ್ದಳೆಂಬುದಕ್ಕೆ ಮಲ್ಲಪ್ಪನ ಗುಡಿಯೊಂದೇ ಸಾಕ್ಷಿಯಾಗಿದೆ. ಲಿಂಗವು ಪ್ರಾಚೀನ ಕಾಲದ್ದು, ಗುಡಿಯು ಈಗ ಜೀರ್ಣೋದ್ಧಾರಗೊಂಡಿದೆ.

ಗುಡಿಯ ಮುಖ್ಯ ದ್ವಾರದ ಮೇಲ್ಭಾಗದಲ್ಲಿ 'ಅಂಗೈಯಲ್ಲಿ ಲಿಂಗವನ್ನಿರಿಸಿಕೊಂಡ ಒಬ್ಬ ಬಾಲಕಿ, ಆಕೆಯ ಮಸ್ತಕದ ಮೇಲೆ ಹಸ್ತವನ್ನಿರಿಸಿದ ಒಬ್ಬ ಯೋಗಿ' (ಗುರು-



ಶಿಷ್ಯೆಯರ ದೀಕ್ಷಾ ಪ್ರಸಂಗದ) ಉಬ್ಬು ಚಿತ್ರವಿದೆ. ಇದು ಇತ್ತೀಚಿನದಿರಬೇಕು. ಇಂಥ ಚಿತ್ರವನ್ನು ಗೋಡೆಗೆ ಅಳವಡಿಸಬೇಕಾದರೆ ಏನಾದರೂ ಕುರುಹುಗಳು ದೊರೆತಿರಲೇಬೇಕು. ಆದರೆ, ಅದರ ವಿವರಣೆ ಅಲ್ಲಿ ಇಲ್ಲ.

ಶ್ರೀ ಗುರುಲಿಂಗ ದೇವರು ತನ್ನ ಹಸ್ತವನ್ನು ತಂದು ಎನ್ನ ಮಸ್ತಕದ ಮೇಲೆ ಇರಿಸಿದಾಗಲೇ ಎನ್ನ ಭವಂನಾಸ್ತಿಯಾಯಿತು.. ಅಕ್ಕನ ವಚನದ ಈ ಸಾಲನ್ನು ನೆನಪಿಸುತ್ತದೆ. ಗುರುಲಿಂಗದೇವರು ತನ್ನ ದೀಕ್ಷಾಗುರುವೆಂದು ಅಕ್ಕ ಸ್ಪಷ್ಟವಾಗಿ ತನ್ನ ವಚನದಲ್ಲಿ ಹೇಳಿಕೊಂಡಿದ್ದಾಳೆ.

ಅಕ್ಕನ ನೆನಪನ್ನುಳಿಸಲು ಮುಂದಿನ ಯಾತ್ರಿ ನಿವಾಸ ಧ್ಯಾನ ಕುಟೀರ ಮುಂತಾದವುಗಳು ಇಲ್ಲಿ ನಿಲ್ಲುವಂತೆ ಮಾಡಿದವರು. ಕರ್ನಾಟಕದ ಮಾಜಿ ಮಂತ್ರಿ ಶ್ರೀಮತಿ ಲೀಲಾದೇವಿ ಪ್ರಸಾದ. ಇಲ್ಲವಾದರೆ ಭೌತಿಕ ಜಗತ್ತಿನಲ್ಲಿ ಅಕ್ಕ ಇಲ್ಲಿ ಉಳಿಯುತ್ತಿರಲಿಲ್ಲ. ಜನಸಾಮಾನ್ಯರ ನೆನಪಿನಲ್ಲಿ ಅಕ್ಕ ವಿವಾಹವನ್ನು ನಿರಾಕರಿಸಿ ಹೋದಳು ಎಂಬ ಸ್ಮೃತಿಯನ್ನು ಬಿಟ್ಟು ಇನ್ನೇನೂ ಉಳಿಯುತ್ತಿರಲಿಲ್ಲ.

ಅಲ್ಲಿಂದ ಹಿರೇಕಸವಿಗೆ ಪಯಣಿಸಿದೆವು. ಆ ಊರಿನ ಮಲ್ಲಿಕಾರ್ಜುನಪ್ಪ ಗೌಡ ಎಂಬ ಹಿರಿಯ ವೃದ್ಧರನ್ನು ಸಂಪರ್ಕಿಸಿದೆವು. ತಮಗೆ ಅಕ್ಕಮಹಾದೇವಿಯ ಬಗ್ಗೆ ಹೆಚ್ಚಿನ ವಿವರ ತಿಳಿಯದು ಎಂದರು. ಆಕೆ ಮದುವೆಯಾಗಲಿಲ್ಲ. ಕೌಶಿಕ ಬಲತ್ಕರಿಸಲೆತ್ನಿಸಿದಾಗ ದಿಗಂಬರೆಯಾಗಿ ಹೊರಟುಹೋದಳು ಎಂಬ ಮತ ಆತನದು. ಈ ಪರಿಸರದಲ್ಲಿ ಅನೇಕರಿಗೆ ಇದೇ ಅಭಿಪ್ರಾಯವಿದೆ. ಇಲ್ಲಿಯೂ ಸಹ ಕೌಶಿಕ ರಾಜನಿದ್ದ ಎನ್ನುವ ಯಾವ ಪುರಾವೆಗಳಿಲ್ಲ. ಚಿಕ್ಕ ಕಸವಿಯಲ್ಲಿಯೂ ಜನರನ್ನು ವಿಶೇಷವಾಗಿ ವೃದ್ಧರನ್ನು ಸಂಪರ್ಕಿಸಿದೆ. ಯಾರೂ ಅಂತಹ ಮಹತ್ವದ ಮಾಹಿತಿಯನ್ನು ಒದಗಿಸಲಿಲ್ಲ.

ಅಲ್ಲಿಯೇ ರಸ್ತೆಯ ಬದಿಗೆ ಒಂದು ಚಿಕ್ಕ ಮಂದಿರವಿದೆ. ಶಿವಮಂದಿರ ಎದುರಿಗೆ ನಂದಿಯ ಮೂರ್ತಿ. ಅದನ್ನು ನೋಡಿದರೆ ಅತ್ಯಂತ ಹಳೇ ಕಾಲದ್ದೆಂಬ ಕಲ್ಪನೆ ಉಂಟಾಗುತ್ತದೆ. ರಸ್ತೆಯ ಇನ್ನೊಂದು ಬದಿಗೆ ಶಿಲ್ಪಗಳಿವೆ. ಶಿಲಾಲೇಖವಲ್ಲ. ಒಂದರಲ್ಲಿ ಇಬ್ಬರು ಸ್ತ್ರೀಯರು ಯುದ್ಧ ಮಾಡುವ ದೃಶ್ಯವಿದೆ. ಮತ್ತೊಂದು ಮಾಸ್ತಿ ಕಲ್ಲು. ಈ ಶಿಲ್ಪಗಳು ಅಕ್ಕ ಮಹಾದೇವಿಯ ಜೀವನದ ಯಾವ ಕಥೆಯನ್ನೂ ಹೇಳಲಿಲ್ಲ.

ಅಲ್ಲಿಂದ ಶಿರಾಳಕೊಪ್ಪ ಎನ್ನುವ ಊರಿನ ಕಡೆಗೆ ತಿರುಗಿದೆವು. ಉಡುತಡಿಯಿಂದ 2ಕಿ.ಮೀ. ದೂರವಿದೆ. ಇಲ್ಲಿ ಡಾ. ಮುರಘರಾಜ ಎನ್ನುವವರನ್ನು ಭೇಟಿಯಾದೆವು. ಇವರು ಪರದೇಶಿ ಮಲ್ಲಪ್ಪನ ಗುಡಿಯ ಜೀರ್ಣೋದ್ಧಾರ ಕಮಿಟಿಯಲ್ಲಿ ಇದ್ದಾರೆ.

ಉಡುತಡಿಯಲ್ಲಿ ಅಕ್ಕನ ಸ್ಮಾರಕಗಳನ್ನು ನಿರ್ಮಿಸಿದ ಶ್ರೀಮತಿ ಲೀಲಾದೇವಿ ಪ್ರಸಾದ ಅವರ ಬಗ್ಗೆ ಮೆಚ್ಚುಗೆಯ ಮಾತನ್ನಾಡಿದರು. ಅಕ್ಕನು ಮದುವೆಯಾಗಲಿಲ್ಲ ಎನ್ನುವ ವಿಚಾರ ವ್ಯಕ್ತಪಡಿಸಿದರು. ಸುರಂಗಮಾರ್ಗವಿತ್ತು ಎನ್ನುವ ಅಭಿಪ್ರಾಯವನ್ನು ಅನುಮೋದಿಸುತ್ತ, ಈಗದು ಮಣ್ಣಿನಿಂದ ಮುಚ್ಚಿಹೋಗಿ ಏನೂ ಕಾಣುವದಿಲ್ಲ ಎಂದರು. ಇಲ್ಲಿ ಹೆಚ್ಚಿನ ಮನೆಗಳು ಮಣ್ಣಿನವು ತಾರಸಿ ಮಾತ್ರ ಮಂಗಳೂರು ಹಂಚಿನದು. ಚಿಕ್ಕ ಕಸವಿಯಲ್ಲಿ ಕೌಶಿಕನ ಸಮಾಧಿ ಇದೆ ಎಂದರು. ಚಿಕ್ಕ ಕಸವಿಯ ಜನರು ಈ ವಿಷಯವನ್ನು ತಿಳಿಸಲಿಲ್ಲ. ನಾವು ಕೇವಲ ಅಕ್ಕನ ಬಗ್ಗೆ ಕೇಳಿದ್ದರಿಂದಲೋ ಏನೋ?

ಅಕ್ಕಮಹಾದೇವಿಯ ಗುಡಿ ಇರುವ ಪ್ರದೇಶವು ಹತ್ತೂವರೆ ಎಕರೆ ವಿಸ್ತಾರದ್ದು ಅದನ್ನು ಉಡುತಡಿ ಎಂಬ ಫಲಕ ಸೂಚಿಸುತ್ತದೆ. ಅಲ್ಲಿಂದ ಶಿರಾಳಕೊಪ್ಪಕ್ಕೆ ಬರುವಾಗ ಉಡುಗಣಿ ಹಾಗೂ ತಡಗಣಿ ಎಂಬ ಫಲಕಗಳು ರಸ್ತೆಯಲ್ಲಿ ಗೋಚರಿಸುತ್ತವೆ. ಉಡುತಡಿ ಎಂಬ ಒಂದೇ ಊರಿತ್ತು. ವ್ಯಾಪಾರೀಕರಣದಿಂದಾಗಿ ಜನರು ಆಚೀಚೆ ಸ್ಥಳಾಂತರಗೊಂಡು ಉಡುಗಣಿ, ತಡಗಣಿ ಆಗಿವೆ ಎಂದು ಡಾ. ಮುರಘರಾಜ ತಿಳಿಸಿದರು.

ಕೌಶಿಕ ಉಡುತಡಿ, ಹಿರೇಕಸವಿ ಹಾಗೂ ಚಿಕ್ಕಕಸವಿ ಈ ಊರುಗಳಿಗೆ ಮಾಂಡಲಿಕನಾಗಿದ್ದನಂತೆ. ಉಡುತಡಿಯನ್ನು ಬಿಟ್ಟು ಹೋಗುವಾಗ ಅಕ್ಕ ಮಲ್ಲಪ್ಪನ ಎದುರಿಗೆ ನಿಂತುಕೊಂಡು ನಿನ್ನನ್ನು ಇನ್ನು ಯಾರು ಪೂಜಿಸುತ್ತಾರೆ? ನೀನೀಗ ಪರದೇಶಿಯಾದೆ ಎಂದು ಹೇಳಿ ಹೋದಳಂತೆ. ಅದಕ್ಕೆಂದೇ ಅದೀಗ ಪರದೇಶಿ ಮಲ್ಲಪ್ಪನ ಗುಡಿ ಎನಿಸಿದೆ. ಈ ಗುಡಿಯ ಎದುರು ಒಂದು ನೀರಿನ ಹೊಂಡವಿದೆ.

12 ನೇ ಶತಮಾನದ ವೈರಾಗ್ಯನಿಧಿ ಅಕ್ಕಮಹಾದೇವಿ. ಆಕೆಯ ಜೀವನದ ಹೆಚ್ಚಿನ ಮಾಹಿತಿಯನ್ನು ಇಲ್ಲಿಯ ಜನ ಉಳಿಸಿಕೊಂಡಿಲ್ಲವೆಂಬುದು ಅಚ್ಚರಿ ಹುಟ್ಟಿಸುತ್ತದೆ. ಆದರೆ, ಅಕ್ಕನ ಬಗ್ಗೆ ಅಪಾರ ಗೌರವವನ್ನಿಟ್ಟುಕೊಂಡಿದ್ದಾರೆ.

ಸಮಾಜದ ರೂಢಿಯನ್ನು ಅಕ್ಕ ನಿರ್ಭೀತಿಯಿಂದ ಮುರಿದಳು. ವಿವಾಹಕ್ಕೆ ತನ್ನನ್ನು ಬಂಧಿಸಿಕೊಳ್ಳಲಿಲ್ಲ. ಅಂದರೆ, ಸಮಾಜವು ಆಕೆಯನ್ನು ಮರೆಯಲೆತ್ನಿಸಿತ್ತೇ? ಎಂಬ ಪ್ರಶ್ನೆ ಇಲ್ಲಿ ಕಾಡದೇ ಇರದು.

ಮುಂದೆ ಬಳ್ಳಿಗಾವಿಯತ್ತ ಸಾಗಿತು ಪಯಣ. ಉಡುತಡಿಯಿಂದ 4 ಕಿ.ಮೀ. ದೂರದ ಇದು ಅಲ್ಲಮ ಪ್ರಭು ಹುಟ್ಟಿದ ಊರು. ಇಲ್ಲಿದ್ದ ಕೋಡೀ ಮಠವು ಹನ್ನೆರಡನೇ ಶತಮಾನದಲ್ಲಿ ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣ ಕೇಂದ್ರವಾಗಿತ್ತು. ಕಸಪಯ್ಯ ಎಂಬ ಮಾಂಡಲಿಕ ಇದ್ದುದು ಇಲ್ಲಿಯೇ ಕೇದಾರೇಶ್ವರ ಹಾಗೂ ಪ್ರಭುಲಿಂಗ ಮಂದಿರಗಳು ಇವೆ. ಅಲ್ಲಮಪ್ರಭು ಇದ್ದುದರ ಗುರುತಿಗೆ ಇದ್ದುದು ಪ್ರಭುಲಿಂಗ ಮಂದಿರ.

ಕೇದಾರೇಶ್ವರ ಮಂದಿರದ ಹೊರಭಾಗದ ಗೋಡೆಯ ಶಿಲ್ಪಕಲೆಯಲ್ಲಿ ಗೋಚರಿಸುವ ಚಿತ್ರಗಳು ಹೊಯ್ಸಳ ವಿಷ್ಣುವರ್ಧನನ ರಾಣಿ, ನಾಟ್ಯ ವಿಶಾರದೆ ಶಾಂತಲೆಯದು ಎನ್ನಲಾಗುತ್ತದೆ. ಬಳ್ಳಿಗಾವಿ ಶಾಂತಲೆಯ ತವರೂರಾಗಿತ್ತಂತೆ. ಶ್ರೀಮಾನ್ ಜಿ.ವಿ. ಅಯ್ಯರ್ ಬರೆದ 'ಶಾಂತಲೆ' ಕಾದಂಬರಿಯಲ್ಲಿ ವಿಷ್ಣುವರ್ಧನ ಹಾಗೂ ಶಾಂತಲೆ ಒಂದೇ ಪಟ್ಟಣದವರೆಂಬ ಉಲ್ಲೇಖವಿದೆ. ವಿಷ್ಣುವರ್ಧನನ ರಾಜಧಾನಿ ಬೇಲೂರು. ಅಲ್ಲಮನ ಕಥೆಗಿಂತಲೂ ಶಾಂತಲೆಯ ಕಥೆಯೇ ಇಲ್ಲಿ ಹೆಚ್ಚು ಪ್ರಚಲಿತವಿದೆ.

ಬಳ್ಳಿಗಾವಿಯನ್ನು ದಕ್ಷಿಣದ ಕೇದಾರ ಎಂದು ಕರೆಯಲಾಗುತ್ತಿತ್ತು. ಅಲ್ಲಮನ ಗುರುವಾದ ಅನಿಮಿಷ ಇದ್ದ ಜಾಗೆಯು ಮುಳುಗಿಹೋಗಿದೆ ಎಂಬ ನಂಬಿಕೆ ಇದೆ. ಕೋಡೀ ಮಠದಲ್ಲಿ ಇದ್ದ ಗ್ರಂಥಗಳಾಗಲೀ ಮತ್ತಾವ ಉಲ್ಲೇಖಗಳಾಗಲೀ ಇಲ್ಲಿ ದೊರೆಯುವದಿಲ್ಲ. ವಿಷ್ಣುವರ್ಧನ ಆಳುವವರೆಗೆ ಆತನಿಗೆ ಬಳ್ಳಿಗಾವಿಯನ್ನು ವಶಪಡಿಸಿಕೊಳ್ಳಲಾಗಲಿಲ್ಲ ಎಂದು ಇತಿಹಾಸಕಾರ ಡಾ. ಸೂರ್ಯನಾಥ ಕಾಮತ್ ಬರೆಯುತ್ತಾರೆ. ಹೀಗಿರುವಾಗ ಶಾಂತಲೆಯನ್ನು ಇಲ್ಲಿಯ ಉಬ್ಬುಶಿಲ್ಪಗಳಿಗೆ ತಳುಕು ಹಾಕಲು ಜನ ಯಾಕೆ ನೋಡುತ್ತಾರೋ ಎಂಬುದು ಸಂದಿಗ್ಧವಾಗಿದೆ.

ಇದೆ ಊರಲ್ಲಿ ವೀರಭದ್ರೇಶ್ವರ ಹಾಗೂ ಭೇರುಂಡೇಶ್ವರ ಮಂದಿರಗಳಿವೆ. ವೀರಭದ್ರೇಶ್ವರ ಮಂದಿರದಲ್ಲಿ ಒಂದು ಸ್ಪಟಿಕಲಿಂಗವಿದೆ. ಅದರ ಬಣ್ಣ ದಿನದಲ್ಲಿ ಮೂರು ಬಾರಿ ಬಲಾಗುತ್ತದೆ. ಬೆಳಿಗ್ಗೆ ಹಸಿರು ಮಧ್ಯಾಹ್ನ ಕೆಂಪು ಹಾಗೂ ಸಂಜೆಗೆ ಕಪ್ಪು ಬಣ್ಣದ್ದಾಗಿ ತೋರುತ್ತದೆ. ಸ್ಪಟಿಕ ಲಿಂಗದ ಎರಡು ಬಣ್ಣಗಳನ್ನು (ಹಸಿರು,

ಕಪ್ಪು) ನಾವು ನೋಡಿದೆವು.

ಮೊದಲು ಈ ಲಿಂಗವು ಒಂದು ಕೆರೆಯ ದಂಡೆಯ ಮೇಲಿತ್ತು. ಅದನ್ನು ಕಳ್ಳರು ಕದ್ದೊಯ್ಯುವ ಪ್ರಯತ್ನ ಮಾಡಿದರೂ, ತೆಗೆದುಕೊಂಡು ಬಹಳ ದೂರ ಹೋಗಲಿಲ್ಲ. ಹಿಂತಿರುಗಿ ಬಂದು ಇಟ್ಟು ಹೋದರು. ಈಗ ಅದು ವೀರಭದ್ರೇಶ್ವರ ಗುಡಿಯಲ್ಲಿದೆ ಎನ್ನುತ್ತಾರೆ ಜನ. ಈ ವಿಷಯ ದೂರದರ್ಶನದ ಸಮಾಚಾರದಲ್ಲಿಯೂ ಬಂದಿತ್ತಂತೆ.

ಭೇರುಂಡೇಶ್ವರ ಮೂರ್ತಿಯು ಆರು ಫೂಟು ಎತ್ತರದ ಪೀಠದ ಮೇಲಿದೆ. ಅದರ ಸುತ್ತಲೂ ತಂತಿಯ ಜಾಳಿಗೆಯಿದೆ. ತಲೆ ಮೇಲೆತ್ತಿ ಮೂರ್ತಿಯನ್ನು ನೋಡಬೇಕಾಗುತ್ತದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಮೇಲಿರುವ ಗಂಡ ಬೇರುಂಡ ಪಕ್ಷಿಯ ಕಲ್ಪನೆ ಈ ಮೂರ್ತಿಯನ್ನು ಆಧರಿಸಿದೆ ಎನ್ನಲಾಗುತ್ತದೆ. ಈ ಮೂರ್ತಿಗೆ ಎರಡು ಕಾಲು, ಎರಡು ಕೈ ಹಾಗೂ ಎರಡು ತಲೆ. ಆದರೆ, ಪಕ್ಷಿಯ ತಲೆಯಲ್ಲಿ ಇದರ ಸಮೀಪದಲ್ಲಿಯೇ ಒಂದು ಶಿವಮಂದಿರವಿದೆ. ಬಳ್ಳಿಗಾವಿ ಒಂದು ಪ್ರಸಿದ್ಧ ಶಿಕ್ಷಣ ಕೇಂದ್ರವಾಗಿತ್ತು ಎಂಬ ಬರಹವನ್ನು ಹೊಂದಿದ ಸೂಚಿ ಫಲಕವೂ ಬಳಿಯಲ್ಲಿದೆ.

ಇಲ್ಲಿ ಕೆರೆಗಳು ಹೆಚ್ಚು ರಸ್ತೆಯ ಎರಡೂ ಕಡೆಗಳಲ್ಲಿ ಕೆರೆಗಳು ಕಾಣುತ್ತವೆ. ಕೆಂಪು ಮಣ್ಣಿನ ನೆಲ, ಭತ್ತ, ಕಬ್ಬು ಹಾಗೂ ಮೆಕ್ಕೆಜೋಳಗಳನ್ನು ಬೆಳೆಯುತ್ತಾರೆ.

ಮಾರನೇ ದಿನ ನಮ್ಮ ಮರುಪ್ರಯಾಣ ಪ್ರಾರಂಭವಾಯಿತು. ಉಡುತಡಿ, ಉಡುಗಣಿ, ಶಿರಾಳಕೊಪ್ಪ, ಬಳ್ಳಿಗಾವಿ, ತೊಗರ್ಸಿ ಮಾರ್ಗವಾಗಿ. ದಾರಿಯ ಇಕ್ಕೆಲಗಳಲ್ಲಿ ಕಾಡು ಪ್ರದೇಶವಿದೆ. 21ನೇ ಶತಮಾನದಲ್ಲಿ ಇಷ್ಟು ಕಾಡು ಇರುವಾಗ ಅಕ್ಕ ಪಯಣಿಸಿ 12 ನೇ ಶತಮಾನದಲ್ಲಿ ಕಾಡು ಎಷ್ಟು ದಟ್ಟವಾಗಿತ್ತೋ? ದಾರಿ ಕಾಡು ದಾರಿಯಾಗಿತ್ತೆನ್ನಲಾಗದು. ಕಲ್ಯಾಣದ ಬಿಜ್ಜಳ ದೊರೆ ಬಳ್ಳಿಗಾವಿಗೆ ಬಂದ ವಿಷಯವು ಬಳ್ಳಿಗಾವಿ ಶಾಸನದಲ್ಲಿದೆ. ಆತನ ಕಥ, ಕುದುರೆ, ಕಾಲಾಳುಗಳು ಬರುವಷ್ಟು ಸಜ್ಜಿತ ರಸ್ತೆ ಇದ್ದಿರಬೇಕು. ಕಾಡಿನಲ್ಲಿ ಕಾಡು ಪ್ರಾಣಿಗಳಿದ್ದಿರಬೇಕೆಂಬುದಕ್ಕೆ ಅಕ್ಕನ ವಚನ ಆಧಾರವಾಗಿದೆ.

ಬೆಟ್ಟದ ಮೇಲೊಂದು ಮನೆಯ ಮಾಡಿ

ಮೃಗಗಳಿಗಂಜಿದಡೆಂತಯ್ಯ........

ದಾರಿಯಲ್ಲಿ ಬೆಟ್ಟವೊಂದನ್ನು (ತೊಗರ್ಸಿಯಲ್ಲಿಯ) ಬಿಟ್ಟು ಮತ್ತೆಲ್ಲಿಯೂ ಬೆಟ್ಟಗಳಿಲ್ಲ. ಈ ಬೆಟ್ಟದ ಮೇಲೆ 'ಶ್ರೀ ಶೈಲ ಮಲ್ಲಿಕಾರ್ಜುನ ಲಿಂಗ'ದ ಮಂದಿರವಿದೆ. ಇದು ಪಂಚಾಚಾರ್ಯರಿಂದ ಆರಾಧಿತವಾದ ಲಿಂಗ. ಇಲ್ಲಿರುವ ಯಜ್ಞಕುಂಡವು, ಯಜ್ಞ ಹೋಮಗಳು ನಡೆಯುತ್ತಿದ್ದವೆಂಬುದಕ್ಕೆ ಸಾಕ್ಷಿಯಾಗಿದೆ. ಇಲ್ಲಿಯ ಮಠಾಧೀಶರು ಅಕ್ಕನು ಈ ದಾರಿಯಲ್ಲಿ ನಡೆದುಹೋದ ದಾಖಲೆಗಳು ತಮ್ಮಲ್ಲಿ ಇಲ್ಲವೆಂದರು.

ಮುಂದೆ ಆನವಟ್ಟಿಯವರೆಗೂ ಕಾಡು ಇದೆ. ಕಾಡು ಮೃಗಗಳು ಅಕ್ಕನಿಗೆ ಯಾವ ತೊಂದರೆಯನ್ನೂ ಮಾಡಿಲ್ಲ. ಅಕ್ಕನಲ್ಲಿ ಅಸಾಧ್ಯ ಧೈರ್ಯ ಹಾಗೂ ಆತ್ಮ ವಿಶ್ವಾಸಗಳಿದ್ದವು.

ಹಾನಗಲ್ಲ ತಲುಪುವ ಮುನ್ನ ವರದಾ ನದಿಯನ್ನು ದಾಟಬೇಕಾಗುತ್ತದೆ. ಇದು ಚಿಕ್ಕ ನದಿ. ಇದನ್ನು ಈಜಿಕೊಂಡು ಅಕ್ಕ ಹೋದಳೇ? ಹೇಳುವುದು ಕಷ್ಟ. ಬಿಜ್ಜಳ ದೊರೆ ಬಂದಿರಬೇಕಾದರೆ ಅದಕ್ಕೆ ಆಗಲೇ ಸೇತುವೆ ಇದ್ದಿರಬಹುದು. ಈಗಲೂ ಇದೆ.

ಹಿಂದಣ ಹಳ್ಳ, ಮುಂದಣ ತೊರೆ

ಸಲ್ಲುವ ಪರಿಯೆಂತು ಹೇಳಾ|

ಹಿಂದಣ ಕೆರೆ ಮುಂದಣ ಬಲೆ

ಹದುಳವಿನ್ನೆಲ್ಲಿಯದು ಹೇಳಾ|

ನೀನಿಕ್ಕಿದ ಮಾಯ ಕೊಲುಡಿಪ್ಪುದು

ಕಾಯಯ್ಯ ಕಾಯಯ್ಯ ಚೆನ್ನಮಲ್ಲಿಕಾರ್ಜುನ ||

ಅಕ್ಕನ ಈ ವಚನವು ಆಕೆ ಅನೇಕ ಹಳ್ಳಿಗಳನ್ನು ತೊರೆಗಳನ್ನು, ಕೆರೆಗಳನ್ನು ದಾಟಿದಳೆಂಬ ಸೂಚನೆಯನ್ನು ನೀಡುತ್ತದೆ. ಅಕ್ಕನ ದಾರಿಯಲ್ಲಿ ಈ ನದಿ ಮಾಯೆಯಾಗಿ ಕಂಡಿದೆ. ತನ್ನ ಗುರಿಯನ್ನು ತಲುಪುವಲ್ಲಿ ಅಂದರೆ ಶೀಘ್ರವಾಗಿ ತಲುಪುವಲ್ಲಿ ಇವು ಅಡ್ಡಿಯಾದುದರಿಂದ ಅಕ್ಕ ಆರ್ತಳಾಗಿ ಚೆನ್ನಮಲ್ಲಿಕಾರ್ಜುನನಿಗೆ ಬೇಡಿಕೊಳ್ಳುತ್ತಾಳೆ. ಯಾಕೆಂದರೆ ಇದೆಲ್ಲವೂ ಪರಮಾತ್ಮನ ಸೃಷ್ಟಿಯಾಗಿದೆ.

ಅಕ್ಕ ಹಾನಗಲ್ಲ, ಪುಲಿಗೆರೆ, ವಾತಾಪಿ, ಕೂಡಲಸಂಗಮ, ಬಸವನ ಬಾಗೇವಾಡಿ, ವಿಜಾಪುರ, ಸುರಪುರ, ಗುಲ್ಬರ್ಗಾ, ಮಹಾಗಾಂವ್ ಮಾರ್ಗವಾಗಿ ಬಸವಕಲ್ಯಾಣಕ್ಕೆ ಹೋದಳೆಂದು ಎಸ್.ಎಮ್. ಅಂಗಡಿ ತಮ್ಮ ಬಸವದರ್ಶನ ಪುಸ್ತಕದಲ್ಲಿ ನಮೂದಿಸಿದ್ದಾರೆ.

ನಾವು ಉಡುತಡಿಯಿಂದ ಬಳ್ಳಿಗಾವಿ, ತೊಗರ್ಸಿ, ಆನವಟ್ಟಿ, ಹಾನಗಲ್, ಪುರಿಗೆರೆ (ಈಗಿನ ಲಕ್ಷ್ಮೇಶ್ವರ) ಹಾಗೂ ಗದಗ ಇಲ್ಲಿಯವರೆಗೆ ಬಂದೆವು. ಗದಗ ಇಷ್ಟು ದೊಡ್ಡ ಪಟ್ಟಣವಾದರೂ ಅಂಗಡಿಯವರು ಅದನ್ನು ಹೆಸರಿಸಿಲ್ಲ. ಇಲ್ಲಿ ತೋಂಟದ ಸಿದ್ಧಲಿಂಗೇಶ್ವರ ಮಠವಿದೆ.

ಪುಲಿಗೆರೆಯಲ್ಲಿರುವ ಸೋಮೇಶ್ವರ ದೇವಾಲಯ ಆರನೇ ಶತಮಾನದ್ದು. ಆದಯ್ಯ ಎಂಬ ಶರಣ ಸೌರಾಷ್ಟ್ರದ ಸೋಮನಾಥ ಲಿಂಗವನ್ನು ತಂದು ಜೈನ ಮಂದಿರದಲ್ಲಿ ಪ್ರತಿಷ್ಠಾಪಿಸಿದ ಮೊದಲು ಅದು ಪದ್ಮಾವತಿ ಮಂದಿರವಾಗಿತ್ತು. ದೇವಾಲಯ ಸಾಕಷ್ಟು ವಿಶಾಲವಾಗಿದೆ. ಚಾಲುಕ್ಯ ಶೈಲಿಯ ಶಿಲ್ಪಕಲೆಯನ್ನು ಹೊಂದಿದೆ. ಅಕ್ಕ ಇಲ್ಲಿ ತಂಗಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಆದಯ್ಯ ಬಸವಣ್ಣನವರ ಹಿರಿಯ ಸಮಕಾಲೀನ ಅಕ್ಕ ಹೋಗುತ್ತಿರುವಾಗ ಪುಲಿಗೆರೆಯಲ್ಲಿ ಆತ ಇದ್ದ. ಆದರೆ, ಆತನ ವಚನಗಳಲ್ಲಿ ಅಕ್ಕನ ಪ್ರಸ್ತಾಪವಿಲ್ಲ. ಈತನ ಕಾಲ 1100 ಎಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಆತ ಅಕ್ಕನನ್ನು ಗಂಭೀರವಾಗಿ ಪರಿಗಣಿಸಲಿಲ್ಲವೇ? ಎಂಬ ಅನುಮಾನಕ್ಕೆ ಆಸ್ಪದವಿದೆ. ಮಠದ ಆವರಣದಲ್ಲಿ ಶಿಲಾಶಾಸನಗಳಲ್ಲದೇ ದೇವಸ್ಥಾನದ ಕಂಬಗಳ ಮೇಲೂ ಸಂಸ್ಕೃತದ ಬರವಣಿಗೆ ಇದೆ.

ಸಂತೆಯೊಳಗೊಂದು ಮನೆಯ ಮಾಡಿ

ಶಬ್ದಕೆ ನಾಚಿದಡೆಂತಯ್ಯ......

ವಚನದ ಈ ಸಾಲುಗಳು ಅಕ್ಕ ಲೋಕದ ಸಾವಿರ ಜನರ ಮಧ್ಯದಲ್ಲಿ ಸಾವಿರ ಮಾತುಗಳನ್ನು ಕೇಳುತ್ತ, ಅವುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೇ ನೋಯದೇ ಮುನ್ನಡೆದುದು ಖಚಿತವಿದೆ. ತನುವಿನ ಲಜ್ಜೆಯನ್ನು ಕಳೆದುಕೊಂಡ ಅಕ್ಕನಿಗೆ ಯಾವ ಮಾತೂ ಬಾಧಿಸಿಲ್ಲ.

ಸ್ತುತಿ ನಿಂದೆಗಳು ಬಂದೆಡೆ.... ಸ್ತುತಿ ಬಂದಿರಬಹುದು. ಕೆಲ ಭಕ್ತ ಜನರು ಆಕೆಯ ಪೂಜೆ ಹಾಗೂ ಪ್ರಸಾದದ ವ್ಯವಸ್ಥೆಯನ್ನು ಮಾಡಿರಬಹುದಾದ ಸಾಧ್ಯತೆ ಇದೆ.

ಅಕ್ಕ ಪುಲಿಗೆರೆಯಿಂದ ವಾತಾಪಿಗೆ ಹೋದಳು. ಅಲ್ಲಿಂದ ಕೂಡಲ ಸಂಗಮಕ್ಕೆ.... ನನಗೆ ಈ ರಸ್ತೆಯನ್ನು ಅನುಸರಿಲಾಗಲಿಲ್ಲ. ಮಳೆ ಪ್ರಾರಂಭವಾಯಿತು.

ಕೂಡಲ ಸಂಗಮ ಪ್ರಾಚೀನ ದೇವಸ್ಥಾನ. ಇಲ್ಲಿಯೇ ಇದ್ದು ಬಸವಣ್ಣ ವಿದ್ಯಾರ್ಜನೆ ಮಾಡಿದ. ಆತನ ವಚನಗಳ ಅಂಕಿತ 'ಕೂಡಲ ಸಂಗಯ್ಯ'. ಅಕ್ಕನದು 'ಚೆನ್ನಮಲ್ಲಿಕಾರ್ಜುನ'.

ಬಳ್ಳಿಗಾವಿಯಿಂದ ಹತ್ತಿಪ್ಪತ್ತು ಕಿ.ಮೀ. ದೂರದಲ್ಲಿರುವ 'ಶ್ರೀ ಶೈಲ ಚೆನ್ನಮಲ್ಲಿಕಾರ್ಜುನ ಲಿಂಗ' ಎನ್ನುವ ಮಂದಿರ. ಈ ಮಂದಿರದ ಎದುರಿಗೆ ಒಂದು ಗೋಪುರವಿದೆ. ಈ ಗೋಪುರದ ಮೇಲೆ ಮೂರ್ತಿಗಳಿವೆ. ಹೆಣ್ಣಿನ ವಿಗ್ರಹಗಳು ಅರೆನಗ್ನ, ಕಟಿ ಪ್ರದೇಶದಿಂದ ಮೇಲೆ ಕೇವಲ ಆಭರಣಗಳು. ಅಕ್ಕನಿಂದ ಈ ಶಿಲ್ಪಿ ಪ್ರೇರಣೆ ಪಡೆದನೇ? ಎಂಬ ಸಂಶಯ ಕಾಡುತ್ತದೆ. ಈ ಮೂರ್ತಿಗಳಲ್ಲಿ ಕಟ್ಟಿದ ಮುಡಿ ಇದೆ. ಅಕ್ಕನದು ಬಿಚ್ಚಿದ ಮುಡಿಯಾಗಿತ್ತು.

ಅಕ್ಕನ ವಚನಗಳೇ ಆಕೆ ನಡೆದು ಹೋದ ಮಾರ್ಗದಲ್ಲಿಯ ಆತಂಕ ಹಾಗೂ ತೊಂದರೆಗಳಿಗೆ ಆಕೆ ತೋರಿದ ತಾಳ್ಮೆ ಮತ್ತು ಧೈರ್ಯಗಳಿಗೆ ದಾಖಲೆಗಳಾಗಿವೆ. ಆಕೆ ಚೆನ್ನಮಲ್ಲಿಕಾರ್ಜುನನಲ್ಲಿಟ್ಟ ನಿಷ್ಠೆ, ನಂಬಿಕೆಗಳು ಅಸಾಧಾರಣವಾದುವು.

●

# ಕಡಲ ಮುತ್ತೊಂದು ತಂದಿತು ಕುತ್ತು

*(ಹಿಂದಿನ ಸಂಚಿಕೆಯಿಂದ)*

ಕಿನೊ ಅಸಹನೆಯಿಂದ ನಾನು ತಂದಿರುವ ಈ ಮುತ್ತು ಬೆಲೆಬಾಳುವಂತಹುದು ಎಂದ ಕೂಡಲೇ ಕೊಳ್ಳುವವನು "ನೀನೊಬ್ಬ ಮುಠ್ಠಾಳ. ಈ ಮುತ್ತು ಇಷ್ಟು ದೊಡ್ಡದಾಗಿದೆ. ಇದನ್ನು ಯಾರು ಬೆಲೆ ಕೊಟ್ಟು ಕೊಳ್ಳುತ್ತಾರೆ. ಪ್ರದರ್ಶನಕ್ಕೆ ಇಡಲು ಲಾಯಕ್ಕಿದೆ ಅಷ್ಟೆ" ಎನ್ನುತ್ತಾ ಕಿನೊವಿನ ಉತ್ಸಾಹಕ್ಕೆ ತಣ್ಣೀರು ಎರಚಿಬಿಟ್ಟನು. 'ಮ್ಯೂಸಿಯಮ್‌ಗೆ (Museum) ಕೊಟ್ಟುಬಿಡು ಎಂದ ಕೂಡಲೇ ಕಿನೊವಿನ ಮುಖ ಕಪ್ಪಿಟ್ಟಿತು. "ಇದರ ಬೆಲೆ 50,000 ನೀವುಗಳು ನಮಗೆ ಮೋಸ ಮಾಡುತ್ತಿದ್ದೀರಿ" ಎಂದು ಕಿರುಚಿದನು. ಅಲ್ಲಿದ್ದವರಲ್ಲಿ ಭೀತಿ ಆವರಿಸಿಕೊಂಡಿತು. 'ಅದನ್ನು ಮಾರಿ, ಒಂದು ಸಾವಿರ ಬಂದಿದ್ದರೂ ತೆಗೆದುಕೊಂಡು ಹೋಗಿ ಬಿಡಬೇಕಾಗಿತ್ತು. ನಿನ್ನೆಯ ದಿವಸ ಅವನ ಬಳಿ ಏನೂ ಇರಲಿಲ್ಲ' ಎಂದು ಅಲ್ಲಿದ್ದ ಸಂಗಡಿಗರು ಗುಸುಗುಸು ಎಂದು ಮಾತನಾಡಿಕೊಂಡರು. ಆದರೆ, ಕಿನೊ ಒಂದೇ ಪಟ್ಟು ಹಿಡಿದಿದ್ದನು. ಬಳಿಯಲ್ಲಿ ಇದ್ದ ಇನ್ನೊಬ್ಬನಿಗೆ ತೋರಿಸಿದನು. ಅವನು ಈ ಬಗ್ಗೆ ಮಾತನಾಡಲು ನಿರಾಕರಿಸಿದನು. ಮತ್ತೊಬ್ಬ ದಳ್ಳಾಳಿಗೆ ತೋರಿಸಿದಾಗ ಅವನು ವ್ಯಂಗ್ಯವಾಗಿ ನಗುತ್ತಾ "ಈ ಮುತ್ತು ಬಹಳ ಮೃದು ಸುಣ್ಣದ ಕಲ್ಲಿನಂತಿದೆ. ಕೆಲವೇ ದಿನಗಳಲ್ಲಿ ಇದರ ಬಣ್ಣ ಮಾಸಲಾಗಿ ಹಾಳಾಗಿ ಹೋಗುವುದು" ಎನ್ನಲು, ಮತ್ತೊಬ್ಬ "ನನ್ನ ಗೆಳೆಯನೊಬ್ಬನಿದ್ದಾನೆ. ನಾನು 500 (Pesos) ಕೊಟ್ಟು ಕೊಂಡು ಅವನಿಗೆ 600 ಪಿಸೋಸ್ (Pesos)ಗೆ ಮಾರಿಬಿಡುತ್ತೇನೆ" ಎಂದ ಕೂಡಲೇ ಅವನ ಕೈನಿಂದ ಮುತ್ತನ್ನು ಕಿತ್ತುಕೊಂಡು ಜಿಂಕೆ ಚರ್ಮದಲ್ಲಿ ಸುತ್ತಿ ತನ್ನ ಪಾಕೆಟ್‌ನಲ್ಲಿ ಭದ್ರಪಡಿಸಿ "ನನಗೆ ಮೋಸಮಾಡಿ ಬಿಟ್ಟರಿ. ನಾನು ಇಲ್ಲಿಂದ ದೊಡ್ಡಪಟ್ಟಣಕ್ಕೆ ಹೋಗಿ ಅಲ್ಲಿ ಮಾರಿ, ಒಳ್ಳೆಯ ಬೆಲೆ ಪಡೆಯುತ್ತೇನೆ" ಎಂದು ಕಿರುಚಿದನು. 1500 ಪಿಸೋಸ್ (Pesos) ಕೊಟ್ಟು ಕೊಂಡುಕೊಳ್ಳುತ್ತೇವೆ ಎಂದು ಆ ದಲ್ಲಾಳಿಗಳು ಹೇಳುತ್ತಿದ್ದರೂ ಹಿಂತಿರುಗಿ ನೋಡದೇ ಕೋಪದಿಂದ, ತನ್ನ ಗುಡಿಸಲಿಗೆ ಬಂದು ಸೇರಿದರು. ಹಿಂದೆ ಜುಆನ, ಮಗು ಕೂಡ ವಾಪಸ್ ಬಂದರು. ಬಿಸಿ ಬಿಸಿ ಮಾತುಕಥೆಗಳು ಅಲ್ಲಿನ ಗುಡಿಸಲಿನಲ್ಲಿ ಜನಗಳ ನಡುವೆ ಇಡೀ ರಾತ್ರಿ ನಡೆಯಿತು. ಕೆಲವರು ಕಿನೊ ಪರವಾಗಿ, ಕೆಲವರು ಕಿನೊ ದಳ್ಳಾಳಿಗಳ ವಿರೋಧ ಕಟ್ಟಿಕೊಂಡು ತನ್ನ ತಲೆಯ ಮೇಲೆ ತಾನೇ ಚಪ್ಪಡಿ ಕಲ್ಲು ಎಳೆದುಕೊಂಡನು ಎಂದು ತಮ್ಮತಮ್ಮಲ್ಲಿಯೇ ಮಾತನಾಡಿಕೊಂಡರು. ಆದರೆ, ಕೆಲವರು 'ಕಿನೊ ಧೈರ್ಯಶಾಲಿ, ಹಲವಾರು ವರ್ಷಗಳಿಂದ ನಾವುಗಳು ಹೇಡಿಗಳಾಗಿ, ತಲೆತಗ್ಗಿಸಿ ಬಾಳ್ವೆ ನಡೆಸುತ್ತಾ ಬಂದಿದ್ದೇವೆ. ಪ್ರಾಯಶಃ ಕಿನೊವಿನ ಈ ಧೈರ್ಯ ಪ್ರದರ್ಶನದಿಂದ ನಮ್ಮ ಬಾಳಿನಲ್ಲೂ ಬೆಳಕು ಮೂಡಬಹುದು' ಎಂಬ ದೂರದ ಒಂದು ಆಸೆಯನ್ನು ವ್ಯಕ್ತಪಡಿಸಿದರು. (ಮುಂದೇನಾಗುವುದೋ ಎಂದು ಓದುಗನಿಗೂ ಕುತೂಹಲ.....ಪ್ರೇರೇಪಿಸುತ್ತದೆ.......) ಇಲ್ಲಿಂದ ಮುಂದಿನ ಕಥೆ ಹೀಗೆ ಸಾಗುತ್ತದೆ........

ಮುಂದೇನು ಎಂಬ ಚಿಂತೆಯಿಂದ ಕುಗ್ಗಿ ಹೋಗಿದ್ದನು ಕಿನೊ. ಮೊದಲಿನಂತೆ ಕಲ್ಲಿನ್ನು ಕೆಳಗೆ, ಮಣ್ಣಿನಲ್ಲಿ, ಒಂದು ಹಳ್ಳ ಮಾಡಿ, ಮುತ್ತನ್ನು ಹೂತಿಟ್ಟನು. ಒಂದು ಪ್ರಪಂಚವನ್ನು ಕಳೆದುಕೊಂಡಿದ್ದನು. ಮತ್ತೊಂದು ಪ್ರಪಂಚವನ್ನು ಅವನು ಪಡೆಯಲು ವಿಫಲನಾಗಿದ್ದನು (He lost one world and had not gained another). ಕಿನೊ ದಂಪತಿಗಳಿಗೆ ತಮ್ಮ ಮನೆಯೇ ಪ್ರಪಂಚ. ಗುಡಿಸಿಲಿನ ಹೊಸಿಲು ಧಾಟಿ ಅಪರಿಚಿತರು ಇರುವ ಮತ್ತೊಂದು ಪ್ರಪಂಚವನ್ನು ಕಂಡವರಲ್ಲ. ಅಲ್ಲಿ ಎಂದೂ ಕಾಲಿಟ್ಟವರೇ ಇಲ್ಲ. ಪಾಪ! ಆ ಕ್ಯಾಪಿಟಲ್ (Capital)ಗೆ ಹೋಗುವುದು ಹೇಗೆ, ಪರ್ವತಗಳ ಮೂಲಕ, ಸಾವಿರಾರು ಮೈಲುಗಳ ದೂರವನ್ನು ಕ್ರಮಿಸಿ ಆ ಅಪರಿಚಿತ ಸಮೂಹವಿರುವ ತಾಣವನ್ನು ತಲುಪುವುದೆಂತು ಎಂಬ ಭೀತಿ ಅವರ ಹೃದಯದಲ್ಲಿ ಬೆಂಕಿಯಂತೆ ಸುಡಲಾರಂಭಿಸಿತು. ಹಿಂದಿನ ಪ್ರಪಂಚ ಒಂದನ್ನು ಕಳೆದುಕೊಂಡಾಗಿದೆ, ಪ್ರಯಾಸ ಪಟ್ಟಾದರೂ ಹೊಸ ಪ್ರಪಂಚದೆಡೆಗೆ ಕನಸು, ನನಸು ಮಾಡಿಕೊಳ್ಳಲು ಕಷ್ಟಪಟ್ಟುಕೊಂಡು, ಕುಂಟುತ್ತಲಾದರೂ ಹೋಗಲೇಬೇಕೆಂದು ಕಿನೊ ನಿರ್ಧರಿಸಿಯಾಗಿತ್ತು!. ಅವನ ಅಣ್ಣ ಟೊಮಾಸ್ (Tomas) ಕೂಡಾ ಇದೆ ರೀತಿಯ ಭವಿಷ್ಯದ ಬಗ್ಗೆ ಭಯವನ್ನು ವ್ಯಕ್ತಪಡಿಸುತ್ತಾ, "ನಿಜ, ನಾವು ಮೋಸ, ಅನ್ಯಾಯಕ್ಕೆ ಒಳಪಟ್ಟಿದ್ದೇವೆ. ಆದರೆ, 'ಮುತ್ತು' ಕೊಳ್ಳುವ ದಳ್ಳಾಳಿಗಳ ವಿರುದ್ಧ ಧ್ವನಿ ಎತ್ತಿರುವುದಷ್ಟೇ ಅಲ್ಲದೆ, ವ್ಯವಸ್ಥೆಗೆ ವಿರುದ್ಧವಾಗಿ ನಿಂತಿರುವ ನಿನ್ನ ಧೋರಣೆಯು ನಿನಗೆ ಅಪಾಯ ತಂದೊಡ್ಡಿದರೆ ಏನು ಗತಿ? ಎಂಬ ಭಯ ನನ್ನನ್ನು ಆವರಿಸಿದೆ" ಎಂದನು. 'ದೇವರನ್ನು ನಂಬಿನಡೆ' ಎಂದು ಬುದ್ಧಿವಾದಗಳನ್ನು ಹೇಳಿ ಅಣ್ಣ ಟೊಮಾಸ್ ಹೊರಟುಹೋದನು.

ಜುಆನ ಗಂಡನ ಮುಖಭಾವವನ್ನು ನೋಡಿ, ಮಾತೊಂದನ್ನೂ ಆಡದೆ ಚಿಂತಿತಳಾಗಿದ್ದರೂ, ಅವನ ಸಂಗಡವೇ ಕಷ್ಟವೋ, ಸುಖವೋ ಮುಂದಿನ ಬದುಕಿನಲ್ಲಿ ಹೆಜ್ಜೆ ಹಾಕಲು ನಿರ್ಧರಿಸಿಕೊಂಡಳು. ಅಂದು ರಾತ್ರಿ ಗಂಡ-ಹಂಡತಿ ಇಬ್ಬರೂ ಊಟ ಮಾಡಲಿಲ್ಲ. ಅವನ ಮನಸ್ಸಿಗೆ ಗುಡಿಸಿಲಿನ ಹೊರಗೆ ಕತ್ತಲಿನಲ್ಲಿ ನೆರಳುಗಳು, ಕರಿನೆರಳುಗಳು ತನಗಾಗಿ ಕಾಯುತ್ತಿರುವಂತೆ ಭಾಸವಾಯಿತು. ತನ್ನ ಷರ್ಟಿನ ಜೇಬಿನಲ್ಲಿಟ್ಟುಕೊಂಡಿದ್ದ ಚಾಕು ತೆಗೆದು ಹೊರಟನು ಕಿನೊ. ತಡೆಯಲು ಜುಆನ ಪ್ರಯತ್ನ ಮಾಡಿ ಆಗದೆ, ಒಳಗೆ ಬಂದು ಒಂದು ದೊಡ್ಡ ಕಲ್ಲನ್ನು ಕೈಯಲ್ಲಿ ತೆಗೆದುಕೊಂಡು ಹೊರಗಡೆ ಕತ್ತಲಿನಲ್ಲಿ ಕಂಡ ನೆರಳಿನ ಮೇಲೆ ಎಸೆಯಬೇಕೆಂದು ಅಂದುಕೊಳ್ಳುವಷ್ಟರಲ್ಲಿ ಕಿನೊ ನೆಲಕ್ಕುರುಳಿದ್ದನು. ಹೊರಗಡೆ ಕಡಲ ಅಲೆಗಳ ಭೋರ್ಗರೆವ ಸದ್ದು, ಪಕ್ಕದಲ್ಲಿ ಯಾರೂ ಇಲ್ಲ. ಜುಆನ ಅವನನ್ನು ಹಿಡಿದೆಬ್ಬಿಸಿ ಗಾಯದಿಂದ ಒಸರುತ್ತಿದ್ದ ರಕ್ತವನ್ನು ಒರಸಿದಳು.

ದುಷ್ಟಶಕ್ತಿಗಳ ಪ್ರಭಾವ, ಅಪಶಕುನಗಳ ಅಲೆಗಳು ಕಿನೊ, ಜುಆನ ಗುಡಿಸಲನ್ನು ಅಪ್ಪಳಿಸಲು ಆರಂಭಿಸಿತ್ತು. ಅವರು ಸುಖ, ಶಾಂತಿ, ನೆಮ್ಮದಿ ಮುಂದೆಂದೂ ತಮ್ಮ ಬಾಳಿನಲ್ಲಿ ಕಾಣಲಾಗಲಿಲ್ಲ! ಜುಆನ ಎಷ್ಟೇ ಹಿತವಚನಗಳನ್ನು ಹೇಳಿದರೂ ಅದೊಂದೂ ಕಿನೊವಿನ ಕಿವಿಗೆ ಮುಟ್ಟಲೇ ಇಲ್ಲ. 'ಈ ಮುತ್ತನ್ನು ಕಲ್ಲಿನಿಂದ ಪುಡಿಪುಡಿ ಮಾಡಿ ಸಮುದ್ರಕ್ಕೆ ಎಸೆದುಬಿಡೋಣ. ಈಗಾಗಲೇ ನಮಗೆ ಕಷ್ಟಪರಂಪರೆಗಳು ಬಂದೆರಗಿವೆ. ಆ ಕೆಟ್ಟ ಮುತ್ತನ್ನು ಬಿಸಾಡಿಬಿಡು' ಎಂದು ಎಷ್ಟೇ ಹೇಳಿದರೂ "ನಾನು ಗಂಡಸು, ಕಡಲನ್ನೂ, ಪರ್ವತವನ್ನೂ ನಾವಿಬ್ಬರೂ ಧಾಟಿಹೋಗಿ ಕ್ಯಾಪಿಟಲ್‌ನಲ್ಲಿ ಈ ಮುತ್ತನ್ನು ಒಳ್ಳೆಯ ಬೆಲೆಗೆ ಮಾರಿ, ನಮ್ಮ ಮುಂದಿನ ಬದುಕನ್ನು

**✍ ವನಜ ರಾಜನ್**

ಕಟ್ಟಿಕೊಳ್ಳೋಣ" ಎಂದು ಹೇಳಿ ಚರ್ಚೆಯನ್ನು ಮುಗಿಸಿದನು. ಮುಂದೆಂದೂ ಜುಆನ ಅವನ ಮಾತಿಗೆ ಎದಿರಾಡಲಿಲ್ಲ!.

ಕತ್ತಲೆಯ ರಾತ್ರಿ! ಪಕ್ಕದಲ್ಲಿಯೇ ಮಲಗಿದ್ದ ಜುಆನ ಸದ್ದಿಲ್ಲದೆ ಎದ್ದು ಓಲೆಯಪಕ್ಕದಲ್ಲಿ ಹಳ್ಳದಲ್ಲಿ ಬಿಚ್ಚಿಟ್ಟಿದ್ದ 'ಮುತ್ತ'ನ್ನು ತೆಗೆದುಕೊಂಡು ಹೋಗಿ ಬಿಸಾಡಿ ಬಿಡುವ ಉದ್ದೇಶದಿಂದ ಹಳ್ಳವನ್ನು ಮುಚ್ಚಿದ ಕಲ್ಲನ್ನು ಸರಿಸಿದ ಶಬ್ದ ಕಿನೊವಿನ ಕಿವಿಗೆ ಮುಟ್ಟಿತು. ಗುಡಿಸಲಿನ ಸಂದಿ-ಗೊಂದಿಯಿಂದ ತೂರಿಬಂದ ಅಲ್ಪ-ಸ್ವಲ್ಪ ಚಂದ್ರನ ಬೆಳಕಿನಲ್ಲಿ ಕಡಲಿನ ಕಡೆ ನಡೆದು ಹೋಗುತ್ತಿರುವ ಜುಆನಳನ್ನು ಕಂಡು ಕಿನೊ ಬೆಂಕಿಯಂತೆ ರೋಷದಿಂದ ಅವಳ ಬೆನ್ನು ಹತ್ತಿದನು. ಅವನನ್ನು ಕಂಡು ಓಡಲು ತೊಡಗಿದ ಜುಆನ ಕತ್ತಲಲ್ಲಿ ಒಂದು ದೊಡ್ಡ ಕಲ್ಲನ್ನು ಎಡವಿ ಬಿದ್ದಳು. ಕಿನೊ ಅವಳ ಕೈನಲ್ಲಿದ್ದ 'ಮುತ್ತ'ನ್ನು ಕಂಡನು. ಅವಳಿಗೆ ಜೋರಾಗಿ ಕಪಾಳಕ್ಕೆ ಬಾರಿಸಿದನು. ಕೆಳಗೆ ಬಿತ್ತು 'ಮುತ್ತು'. ನೋವು ಅವಳನ್ನು ಆವರಿಸಿದ್ದರೂ ಅವಳಿಗೆ ಅವನ ಮೇಲೆ ಕೋಪವಿರಲಿಲ್ಲ. ಯಾಕೆಂದರೆ 'ತಾನು ಓರ್ವ ಧೈರ್ಯಶಾಲಿ ಗಂಡಸು' ಎಂದು ಎದತಟ್ಟಿ ಘೋಷಿಸಿದ್ದನು (I AM A MAN) ಅರ್ಧ ದೇವರು, ಅರ್ಧ ಹುಚ್ಚುತನ' ಇರಲೇಬೇಕು ಗಂಡನಲ್ಲಿ ಎಂದು ಅವಳ ಭಾವನೆ! ಪರ್ವತಗಳನ್ನು ತನ್ನ ಬಾಹುಬಲದಿಂದ ಗುದ್ದಿ, ಮೆಟ್ಟಿ ನಿಲ್ಲಬಲ್ಲನು, ಕಡಲ ಅಲೆಗಳನ್ನು ಸುಲಭವಾಗಿ ಧಾಟಿ ದಡ ಸೇರಬಲ್ಲನು ಎಂಬ ಭರವಸೆ ಅವಳಲ್ಲಿ ತುಂಬಿತ್ತು. ಅವಳಿಗೆ ಇಂತಹ ಗಂಡನ ರಕ್ಷಣೆ ಅತ್ಯವಶ್ಯಕವಾಗಿತ್ತು. ತನ್ನ ಗಾಯವನ್ನು ಕಡಲ ಉಪ್ಪು ನೀರಿನಲ್ಲಿಯೇ ತೊಳೆದುಕೊಂಡಳು. ಕೆಳಗೆ ಬಂಡೆಯ ಹಿಂಭಾಗದಲ್ಲಿ ಹೊಳೆಯುತ್ತಿದ್ದ ಮುತ್ತನ್ನು ಮತ್ತೆ ಕೈಗೆತ್ತಿಕೊಂಡಳು. ಇದನ್ನು ಬಿಸಾಡಿಬಿಡಲೋ ಬೇಡವೋ ಎಂಬ ಗೊಂದಲದಲ್ಲಿದ್ದ ಜುಆನಗೆ ತನ್ನ ಮುಂದೆ ಕೆಳಗೆ ಬಿದ್ದಿರುವ ಎರಡು ವ್ಯಕ್ತಿಗಳನ್ನು ನೋಡಿ ದಿಕ್ಕೆಟ್ಟಳು. ಓರ್ವ ವ್ಯಕ್ತಿ ಕಿನೊ. ಮತ್ತೊಬ್ಬ ಅಪರಿಚಿತ ಹಾಗೂ ಅವನ ಕತ್ತಿನಿಂದ ಹೊಳೆಯುವ ದ್ರವ ಒಸರುತ್ತಿರುವುದುನ್ನು ಕಂಡಳು.

ಒಂದೇ ಒಂದು ಕ್ಷಣ! ನೆನಪಿಸಿಕೊಂಡಳು 'ಮುತ್ತು' ಮನೆ ಒಳಗೆ ಬರುವ

ಮೊದಲಿನ, ಹಿಂದಿನ ಬದುಕನ್ನು! ಬಡತನ, ಉಳ್ಳವರ ಶೋಷಣೆ, ಅಸಡ್ಡೆ, ಅಧಿಕಾರಕ್ಕೆ ಒಳಗಾಗಿದ್ದರೂ ಅವರು ಶಾಂತಿ ಸಮಾಧಾನ, ತೃಪ್ತಿಯ ಜೀವನ ನಡೆಸುತ್ತಿದ್ದರು. ಮುಂದೆ ಓರ್ವ ವ್ಯಕ್ತಿ ಸತ್ತುಬಿದ್ದಿದ್ದಾನೆ. ಪಕ್ಕದಲ್ಲಿ ಕಿನೊವಿನ ರಕ್ತಸಿಕ್ತವಾದ ಕತ್ತಿಯ ಅಲಗು ಕಂಡಳು. ಮರಳಿ ಗಳಿಸಲು ಸಾಧ್ಯವಾಗದಷ್ಟು ದೂರ-ಬಹುದೂರ ಸರಿದು ಹೋಗಿದೆ ಆ ಬದುಕು!. ಜುಆನ ಮರೆತಳು ಎಲ್ಲವನ್ನೂ! ಈಗ ಅವರಿಗೆ ಉಳಿದಿರುವ ದಾರಿ ಒಂದೇ ಒಂದು ತಮ್ಮನ್ನು ತಾವು ಕಾಪಾಡಿಕೊಳ್ಳುವುದು. ಹೇಗೆ?.

ಆ ಕೂಡಲೇ ಕಾರ್ಯಪ್ರವೃತ್ತರಾದರು ಇಬ್ಬರೂ. ವ್ಯಕ್ತಿಯ ಶವವನ್ನು ಗುಡಿಸಲಿನ ಮರೆಯಲ್ಲಿ ಎಳೆದು ಹಾಕಿದರು. ಬೆಳಕು ಮೂಡುವ ಮೊದಲೇ ಈ ಸ್ಥಳವನ್ನು ಬಿಡಬೇಕು. 'ಹೋಗಿ ಮಗುವನ್ನು ಎತ್ತಿಕೊಂಡು, ಮೂಟೆಯಲ್ಲಿರುವ ಜೋಳವನ್ನು ತೆಗೆದುಕೊಂಡು ಬಾ. ಅಷ್ಟರಲ್ಲಿ ತೋಡು ದೋಣಿ ತರುತ್ತೇನೆ' ಎಂದು ಹೇಳಿದ ಕಿನೊ. ಹೋಗಿ ನೋಡುತ್ತಾನೆ, ತನ್ನ ದೋಣಿಯಲ್ಲಿ ದೊಡ್ಡ ತೂತೊಂದಾಗಿದೆ. ಕೋಪದಿಂದ ಕೆಂಪಾದನು. ತನ್ನ ತಾತನಿಂದ ಬಂದ ಬಳುವಳಿ, ತಮ್ಮ ಬದುಕಿಗೇ ಜೋಡಣೆಯಾದ ಈ ತೋಡು ದೋಣಿಯಲ್ಲಿ ತೂತಾಗಿದೆ. ವ್ಯಕ್ತಿಯನ್ನು ಕೊಲೆ ಮಾಡಿದುದಕ್ಕಿಂತ ಈ ದೋಣಿಯಲ್ಲಾಗಿರುವ ತೂತನ್ನು ಕಂಡು ಅವನ ಮನಸ್ಸಿಗಾದ ದುಃಖ ಅಷ್ಟಿಷ್ಟಲ್ಲ!. ಅವನಲ್ಲಿ ಅಡಗಿದ್ದ ಮೃಗತ್ವ ತಲೆಯೆತ್ತಿತು. ದುಃಖವನ್ನು ಬದಿಗಿರಿಸಿ ತಲೆ ಮರೆಸಿಕೊಂಡು ಹೋಗುವುದು ಆಕ್ರಮಣ ಮಾಡುವುದು, ತನ್ನ ಕುಟುಂಬವನ್ನು ಹೇಗಾದರೂ ಕಾಪಾಡಿಕೊಳ್ಳಬೇಕು ಎನ್ನುವುದು ಒಂದೇ ಅವನ ಮುಂದಿನ ಗುರಿಯಾಯಿತು. ಮುಂದೆ ಅವರ ಬಾಳಿನ ಕಥೆ ಕತ್ತಲೆಯ ಹಾದಿಯಲ್ಲಿ ಸಾಗುತ್ತಾ ಹೋಗುವುದನ್ನು ಕಾಣುತ್ತಾನೆ ಓದುಗ...

ಮುಂದೆ.... ತನ್ನ ಗುಡಿಸಿಲಿನಲ್ಲಿ ಒಂದು ಸಣ್ಣ ಉರಿ. ನಿಮಿಷದಲ್ಲಿ ಹತ್ತಿ ಉರಿಯುತ್ತಿರುವ ಬೆಂಕಿಯನ್ನು ಕಿನೊ ಕಂಡುದುದೇ ತಡ. ಓಡಲಾರಂಭಿಸಿದನು. ಅಷ್ಟರಲ್ಲಿ ಮಗುವನ್ನು ಒಂದು ಕೈಯಲ್ಲಿ, ಕಿನೊ ತನ್ನ ಭುಜದ ಮೇಲೆ ಹಾಕಿಕೊಳ್ಳುವ ಶಾಲುವನ್ನು ಇನ್ನೊಂದು ಕೈಯಲ್ಲಿ ಹಿಡಿದು ಇವನ ಬಳಿ ಓಡಿ ಬರುತ್ತಿರುವುದನ್ನು ನೋಡಿ ಅಲ್ಲಿಯೇ ಗಾಬರಿಯಾಗಿ ಸ್ತಂಬೀಭೂತನಾಗಿ ಕಿನೊ ನಿಂತನು. ಅಕ್ಕಪಕ್ಕದವರು ಆಚೆ ಬಂದು ಉರಿದು ಬೂದಿಯಾದ ಕಿನೊವಿನ ಮನೆ ನೋಡುತ್ತಿದ್ದರು. ಬೆಂಕಿಯ ಬೆಳಕು ಅವನ ಹೃದಯದಲ್ಲಿ ಭೀತಿ ಉಂಟುಮಾಡಿತು. ಮರೆಯಲ್ಲಿಯೇ ಮುಂದೆ ಹೋಗಿ ಅಣ್ಣ ಟೊಮಾಸ್ ಮನೆ ಒಳಗೆ ಬಂದು ಅಡಗಿಕೊಂಡರು. ಉಳಿದವರು ಕಿನೊ ಸಂಸಾರ ಆ ಬೆಂಕಿಯಲ್ಲಿ ಬೆಂದುಹೋದರೆಂದು ಭಾವಿಸಿದರು. ಅಣ್ಣ ಈ ಘಟನೆಗಳನ್ನು ನೋಡಿ, ಇವೆಲ್ಲಾ ಆ ದಲ್ಲಾಳಿಗಳ ಕೆಲಸವೆಂದೇ ನಿರ್ಣಯಿಸಿ, ತಮ್ಮನಿಗೆ, ನೀನು ಅವರುಗಳ ದ್ವೇಷ ಕಟ್ಟಿಕೊಳ್ಳಬಾರದಿತ್ತು. ಇದೆಲ್ಲಾ ಆ 'ಮುತ್ತು', ಅದೊಂದು ಭೂತ ಅದರಿಂದಲೇ ನಿನಗೆ ಈ ಕಷ್ಟ ಪರಂಪರೆ ಕಾಡಿಸುತ್ತಿವೆ ಎಂದು ಹೇಳಿದನು. ಕಿನೊ ಈ ಮಾತುಗಳನ್ನು ಕೇಳಿಸಿಕೊಳ್ಳಲು ಸಿದ್ಧನಿರಲಿಲ್ಲ. ಅದೇ ಛಲ!, ತನಗೆ ಅವಮಾನ ಉಂಟಾಯಿತು, ತನ್ನ ದೋಣಿಯನ್ನು ಒಡೆದು ಗುಡಿಸಿಲನ್ನು ಸುಟ್ಟು ಹಾಕಿದ್ದಾರೆ, ಒಂದು ಹಗಲು ಕಳೆದು, ಮತ್ತೊಂದು ಕತ್ತಲೆಯ ರಾತ್ರಿಯ ವರೆಗೆ ನಾವಿಲ್ಲಿದ್ದು ಹೊರಟು ಹೋಗುತ್ತೇವೆಂದು ಅಣ್ಣನ ಬಳಿ ಅಂಗಲಾಚಿ ಬೇಡಿದರು. ಸರಿ ಎಂದರು ಅವರು.

ಉತ್ತರ ಭಾಗದಲ್ಲಿ ದೊಡ್ಡ-ದೊಡ್ಡ ಪಟ್ಟಣಗಳಿದೆಯಾದ್ದರಿಂದ ತಮ್ಮ ಮುಂದಿನ ಬದುಕು ಅಲ್ಲಿ ಕಟ್ಟಿಕೊಳ್ಳಬಹುದೆಂಬ ಕನಸು ಹೊತ್ತು ಕಾಲ್ನಡಿಗೆಯಲ್ಲಿ ಹೊರಟು ನಿಂತರು ಕಿನೊ ಜುಆನ, ಮಗು!. ಕೊಲ್ಲಿಯ ಮೇಲೆ ಬೀಸುತ್ತಿದ್ದ ಬಿರುಗಾಳಿಯಲ್ಲಿ ಅಪಸ್ವರ ಕೇಳಿಸುತ್ತಿತ್ತು. 'ಮ್ಯಾಂಗ್ರೋವ್'ಗಳು ಗಾಳಿಗೆ ನೆಲದಿಂದ ಮೇಲೆದ್ದ ಮರಳು, ಕಡಲಮೇಲೆ ಮೋಡದ ಪರದೆ ಇಳಿಬಿಟ್ಟಂತಿತ್ತು. ದೇವರು ದಾರಿ ತೋರಿಸಿದಂತೆ ನಡೆವನು. ಈ ಮುತ್ತು ನನ್ನ ಆತ್ಮ (Soul) ಎಂದು ಹೇಳಿ ಹೊರಟನು. ರಾತ್ರಿಯೆಲ್ಲ ನಡೆದರು. ಎಷ್ಟು ದೂರ ಕ್ರಮಿಸಿದರೋ ಅವರಿಗೆ ತಿಳಿಯದು. ಗೊತ್ತು-ಗುರಿಯಿಲ್ಲ. ಒಣಗಿದ ಮುಳ್ಳಿನ ಗಿಡಗಳ ಮರೆಯಲ್ಲಿ, ಕೆಲಕಾಲ ವಿಶ್ರಮಿಸಿದರು. ಹೆಜ್ಜೆ ಗುರುತುಗಳು ಕಾಣಬಾರದೆಂದು, ತಮ್ಮನ್ನು ಹುಡುಕಿಕೊಂಡು ಖಂಡಿತವಾಗಿ ದಲ್ಲಾಳಿಗಳು ಬಂದೇ ಬರುತ್ತಾರೆ ಎಂದು ನಿರ್ಧರಿಸಿ ರಸ್ತೆಯ ಬದಿಯಲ್ಲಿ ನಡೆಯುತ್ತಿದ್ದರು. ಸೂರ್ಯ ನೆತ್ತಿಗೇರಿದ್ದನು. ಜುಆನ ಮಗುವಿಗೆ ಹಾಲು ಕುಡಿಸಿ ರಮಿಸಿ, ಮಲಗಿಸಿದಳು. ಇವರುಗಳು ತಾವು ತಂದಿದ್ದ ನೀರನ್ನು ಕುಡಿದರು. ಬಿಸಿಲಿನ ತಾಪ, ಎದೆಯಲ್ಲಿ ಉರಿಯುತ್ತಿದ್ದ ಕೋಪದ ತಾಪವನ್ನು ತಗ್ಗಿಸಲು ಅದು ಸಾಕಾಗಲಿಲ್ಲ. ಮತ್ತೆ ಮತ್ತೆ ಕಿನೊ ಮುತ್ತನ್ನು ತೆಗೆದು. ಅದರ ಹೊಳಪಿನಲ್ಲಿ ತನ್ನ ಕನಸುಗಳು ನನಸಾಗುವುದನ್ನು ನೋಡಿ ನಲಿದನು. ಬಂದುಬಿಟ್ಟರು!. ಇವರನ್ನು ಹುಡುಕಿ ಪ್ರಾಣಿಗಳಂತೆ ಭೇಟೆಯಾಡಲು ಇಬ್ಬರು ಹಾಗೂ ಕುದುರೆ ಸವಾರನೊಬ್ಬ. ಅವರುಗಳಿಂದ ತಪ್ಪಿಸಿಕೊಳ್ಳಲು ಮರೆಯಲ್ಲಿ ಅಡಗಿದ್ದು ಮತ್ತೆ ಪಶ್ಚಿಮ ದಿಕ್ಕಿನಲ್ಲಿ ಪರ್ವತಗಳ ಶ್ರೇಣಿಯ ಕಡೆಗೆ ನಡೆಯಲುಪಕ್ರಮಿಸಿದರು. ಕಲ್ಲು ಬಂಡೆಗಳನ್ನು ಹತ್ತಿ ಹೋಗುವುದು ಸುಲಭದ ವಿಷಯವೇ. ಮಗು ಸಣ್ಣ ಧ್ವನಿಯಲ್ಲಿ ಅಳುತ್ತಿತ್ತು.

ತೀವ್ರವಾದ ಭಯ. ಬಾಯಿ ಒಣಗಿ ಹೋಗಿದೆ. ಎಷ್ಟು ಬೇಡವೆಂದರೂ ಕಿನೊವಿನ ಹಿಂದೆಯೆ ಮಗುವನ್ನು ಎತ್ತಿಕೊಂಡು ಏದುಸಿರು ಬಿಡುತ್ತಾ ಜಾರುತ್ತಿರುವ ಬಂಡೆಕಲ್ಲುಗಳ ಮೇಲೆ ಅಡಿ ಇರಿಸುತ್ತಾ ಹತ್ತುತ್ತಿದ್ದಳು ಜುಆನ. ಹಸಿರು ಎಲ್ಲೂ ಕಾಣಲಿಲ್ಲ. ನೀರಿನ ಬಾಟಲಿನಲ್ಲಿ ಒಂದು ತೊಟ್ಟೂ ನೀರಿರಲಿಲ್ಲ. ನಾಲಿಗೆಯ ದ್ರವ ಇಂಗಿ ಹೋಗಿತ್ತು. ಬಹಳ ದೂರದಲ್ಲಿ ಕಂದು ಬಣ್ಣದ ಕಲ್ಲಿನ ಶಿಖರದ ಕೆಳಗೆ ಒಂದು ದೊಡ್ಡ ಬಂಡೆಕಲ್ಲಿನ ಒಡೆದ ಭಾಗದಿಂದ ಹೊರಟಿದ್ದ ತೆಳುವಾದ ಚಿಲುಮೆಯನ್ನು ಕಂಡು ಅವರಿಬ್ಬರಿಗೆ ಹೋದ ಜೀವ ಬಂದಂತಾಯಿತು. ಬೇಗ-ಬೇಗ ಅಲ್ಲಿಗೆ ಹೋಗಿ ಬಾಟಲಿನಲ್ಲಿ ನೀರನ್ನು ತುಂಬಿಸಿಕೊಂಡರು. ಹನಿ-ಹನಿಯಾಗಿ ಕೆಳಗಿಳಿದು ಅಲ್ಲಲ್ಲಿ ಸಣ್ಣ-ಸಣ್ಣ ಕೊಳಗಳಾಗುತ್ತಿತ್ತು. ಆದರೆ, ಪರ್ವತ ಶಿಖರದಿಂದ ಕೆಳಗಿಳಿದು ಬಂದ ಈ ಧಾರೆ, ಭೂ ಸ್ಪರ್ಶವಾಗುತ್ತಲೇ (ಮರುಭೂಮಿ) ಆವಿಯಾಗಿ ಮಾಯವಾಗುತ್ತಿತ್ತು. ಸುತ್ತ-ಮುತ್ತಲ ಪ್ರದೇಶದಿಂದ ದೂರ, ದೂರದಿಂದ ಕಾಡು ಮೇಕೆಗಳು, ಜಿಂಕೆಗಳು, ರಕೂನ್‌ಗಳು ....... ಮುಂತಾದ ಪ್ರಾಣಿಗಳು, ಪಕ್ಷಿಗಳು ಕೊಳದ ನೀರನ್ನು ಕುಡಿಯಲು ಬರುತ್ತಿದ್ದವು. ಈ ಚಿಕ್ಕ-ಚಿಕ್ಕ ಕೊಳಗಳು ಪಶುಪಕ್ಷಿಗಳಿಗೆ ಜೀವನಾಧಾರವಾಗಿತ್ತು ನಿಜ. ಆದರೆ, ಅವೇ ಬೇಟೆಗಾರರಿಗೆ ಅವುಗಳನ್ನು ಬೇಟೆಯಾಡಿ ಕೊಲ್ಲಲು ಸಹ ಈ ಸ್ಥಳ ಪ್ರಶಸ್ತವಾಗಿತ್ತು (The little pools were places of life because of the Water and places of Killing ...... of the Water too)

ಸೂರ್ಯ ಕಲ್ಲಿನ ಕಾದ ಪರ್ವತಗಳ ಹಿಂದೆ ಮರೆಯಾಗಿ ಹೊರಟು ಹೋಗಿದ್ದನು. ಕತ್ತಲೆ ಮೆಲ್ಲನೆ ನುಸುಳಿಕೊಂಡು ಕಳ್ಳ ಹೆಜ್ಜೆ ಹಾಕುತ್ತಾ ಹತ್ತಿರ ಬಂದಿತ್ತು. ಪ್ರಕೃತಿಯ ಬದಲಾವಣೆಗೆ ಸರಿಹೊಂದುವಂತೆ ಕಿನೊ-ಜುಆನ ಬಾಳಿಗೂ ಬೆಂಕಿಹಚ್ಚಲು ಕುದುರೆ ಸವಾರ ಗನ್‌ಧಾರಿ ಅವನ ಸಂಗಡಿಗ ಅಲ್ಲಿ ಬಂದು ಸೇರಿ ದೂರದಲ್ಲಿ ಕಾದು ಕುಳಿತಿದ್ದರು. ಕಿನೊ ದಂಪತಿಗಳು ಓಡಿ ಬಂದು ಸಣ್ಣ ಗುಹೆಯೊಂದರಲ್ಲಿ ಮರೆಯಲ್ಲಿ ಕುಳಿತು. ಅವರುಗಳ ಚಲನವಲನವನ್ನು ಗಮನಿಸುತ್ತಿದ್ದರು. ಚಂದ್ರೋದಯ ಆಗುವುದರಲ್ಲಿತ್ತು. ಕೆಲವೇ ಕ್ಷಣಗಳಲ್ಲಿ! ತಮ್ಮನ್ನು ತಾವೇ ಕಾಪಾಡಿಕೊಳ್ಳಲು ಕಿನೊ ಒಂದು ತೀರ್ಮಾನಕ್ಕೆ ಬಂದಿದ್ದನು. ತಮಗೆ ಬೇರೆ ದಾರಿಯೇ ಇಲ್ಲವೆಂದು ಅವನಿಗೆ ಅನ್ನಿಸಿತ್ತು. ಗನ್‌ಧಾರಿ ಕಾವಲು ಕಾಯುತ್ತಾ ಎಚ್ಚರವಾಗಿ ಕುಳಿತಿದ್ದನು. ಅವನ ಸಂಗಡಿಗರಿಬ್ಬರೂ ನಿದ್ರೆಗೆ ಜಾರಿದ್ದರು. ಜುಆನ ಸ್ತನ್ಯಪಾನ ಮಾಡಿಸಿ, ರಮಿಸಿ ಮಲಗಿಸಿದ್ದ ಮಗು ಎಚ್ಚರಗೊಂಡು ಸಣ್ಣನೆಯ ಧ್ವನಿಯಲ್ಲಿ ಅಳಲಾರಂಭಿಸಿತು. ಜುಆನ ಅದರ ಬಾಯನ್ನು ಮುಚ್ಚಿ ಉಸಿರು ಬಿಗಿ ಹಿಡಿದು ಕುಳಿತಿದ್ದಳು. ಕಿನೊ ಸದ್ದಿಲ್ಲದೆ ಮೆತ್ತಗೆ ಗನ್‌ಧಾರಿ ಬಳಿ ಸರಿದು ಅದನ್ನು ಕಿತ್ತುಕೊಂಡು ಮೂವರನ್ನೂ ಮುಗಿಸಿಬಿಡಬೇಕೆಂದುಕೊಂಡಿದ್ದನು. ಆದರೆ, ಆದದ್ದೇ ಬೇರೆ. ಎಡವಟ್ಟಾಯಿತು!. ಕತ್ತಲೆಯಲ್ಲಿ ಬಿಳಿ ಬಣ್ಣದ ಅಂಗಿ ತೊಟ್ಟು ಹೋದರೆ ಸರಿಯಲ್ಲವೆಂದು ಯೋಚಿಸಿ ಅಂಗಿ ಕಳಚಿಟ್ಟು ನಿಧಾನವಾಗಿ ಅವರಬಳಿ ಸರಿದನು. ಮಗು ಎತ್ತಿಕೊಂಡು ಕುಳಿತಿದ್ದ ಜುಆನ ದೇವರಲ್ಲಿ ಭಕ್ತಿಯಿಂದ ಪ್ರಾರ್ಥನೆ ಸಲ್ಲಿಸಿದಳು (HAIL MARY). ನಿಶ್ಶಬ್ಧ ರಾತ್ರಿ. ಸೂಜಿ ಬಿದ್ದರೂ ಶಬ್ದ ಕೇಳುವಂತಹ ಸದ್ದೇ ಇಲ್ಲದ ಸಾವಿನಂತಹ ರಾತ್ರಿ. ಇದ್ದಕ್ಕಿದ್ದಂತೆ ಮಗುವಿನ 'ಅಳು'ವಿನ ಶಬ್ದ 'ಗನ್'ಧಾರಿಯ (ಬಾಯಿ ಮುಚ್ಚಿ ಹಿಡಿದಿದ್ದರೂ) ಕಿವಿ ಮುಟ್ಟಿತು. ಕೂಡಲೇ ಅಳು ಕೇಳಿದ ದಿಕ್ಕಿಗೆ ಗುಂಡು ಹಾರಿಸಿದನು. ಕಿನೊ ಅವನ ಮೇಲೆ ಎಗರಿ ಬಿದ್ದು 'ಗನ್' ಕಿತ್ತುಕೊಂಡು ಮೂವರನ್ನೂ ಮುಗಿಸಿದನು. ಆದರೆ, ಇತ್ತ ಕಡೆ ಜುಆನ ಕುಳಿತಿದ್ದ ಗುಹೆಯಿಂದ ಚೀತ್ಕಾರ, ಗೋಳಾಟದ ಧ್ವನಿ ಕೇಳಿ ಕಿನೊಗೆ ಆದ ಅನಾಹುತದ ತೀಕ್ಷ್ಣತೆಯ ಅರಿವಾಯ್ತು!. ಎಲ್ಲಾ ಮುಗಿದು ಹೋಗಿತ್ತು.

■

(ಕಳೆದ ಸಂಚಿಕೆಯಿಂದ)

# ಶ್ರೀ ಅಷ್ಟವಿನಾಯಕ ದರ್ಶನ

**ಗಣಪತಿಗೆ ದುರ್ವ ಎಂದರೆ ರಿಕೆ ಸಮರ್ಪಣೆ ಮಾಡುವಾಗ ಜಪಿಸುವ ಮಂತ್ರಗಳು**

| | |
|---|---|
| ೧. ಶ್ರೀ ಗಣಾಧಿಪತಯೇ ನಮಃ | ೨. ಶ್ರೀ ಉಮಾ ಪುತ್ರಾಯ ನಮಃ |
| ೩. ಅಭಯ ಪ್ರದಾಯ ನಮಃ | ೪. ಏಕದಂತಾಯ ನಮಃ |
| ೫. ಇಭ ವಕ್ರಾಯ ನಮಃ | ೬. ಮೂಷಕವಾಹನಾಯ ನಮಃ |
| ೭. ವಿನಾಯಕಾಯ ನಮಃ | ೮. ಈಶ ಪುತ್ರಾಯ ನಮಃ |
| ೯. ಸರ್ವ ಸಿದ್ಧಿ ಪ್ರದಾಯ ನಮಃ | ೧೦. ಲಂಬೋದರಾಯ ನಮಃ |
| ೧೧. ವಕ್ರ ತುಂಡಾಯ ನಮಃ | ೧೨. ಅಧಸಾಯಕಾಯ ನಮಃ |
| ೧೩. ವಿಘ್ನ ವಿದ್ವಂಸಕರ್ಮೇ ನಮಃ | ೧೪. ವಿಶ್ವವಂದಾಯ ನಮಃ |
| ೧೫. ಅಮರೇಶ್ವರಾಯ ನಮಃ | ೧೬. ಗಜವಕ್ರಾಯ ನಮಃ |
| ೧೭. ಭಾಲಚಂದ್ರಾಯ ನಮಃ | ೧೮. ಪರಶು ಧಾರಣೇ ನಮಃ |
| ೧೯. ವಿಘವಿಘ್ನಧಿಪಾಯ ನಮಃ | ೨೦. ನಾಗಯಗಜ್ಞಾತ ವೀತಿನೋನಮಃ |
| ೨೧. ಸರ್ವ ವಿದ್ಯಾಪ್ರದಾಯಕಾಯ ನಮಃ | |

## ಗಣಪತಿ ಅಥರ್ವ ಶೀರ್ಷ ಮತ್ತು ಅದರ ಅರ್ಥ

ಅಗಪತಿ ಅಥರ್ವ ಶಿರ್ಷದ ಅರ್ಥ ಹೀಗಿದೆ.. ಶ್ರೀ ಗಣೇಶನು ಜ್ಞಾನ ಮತ್ತು ವಿದ್ಯೆಯ ದೇವತೆಯಾಗಿದ್ದಾನೆ. ವಿಘ್ನವನ್ನು ದೂರಮಾಡುವ ವಿಘ್ನವಿನಾಶಕನಾದ ಕಾರಣ ಇವನ ಪೂಜೆ ಮತ್ತು ಪ್ರಾರ್ಥನೆಯು ಹಿಂದಿನ ಯುಗಯುಗಾಂತರಗಳಿಂದಲೂ ನಡೆದುಬಂದಿದೆ. ಕಲಿಯುಗದಲ್ಲಿ ಶ್ರೀಗಣೇಶನು ಬೇಡಿದ ಹರಕೆಯನ್ನು ಪೂರೈಸುವ ದೇವತೆಯಾಗಿದ್ದಾನೆ. ಆದರೆ, ಅವರ ಉಚಿತ ಸೇವೆ ಮತ್ತು ಉಪಾಸನೆಯ ಸಾಧನೆ ಮಾಡಿದರೆ ಫಲ ಬೇಗ ಲಭಿಸುತ್ತದೆ. ಗಣಪತಿಯ ಪೂಜೆ ಮಾಡುವ ಸಮಯದಲ್ಲಿ 'ಗಣೇಶ ಅಥರ್ವ ಶೀರ್ಷ' ಹೇಳಲ್ಪಡುತ್ತದೆ. ಅಥರ್ವ ಶೀರ್ಷ ಎಂದರೆ ಓಂ ನಮಸ್ತೇ ಗಣಪತಯೇ ಎಂದು ಪ್ರಾರಂಭವಾಗಿ ಮರದ ಮೂರ್ತಯೇ ನಮಃ ಇಲ್ಲಿಯವರೆಗಿನ ಶ್ಲೋಕ. ಈ ಶ್ಲೋಕವನ್ನು ಒಂದು ಬಾರಿ ಜಪ ಮಾಡಿದರೆ ಒಂದು ಆವರ್ತನೆ ಪೂರ್ಣಗೊಳ್ಳುತ್ತದೆ. ಹೀಗೆ ೨೧ ಸಲ ಆವರ್ತನೆ ಮಾಡಿದರೆ ಏಕಾದರ್ಶಿನಿ ಎಂದು ಹೇಳುತ್ತಾರೆ. ೧೦೮ ಅಥವಾ ೧೦೦೦ ಆವರ್ತನದ ಅಭಿಷೇಕ ಮಾಡುತ್ತಾರೆ. ಆಮರ್ತನ ಸಮಯದಲ್ಲಿ ಏತದುರ್ಥರ್ವಶಿರ್ಷಯೇ ಫಿತೇಸ್ ಇಲ್ಲಿ ಮುಂದಿನ ಫಲಶ್ರುತಿ ಎಂದು ಅಥರ್ವ ಶಿರ್ಷದ ಫಲ ಪ್ರಾಪ್ತಿಯನ್ನು ಓದಲಾಗುತತದೆ. ಅಥರ್ವ ಶೀರ್ಷದ ಆವರ್ತನೆಯಲ್ಲಿ ಸ್ವತಃ ಮಾಡೆದರೆ ಬಹಳ ಒಳ್ಳೆಯದು. ಒಂದು ವೇಳೆ ಸಂಸ್ಕೃತ ಓದಲು ಬಾರದಿದ್ದನ್ನು ತಮ್ಮದೇ ಭಾಷೆಗೆ ಅನುವಾದ ಮಾಡಿ ಓದಬಹುದು. ಭಕ್ತಿ ಭಾವದಿಂದ ಮಾಡಿದ ಉಪಾಸನೆಯು ಭಗವಂತನವರೆಗೆ ಖಂಡಿತಾ ತಲುಪುತ್ತದೆ.

ಅಥ ಶ್ರೀ ಗಣಪತ್ಯಥರ್ವಶಿರ್ಷ ಪ್ರಾರಂಭಃ
ಶ್ರೀ ಗಣೇಶಾಯ ನಮಃ (ಶಾಂತಿ ಮಂತ್ರ)
ಓಂ ಭದ್ರಂ ಕರ್ಣೇಭಿ ಶೃಶುಯಾಂ ದೇವಾಃ | ಭದ್ರಪಶ್ಯೆಮಾಂಕ್ಷಭಿರ್ದ ಜತ್ರಃ||
ಸ್ಥಿರೈ ರಂಗೈ ಸ್ತಷ್ಟು ವಾಸಸ್ತನೂಭಿ| ವ್ಯಶೇಮ ದೇವ ಹಿತಂ ಯೇದಾಯು || ೧ ||
ಓಂ ಸ್ವಸ್ತಿನ ಇಂದ್ರೋ ವೃದ್ಧಶ್ರವಾ| ಸ್ವಸ್ತಿನ ಪೂಷಾ ವಿಶ್ವವೇದಾಃ ||
ಸ್ವಸ್ತಿ ನಸ್ತಾರ್ಕ್ಷ್ಯೋ ಅರಿಷ್ಟ ನೇಮಿಃ| ಸ್ವಸ್ತಿಮೋ ಬೃಹಸ್ಪತಿರ್ದ ದಾತೂ || ೨ ||
ಓಂಶಾಂತಿ ಓಂಶಾಂತಿ ಓಂಶಾಂತಿ.

**ಅರ್ಥ** - ಹೇ ಭಗವಂತನೇ ನಾವು ಕಿವಿಯಿಂದ ಶುಭವನ್ನೇ ಕೇಳೋಣ. ಕಣ್ಣಿಂದ ಒಳ್ಳೆಯದನ್ನೇ ನೋಡೋಣ. ಸುಂದರ ಮತ್ತು ಸ್ವಸ್ಥ ಶರೀರದಿಂದ ನಿಮ್ಮ ಸ್ತುತಿ, ಪೂಜೆ ಮಾಡುತ್ತಾ ನಿಮ್ಮಿಂದ ಕೂಡಮಟ್ಟ ಈ ಜೀವವು ಕಳೆಯಲಿ || ೧ ||

ಮಹಾ ಕೀರ್ತಿಮಾನ್ ಇಂದ್ರನು ನಮ್ಮ ಕಲ್ಯಾಣ ಮಾಡಲಿ, ಜ್ಞಾನ ಸಂಪನ್ನನೂ ಮತ್ತು ವೈಭವ ಸಂಪನ್ನನೂ ಆದ ಪೂಷಾ ದೇವನು ನಮ್ಮ ಕಲ್ಯಾಣ ಮಾಡಲಿ. ಆಕಾಶದಲ್ಲಿರುವ ದೇವಗಣವು ಯಾರ ಚಲನೆಗೆ ಯಾವ ಭಾದಕವೂ ಇಲ್ಲವೋ ಅವರು ನಮ್ಮನ್ನು ರಕ್ಷಿಸಲಿ. ಪಾಣಿಯ ಅಧಿಪತಿ ದೇವಗುರು ನಮಗೆ ಶ್ರೇಯಸ್ಸು ಕೊಡಲಿ. ಎಲ್ಲಾ ಜಗತ್ತಿನಲ್ಲಿಯೂ ಸಮಾಜದಲ್ಲಿಯೂ ಮತ್ತು ಎಲ್ಲಾ ಜನಗಳಲ್ಲೂ ಶಾಂತಿ ತುಂಬಿರಲಿ.

ಅಧ ಗಣೇಶದೀರ್ವಶೀಷ ವ್ಯಾಖ್ಯಸಮ| ಓಂ ನಮಸ್ತೆ ಗಣಪತಯೇ||
ತ್ವಮೇವ ಪ್ರತ್ಯಕ್ಷಂ ತತ್ವಮಸಿ| ತ್ವಮೇವ ಕೇವಲ ಕರ್ತಾಸಿ||
ತ್ವಮೇವ ಕೇವಲ ಧರ್ತಾಸಿ| ತ್ವಮೇವ ಕೇವಲ ಹರ್ತಾಸಿ||
ತ್ವಮೇವ ಸರ್ವ ಖಲ್ವಿದಂ ಭಹ್ಮಾಸಿ| ತ್ವಂ ಸಾಕ್ಷಾದಾತ್ಮಾಸಿ ನಿತ್ಯಂ ||೨||

**ಅರ್ಥ**- ಅಥರ್ವಣ ಋಷಿ ಹೇಳುತ್ತಾರೆ, ಹೇ ಓಂಕಾರ ಸ್ವರೂಪ ಶ್ರೀ ಗಣೇಶನೇ, ಬ್ರಹ್ಮಾದಿದೇವತೆಗಳಿಗೆ ನೀವು ಸ್ವಾಮಿಯಾಗಿದ್ದೀರಿ, ನಾನು ನಿಮಗೆ ನಮಸ್ಕರಿಸುವೆನು. ಹೇ, ಗಣಪತಿಯೇ ನೀವು ಸ್ವಯಂ ಬ್ರಹ್ಮತತ್ವ ಆಗಿದ್ದೀರಾ ವಿಶ್ವಕರ್ತನೂ ನೀವೇ. ಈ ಸೃಷ್ಟಿಯ ಪಾಲನ ಕರ್ತನೂ ನೀವೇ. ವಿಶವ ವ್ಯಾಪಕ ಬ್ರಹ್ಮನೂ ನೀವೇ ಅದೇ ಪ್ರಕಾರ ಅವಿನಾಶೀ ಆತ್ಮಸ್ವರೂಪನೂ ನೀನೇ ಆಗಿದ್ದೀರಾ.

ಋತ್ಮಂ ವಾಚ್ಮಿ| ಸತ್ಯಂ ವಾಚ್ಮಿ ||೨||

**✍ ಸಿ. ಆರ್. ಅನ್ನಪೂರ್ಣ**

**ಅರ್ಥ** - ನಾನು ಯಥಾರ್ಥ ಮತ್ತು ತ್ರಿಕಾಲ ಭಾದಿತ ಸತ್ಯವನ್ನೇ ಹೇಳುತ್ತಿದ್ದೇನೆ.

ಅವತ್ವಂ ಮಂ ಅವವಕ್ತಾರಂ| ಅವಶ್ರೋತಾರಂ ಅವ ದಂತಾರಂ||
ಅವಧಾತಾರಂ| ಅವನುಚಾನಮವ ಶಿಷ್ಯಂ| ಅವಪಸ್ಚಾತಾತ್ ||
ಅವಪುರಸ್ತಾತ್| ಅವ ಜೋ ರ್ಧ್ವಾತ್ರಾತ| ಅವಧರಾತ್ರಾತ||
ಸವಗತೆ ಮಾಂ ಪಾಹಿಪಾಹಿ ಸಮಂತಾತ್ ||೩||

**ಅರ್ಥ** - ಹೇ ಶ್ರೀ ಗಣೇಶನೇ ನೀವು ನನ್ನನ್ನು ರಕ್ಷಿಸಿರಿ. ನಿಮ್ಮ ರೂಪ ಮತ್ತು ನಿಮ್ಮ ಗುಣಗಳನ್ನು ವರ್ಣನೆ ಮಾಡುವ ಭಕ್ತರ ರಕ್ಷಣೆಯನ್ನು ಮಾಡಿರಿ. ನಿಮ್ಮ ಬಗ್ಗೆ ಜ್ಞಾನ ತುಂಬುವ ದಾತನ ರಕ್ಷಣೆ ಮಾಡಿರಿ. ಯಾರು ಧ್ಯಾನವನ್ನು ಧರಿಸುವರೋ ಅವರನ್ನು ರಕ್ಷಿಸಿರಿ. ವೇದಗಳನ್ನು ಅಧ್ಯಯನ ಮಾಡುವವರನ್ನು ರಕ್ಷಿಸಿರಿ. ನಿಮ್ಮ ಶಿಷ್ಯರನ್ನು ರಕ್ಷಿಸಿರಿ. ತಾವು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ನಾಲ್ಕು ದಿಕ್ಕಿನಿಂದಲೂ ನಮ್ಮ ರಕ್ಷಣೆ ಮಾಡಿರಿ. ತಾವು ಮೇಲಿಂದಲೂ ಕೆಳಗಿನಿಂದಲೂ ನಮ್ಮನ್ನು ರಕ್ಷಿಸಿರಿ. ಈ ಧರೆಯಲ್ಲಿ ಎಲ್ಲರ ರಕ್ಷಣೆ ಮಾಡಿರಿ.

ತ್ವವಾಂಗ್ ಮಯಸ್ತಂ ಚಿನ್ಮಯಃ | ತ್ವಮಾನಂದಮಯಸ್ತವಂ ಬ್ರಹ್ಮಮಯಃ||
ತ್ವಂ ಸಚ್ಚಿದಾನಂದ ದ್ವಿತೀಯೋಸಿ | ತ್ವಂ ಪ್ರತ್ಯಕ್ಷಂ ಬ್ರಹ್ಮಾಸಿ||
ತ್ವಂ ಜ್ಞಾನಮಯೋ ವಿಜ್ಞಾನಮಯೋಸಿ ||೪||

(ಮುಂದುವರಿಯುವುದು...)

## ....ಶ್ರೀರಂಗರ ನಾಟಕೋತ್ಸವ

ನಿರ್ದೇಶನದಲ್ಲಿ ಈ ತತ್ವ ನಿಚ್ಚಳವಾಗಿ ಮೂಡಿತು. ನಾಟಕದಲ್ಲಿ ಹಲವಾರು ಹೊಸ ನಟ ನಟಿಯರು ಮೂಡಿಬಂದರು.

ಶಕುಂತಲೆ–ದುಷ್ಯಂತರಾಗಿ, ಕುಮಾರಿ ಆರ್ಯಾ ಮತ್ತು ಕುಮಾರ ಆದಿತ್ಯ ಮುದ್ದಾಗಿ ನಟಿಸಿದರು. ಶ್ರೀಮತಿ ವೀಣಾ ಜೋಶಿಯವರ ನಟನೆ ಮೆಚ್ಚುವಂತಹದಾಗಿತ್ತು. ಶ್ರೀ ಶಶಿಕಾಂತ್ ಜೋಶಿ ಮತ್ತು ಹಿರಿಯ ನಟ ಶ್ರೀ ಮಂಜುನಾಥಯ್ಯನವರು ನಾಟಕದಲ್ಲಿ ಹೆಚ್ಚಿನ ಹೊಣೆಯನ್ನು ಹೊತ್ತಿದ್ದರು. ಶ್ರೀಮತಿ ಲಕ್ಷ್ಮಿ ಹಾಗೂ ಶ್ರೀ. ದಿನೇಶ್, ಮಲ್ಲಿ–ಮಾವನಾಗಿ ಚಿಕ್ಕ ಪಾತ್ರಗಳನ್ನು ಚೊಕ್ಕವಾಗಿ ಮೂಡಿಸಿದರು. ಶ್ರೀಮತಿ ವಿದ್ಯಾ ಐಯಂಗಾರ್, ಶ್ರೀ ಶೇಖರ್ ಪುಟ್ಟು, ಶ್ರೀ ನಂದಾ, ಕೆಳದಿಯ ಚಿಕ್ಕ ಚಿತ್ರವನ್ನು ಚೆನ್ನಾಗಿ ನಟಿಸಿದರು. ಶ್ರೀಮತಿ ಸುಧಾ ಶ್ರೀನಿವಾಸ್, ಶ್ರೀ ಗಿರೀಶ್ ಯುವತಿ–ಡ್ರೈವರ್ ಆಗಿ ಮನಸೆಳೆದರು. ಶ್ರೀಮತಿ ರೇಷ್ಮಾ ಹಾಗೂ ಗಣಪತಿ ಶಂಕರಲಿಂಗ್ ಹತಾಶರಾದ ಯುವಕ – ಯುವತಿಯರಾಗಿ ಅತ್ಯುತ್ತಮ ಅಭಿನಯವನ್ನು ಇತ್ತರು. ಆಮ್ ಆದ್ಮಿಯಾಗಿ ಶ್ರೀ. ವೆಂಕಟೇಶ್, ರಂಗನಾಥ ನಗುವಿನ ಹೊಳೆಯನ್ನು ಹರಿಸಿದರು.


ಕೇವಲ ಒಂದು ಘಂಟೆ, ಹತ್ತು ನಿಮಿಷದ ಅವಧಿಗೆ ಇಳಿಸಿದ ನಾಟಕ ಮೂಲ ನಾಟಕಕ್ಕಿಂತ ಪ್ರಭಾವಶಾಲಿಯಾಗಿತ್ತಂದರೆ ಅತಿಶಯೋಕ್ತಿಯಲ್ಲ. ಹಳೆಯ ನಾಟಕಗಳನ್ನು ಹೊಸತಾಗಿ ಮೂಡಿಸುವ ಹಲವಾರು ಪ್ರಯತ್ನಗಳಲ್ಲಿ, ಈ ಪ್ರಯತ್ನ ಗಮನ ಸೆಳೆಯಿತು. ■

## ಶ್ರೀ ಸಾಹಿತ್ಯ, ಸಾಮ್ರಾಜ್ಯ ನಾಟಕ ಮಂಡಳಿ ಬೆಂಗಳೂರು ಮತ್ತು ಮೈಸೂರು ಅಸೋಸಿಯೇಷನ್, ಮುಂಬೈ



**ಮುಂಬೈ ಕನ್ನಡ ರಂಗಭೂಮಿಗೆ ವಿಶಿಷ್ಟ ಸೇವೆ ಸಲ್ಲಿಸಿರುವ ಕಲಾವಿದರಿಗೆ**

## ಕರ್ನಾಟಕದ ಮಹಾನ್ ರಂಗ ಚೇತನಗಳ ನೆನಪಿನ ಪ್ರಶಸ್ತಿ ಪ್ರದಾನ ಸಮಾರಂಭ;



ಮುಖ್ಯ ಅತಿಥಿಗಳು : **ಶ್ರೀ ಶ್ರೀನಿವಾಸ್ ಜಿ. ಕಪ್ಪಣ್ಣ**
ಮಾಜಿ ಅಧ್ಯಕ್ಷರು ಕರ್ನಾಟಕ ನಾಟಕ ಅಕಾಡೆಮಿ

**ಶ್ರೀಮತಿ ಗಿರಿಜಾ ಲೋಕೇಶ್**
ಟ್ರಸ್ಟಿ, ಬ್ರಹ್ಮ ಚಾರಿಟೆಬಲ್ ಟ್ರಸ್ಟ್

**ಶ್ರೀ ಬಾ.ನ. ಸುಬ್ರಹ್ಮಣ್ಯ**
ಖ್ಯಾತ ಪತ್ರಕರ್ತ ಮತ್ತು ವಿಮರ್ಶಕರು

ಅಧ್ಯಕ್ಷತೆ : **ಶ್ರೀ ವ್ಯಾಸರಾವ್ ನಿಂಜೂರು**
ಖ್ಯಾತ ಸಾಹಿತಿಗಳು

ಸ್ಥಳ : ಮೈಸೂರು ಅಸೋಸಿಯೇಷನ್ ಸಭಾಗೃಹ, 39, ಭಾವುದಾಜಿ ರಸ್ತೆ, ಮಾತುಂಗ (ಪೂರ್ವ), ಮುಂಬೈ – 400 019

**18-05-2014, ಭಾನುವಾರ ಸಂಜೆ 5-00ಕ್ಕೆ**

**ದಯಮಾಡಿ ಬನ್ನಿ.**

| | |
|---|---|
| **ಡಾ॥ ವೈ.ಡಿ. ವೆಂಕಟೇಶ್** | **ವಿ. ರಾಮಭದ್ರ** |
| ಗೌರವ ಕಾರ್ಯದರ್ಶಿಗಳು | ಅಧ್ಯಕ್ಷರು |

### ಪ್ರಶಸ್ತಿ ಪ್ರದಾನ ಸಮಾರಂಭ

**ಶ್ರೀ ಎಂ. ವಿ. ಸುಬ್ಬಯ್ಯ ನಾಯ್ಡು ಪ್ರಶಸ್ತಿ**

ಪುರಸ್ಕೃತರು : **ಪ್ರೊ. ಕೇಶವ್ ಮುತಾಲಿಕ್**

ಶ್ರೀರಂಗರ ಸ್ಪಷ್ಟ ರಂಗಸ್ವರೂಪವನ್ನು ಮುಂಬೈನ ಕನ್ನಡಿಗರಿಗೆ ಉಣಬಡಿಸಿದ ಮುಂಬೈ ಕರ್ನಾಟಕ ಥಿಯೇಟರ್ಸ್‌ನ ಪ್ರಮುಖ ಕಲಾವಿದರಿಗೆ ಸಲ್ಲುವ ಗೌರವ

**ಶ್ರೀಮತಿ ಲಕ್ಷ್ಮಿಬಾಯಿ ಪ್ರಶಸ್ತಿ**

ಪುರಸ್ಕೃತರು : **ಶ್ರೀಮತಿ ಕಿಶೋರಿ ಬಲ್ಲಾಳ್**

ರಂಗಭೂಮಿ ಹಾಗೂ ಚಲನಚಿತ್ರಗಳಲ್ಲಿ ತಮ್ಮ ಸ್ಮರಣೀಯ ಅಭಿನಯದಿಂದ ಮುಂಬೈ ಮತ್ತು ಕನ್ನಡ ರಂಗಭೂಮಿಯ ಬೆಸುಗೆಯಾಗಿ ಶೋಭಿಸಿರುವ ಕಲಾವಿದೆ.

**ಶ್ರೀ ಲೋಕೇಶ್ ಪ್ರಶಸ್ತಿ ಪುರಸ್ಕೃತರು**

**ಶ್ರೀ ಸದಾನಂದ ಸುವರ್ಣ**

ತಮ್ಮ ಸೃಜನಾತ್ಮಕ ಸಾಂಸ್ಕೃತಿಕ ಚಳುವಳಿಯ ಕಾರಣದಿಂದಾಗಿ ರಂಗಭೂಮಿ ಹಾಗೂ ಚಲನ ಚಿತ್ರಗಳಿಗೆ ಹೊಸ ಆಯಾಮ ನೀಡಿದ ಪ್ರಗತಿಪರ ನಿರ್ದೇಶಕ, ಚಿಂತಕ ಮತ್ತು ಕಲಾವಿದ

* * *

ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು

ಸಾದರಪಡಿಸುವ

**ಸಾಂಸ್ಕೃತಿಕ ಕಾರ್ಯಕ್ರಮ**

**'ಮರೆಯಲಾಗದ ವೃತ್ತಿ ರಂಗಭೂಮಿ'**

**'ಸಂಯೋಜಿತ ನೃತ್ಯ'**

**ಶ್ರೀಮತಿ ಪೂಜಾ ಲೋಕೇಶ್** ಅವರಿಂದ

**ಹರಿಕಥೆ**

ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ. ನವದೆಹಲಿ ಪ್ರಶಸ್ತಿ ಪುರಸ್ಕೃತ

**ಡಾ. ಲಕ್ಷ್ಮಣ್‌ದಾಸ್, ತುಮಕೂರು** ಅವರಿಂದ

**ಕಥಾ ಕೀರ್ತನೆ**

"ನಟ ಮಾತ್ರರಲ್ಲ, ನಟ ರತ್ನಾಕರ ಶ್ರೀ ಸುಬ್ಬಯ್ಯನಾಯ್ಡು ಅವರು"

ಧಾರವಾಡದ ಖ್ಯಾತ ರಂಗಕರ್ಮಿ

ಶ್ರೀ ಎಮ್. ಎಸ್. ಕೊಟ್ರೇಶ್ ಮತ್ತು ಕಲಾವಿದೆ

ಶ್ರೀಮತಿ ಸುನಂದ, ಹೊಸಪೇಟೆ ಅವರಿಂದ

**'ನಾಗಲಿಂಗ ಲೀಲೆ' – ರಂಗದೃಶ್ಯಾವಳಿ**

ಖ್ಯಾತ ಮರಾಠಿ ವೃತ್ತಿರಂಗಭೂಮಿಯ ಕಲಾವಿದರಾದ

ಶ್ರೀ. ಅರವಿಂದ ಪಿಳಗಾಂವ್‌ಕರ್ ಅವರಿಂದ

**"ಮರಾಠಿ ನಾಟ್ಯ ಸಂಗೀತ"**

ವೃತ್ತಿ ರಂಗಭೂಮಿಯ ಶ್ರೇಷ್ಠ ಕಲಾವಿದೆಯರಲ್ಲಿ ಒಬ್ಬರಾದ

ಶ್ರೀಮತಿ ಪುಷ್ಪಮಾಲಾ ಅಣ್ಣಿಗೆರೆ, ಹುಬ್ಬಳ್ಳಿ ಅವರಿಂದ

ಕರ್ನಾಟಕದ ಷೇಕ್ಸ್‌ಪಿಯರ್ ಶ್ರೀ ಕಂದಗಲ್ ಹನುಮಂತರಾಯರ

**'ರಕ್ತ ರಾತ್ರಿ'** ನಾಟಕದ ಅಭಿನಯ 'ದ್ರೌಪದಿ' ಪಾತ್ರದಲ್ಲಿ

ರಂಗಭೂಮಿ ಹಾಗೂ ಧಾರವಾಹಿಗಳ ತಾರೆ

ಶ್ರೀಮತಿ ಜಯಲಕ್ಷ್ಮಿ ಪಾಟೀಲ್, ಹುಬ್ಬಳ್ಳಿ, ಅವರಿಂದ

ಶ್ರೀ ಪಿ. ಬಿ. ದುತ್ತರಗಿ ಅವರ 'ಸಿಂಧೂರ ಲಕ್ಷ್ಮಣ'

ನಾಟಕದ 'ತಾಯಿ' ಪಾತ್ರ ಅಭಿನಯ

ವಾದ್ಯ ಸಹಕಾರ :

| | |
|---|---|
| ಕೀ ಬೋರ್ಡ್ | : **ಶ್ರೀ ಮಹಂತೇಶ್** |
| ರಿದಂ ಪ್ಯಾಡ್ | : **ಶ್ರೀ ಗುರುರಾಜ ಎಮ್. ರಾಜೇಂದ್ರ** |

* * *

**ಅರ್ಪಣೆ :**

**ಬ್ರಹ್ಮ ಚಾರಿಟೆಬಲ್ ಟ್ರಸ್ಟ್**

**ಶ್ರೀಮತಿ ಗಿರಿಜಾ ಲೋಕೇಶ್**

ಲೋಕೇಶ್ ಅವರ ಪತ್ನಿ 300 ಚಲನ ಚಿತ್ರಗಳು - 200ಕ್ಕೂ ಮೀರಿದ ಧಾರವಾಹಿಗಳು - ಅಸಂಖ್ಯಾತ ಮತ್ತು ಅನೇಕ ಭಾಷೆಯ ನಾಟಕಗಳಲ್ಲಿ ಅಭಿನಯಿಸಿದ ರಾಜ್ಯ ಪ್ರಶಸ್ತಿ ಪುರಸ್ಕೃತ ಕಲಾವಿದೆ.

**ಶ್ರೀ ಸೃಜನ್ ಲೋಕೇಶ್**

ಲೋಕೇಶ್ ಅವರ ಮಗ, ನಟ, ನಿರ್ದೇಶಕ, 'ಲೋಕೇಶ್ ಪ್ರೊಡಕ್ಷನ್' ಮೂಲಕ ನಿರ್ಮಾಪಕ, ಕಿರುತೆರೆ ನಿರೂಪಕ. ಸಂಸ್ಕೃತಿಯ ಮೂಲಕ ಜನಸೇವೆ.

**ಪೂಜಾ ಲೋಕೇಶ್**

ಲೋಕೇಶ್ ಅವರ ಮಗಳು, ತಮಿಳು - ಕನ್ನಡ ಚಲನಚಿತ್ರ ಧಾರವಾಹಿಗಳಲ್ಲಿ ಅಭಿನಯ.

ತಮಿಳು ಚಿತ್ರರಂಗದಲ್ಲಿ ಬೇಡಿಕೆಯಲ್ಲಿರುವ 'ನೃತ್ಯ' ಕಲಾವಿದೆ

Date of Publication : 10th of every month RNI No. 040015 / 83
MH / MR / North East / 093 / 2012- 2014 Date of Posting : 10th of every month at Mumbai Patrika Channel Sorting Office G.P.O.

# SIR M VISVESVARAYA INSTITUTE OF MANAGEMENT STUDIES & RESEARCH



**Admission Open**
**2014-16 Batch**
2 Years Full Time Program

**Candidates with valid CET,CMAT, MAT, ATMA,CAT scores can apply for Kannada Minority (Kannada, Konkani, Tulu, Kodava) Seats**

Candidates who have not appeared for above exams can appear for ATMA Exam at our campus on 25th May, 2014.

ATMA Forms are available @ SVIMS till 17th May, 2014

## MMS

AICTE approved DTE-Code:MB3419


(Affiliated to University of Mumbai)

Masters in Management Studies

Marketing, Finance, HR, Operations

| | |
|---|---|
| Intake capacity - 120 Seats | Minority - 09 Seats |
| Through Cap - 99 Seats | Institute Level - 12 Seats |

FREE iPad mini for every STUDENT



Eligibility : Any Graduation with 50% Aggregate

Prospectus Cost - ₹ 500/- Application start date: 25th Apr 2014 End Date - 21st June 2014

### SVIMS Advantage

- Instructive Strategies use simulated environment, role plays & workshops
- Tests conducted by Assessment Center assesses students innate intelligence & their strengths, which create objective learning & career goals
- Learning techniques are designed to develop prior knowledge of students and integrate new knowledge using real life examples
- Workshop conducted using analytical tools like advanced excel, pivot tables, designed training modules, and using SPSS help create employability.
- Students are given real life scenarios and are required to solve problems & make decisions with inadequate information, in a classroom environment
- Our Library resources help students conduct real time research methodology on various topics

### We are Celebrating 75 Years of Service to Excellence in Education! We Offer...

- FREE Diploma in Entrepreneurship from India's No.1 Entrepreneurship Institute (EDI Ahmedabad)
- FREE Capital Market Course by Interconnected Stock Exchange
- FREE Certificate Course in Digital Marketing
- FREE Certificate Course in PACE-HR
- FREE Certificate Course in Wealth Management
- FREE Advanced Excel Training

**Optional International Immersion Program**

| | |
|---|---|
| World Class Infrastructure | Experienced Faculty |
| Exclusive Industry Interface | Excellent Placement Record |

Call Minal on 022-241 80 560 / 61 / 63 / 90

Website: www.svims.com

Fill up the application form & email it to svims3@gmail.com & register yourself













Centrally located : Five Minutes from Wadala, Matunga(CR), Kings circle & Dadar Stations

Address: NKES Campus, Near VJTI & ICT, Beside Indulal Bhuva Park, Wadala(West), Mumbai - 400 031.

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938